
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜಾವೇಜ್ ನೆನಪಿನ ಹಾಡು

ಮಾರ್ಚ್ 27, 2013 ಪುಟ 20 ರೂ. 14/-



ಬಿಡಿಎ ಹಗರಣ

ಕೆಂಪೇಗೌಡ ಬಡಾವಣೆ

1000 ಕೋಟಿ ಲೂಟಿ

ಅರ್ಕಾವತಿ ಬಡಾವಣೆ

270 ಎಕರೆ ಡೀಲ್!

ಸ್ಥಳೀಯ ಸಂಸ್ಥೆ ಚುನಾವಣೆ

'ಕೈ' ಕೆಸರಾಗದೆ ಬಾಯಿ ಮೊಸರು

266 ಕೋಟಿ TA-DA ನುಂಗಿದ ಚೆಡ್ಡಿಗಳು





ಜೈಲು ಹಾದಿಯಲ್ಲಿ ನಿರಾಣಿ



ನಾಯಕ'ನೋ ಕ್ಷತ್ರಿಯ'ನೋ?

ಗೂಳಿಹಟ್ಟಿ ಚಿತ್ತ–ಎತ್ತ?

ಲಂಕೇಶ್-78





ಅದ್ಭುತ ಯಶಸ್ಸಿನ ಖುಷಿ ಮತ್ತು ಅಳುಕು

ಮಾರ್ಚ್ 10 ನೇ ತಾರೀಖು ಭಾನುವಾರ ಶಿವಮೊಗ್ಗೆಯಲ್ಲಿ ನಡೆದ 'ಲಂಕೇಶ್ 78' ಕಾರ್ಯಕ್ರಮ ಸೂಪರ್ ಹಿಟ್.

ಇದು ನಮ್ಮ ತಂಡಕ್ಕೆ ಏಕಕಾಲದಲ್ಲಿ ಖುಷಿ ಮತ್ತು ಅಳುಕಿನ ಭಾವನೆ ಮೂಡಿಸಿದೆ.

ಖುಷಿ ಯಾಕೆಂದರೆ ನಾವು ನಿರೀಕ್ಷೆ ಮಾಡಿದ್ದಕ್ಕಿಂತಲೂ ಹೆಚ್ಚು ಜನ ಬಂದರು. ದಿನವಿಡೀ ರಿಲೇ ರನ್ನಿಂಗ್ ರೇಸ್‌ನಂತೆ ಒಂದಾದ ಮೇಲೊಂದರಂತೆ ನಡೆದ ಭಾಷಣಗಳನ್ನು ತಾಳ್ಮೆ- ಉತ್ಸಾಹದಿಂದ ಜನ ಆಲಿಸಿದರು. ಊಟ-ಟೀ ವಿಚಾರದಲ್ಲಿ ಆದ ಕೊಂಚ ಅನಾನುಕೂಲತೆಗಳನ್ನು ಹೊಟ್ಟೆಗೆ ಹಾಕಿಕೊಂಡು ಮರೆತರು. ನಲವತ್ತು ಸಾವಿರ ರೂಪಾಯಿಗಳಷ್ಟು ಪುಸ್ತಕಗಳನ್ನು ಕೊಂಡರು. ಜೆನ್ನಿಯವರ ತಂಡ ಮೈಸೂರಿನಿಂದ ಬಂದು ಹಾಡಿ ಸಭಿಕರಿಗೆ ಮುದ ನೀಡಿದರು. ಅನೇಕ ಮಂದಿ ಹಿತೈಷಿಗಳು-ಗೆಳೆಯರು ತಾವೇ ಮುಂದೆ ನಿಂತು ಇಡೀ ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡು ದುಡಿದರು. ನಾವು ನಿರೀಕ್ಷಿಸದೇ ಇದ್ದ ರೀತಿಯಲ್ಲಿ ಕಾರ್ಯಕ್ರಮದ ಅನೇಕ ಖರ್ಚುಗಳನ್ನು ಕೆಲವರು ತಾವೇ ಭರಿಸಿ ನಮ್ಮ ಹೊರೆಯನ್ನು ಹಗುರಗೊಳಿಸಿದರು.

ಸುದ್ದಿ ಮಾಧ್ಯಮಗಳಲ್ಲೂ ಈ ಕಾರ್ಯಕ್ರಮದ ಗೋಷ್ಠಿಗಳು ವರದಿಗಳಾದವು.

ಖುಷಿ ಪಡಲು ಇನ್ನೇನು ಬೇಕು ಹೇಳಿ?


'ಲಂಕೇಶ್' ವಾರಪತ್ರಿಕೆಯ ಓದುಗರು, ಪ್ರಗತಿಪರರು, ಜನಸಾಮಾನ್ಯರು ಹೀಗೆ ತೋರಿಸುವ ಬೆಂಬಲ, ಪ್ರೀತಿ ಕಾಳಜಿಗಳ ಬಗ್ಗೆ ಯೋಚಿಸಿದರೆ ಖುಷಿಯ ಭಾವನೆಯ ಬೆನ್ನ ಹಿಂದೆಯೇ ಕೊಂಚ ಅಳುಕೂ ಮೂಡಿದಂತಾಗುತ್ತದೆ. ಅಳುಕು ಯಾಕೆಂದರೆ ನಮ್ಮ ನಿರೀಕ್ಷೆ ಹಾಗೂ ಜನರ ಅಪೇಕ್ಷೆಗಳ ನಡುವಿನ ಅಂತರ ಕಂಡು.


ಶಿವಮೊಗ್ಗೆಯ ಅಂಬೇಡ್ಕರ್ ಭವನದ ಸಿಟ್ಟಿಂಗ್ ಕೆಪಾಸಿಟಿ 475+ 125 ಬಾಲ್ಕನಿ ಸೀಟ್‌ಗಳು. ಇಪ್ಪತ್ತು ನಿಮಿಷ ತಡವಾಗಿ ಶುರುವಾದರೂ ರೆಹಮತ್‌ರ ಉದ್ಘಾಟನಾ ಭಾಷಣ ಚಾಲೂ ಆಗುವಷ್ಟರಲ್ಲಿ ಇಡೀ ಸಭಾ ಭವನ ಜನರಿಂದ ತುಂಬಿ ಹೋಗಿತ್ತು. ಮುನ್ನೂರರಿಂದ ಮುನ್ನೈವತ್ತು ಸಭಿಕರನ್ನು ನಿರೀಕ್ಷಿಸಿದ್ದ ನಮ್ಮ ಬಳಗಕ್ಕೆ ಹಾಲ್ ತುಂಬಿದ ಮೇಲೂ ಜನ ನಿಂತು ಭಾಷಣ ಕೇಳುತ್ತಿದ್ದುದನ್ನು ನೋಡಿ ನಮ್ಮ ತಪ್ಪು ಅಂದಾಜಿನ ಬಗ್ಗೆ ಅಳುಕಾಗದಿದ್ದೀತೆ?


ಜನ ನಮ್ಮಿಂದ ಏನನ್ನು ನಿರೀಕ್ಷಿಸುತ್ತಿದ್ದಾರೋ ಆ ಮಟ್ಟಕ್ಕೆ ನಮ್ಮ ತಂ[illegible] ಪ್ರತಿಸ್ಪಂದಿಸುತ್ತಿದೆಯಾ? ನಮ್ಮ ಕೆಲಸ ತೃಪ್ತಿದಾಯಕವಾಗಿದೆಯಾ? ಎಂದ[illegible] ನಾವೇ ಪ್ರಶ್ನೆ ಹಾಕಿಕೊಂಡರೆ ಅತೃಪ್ತಿ ಎನಿಸುತ್ತದೆ. ನಮ್ಮ ತಂಡದ ಅಳುಕ[illegible] ಇದೇ ಕಾರಣ. ಜೊತೆಗೇನೆಂದರೆ ಈಗ ಕರ್ನಾಟಕದಲ್ಲಿ ನಮ್ಮ ತರದ ಮಾಧ್ಯ[illegible] ಸಂಸ್ಥೆಗಳು ಹಲವಾರಿವೆ. ಹಾಗಿದ್ದಾಗಲೂ 'ಲಂಕೇಶ್' ಬೇರೆಲ್ಲಕ್ಕಿಂತಾ ವಿಭಿ[illegible] ಅದರ ರಾಜಕೀಯ, ಸಾಮಾಜಿಕ ನಿಲುವುಗಳು ಜನಪರವಾಗಿದೆ ಎಂದ[illegible] ನಂಬಿ ಬೆಂಬಲಿಸುವ ಜನ ನಮ್ಮನ್ನು ಸದಾ ಎಚ್ಚರದಲ್ಲಿಡುತ್ತಿದ್ದಾರೆ.


ಆ ನಂಬಿಕೆಯನ್ನು ಉಳಿಸಿಕೊಳ್ಳುತ್ತಾ ಪೊರೆದು ಪೋಷಿಸು[illegible] ಹೊಣೆಗಾರಿಕೆಯೂ ನಮ್ಮದೇ ಅಲ್ಲವೆ? ಲಂಕೇಶ್-78 ರ ಕಾರ್ಯಕ್ರಮ[illegible] ಹಲವು ಫೋಟೋಗಳು ನಿಮ್ಮಗಾಗಿ ಇಲ್ಲಿವೆ...


● ಲಂಕೇಶ್ ಬಳ[illegible]











ಹುಟ್ಟು ಹಬ್ಬ, ವಾರ್ಷಿಕೋತ್ಸವ ಮತ್ತು ಒಗ್ಗಟ್ಟು



• ಗೌರಿ ಲಂಕೇಶ್
editorlankesh@gmail com


ಇವತ್ತು ಕರ್ನಾಟಕದಲ್ಲಿ ಹಲವಾರು ತರಹದ ಪ್ರಶ್ನೆಗಳು ...ರು ತರಹದ ಜನರನ್ನು ಕಾಡುತ್ತಿವೆ. ಕೆಲವರನ್ನು ...ದುನಿಯಾ ವಿಜಯ ಡೈವರ್ಸ್ ಕತೆ ಏನಾಯಿತು? ... ಗಾಂಧಿ ಸಿನಿಮಾಗಳಲ್ಲಿ ಒಂದೊಂದು ರೋಲ್ ...ದಷ್ಟು ಸಲೀಸಾಗಿ ರಾಜಕೀಯ ಪಕ್ಷಗಳನ್ನು ...ಯಿಸುತ್ತಿದ್ದಾರಲ್ಲ ಯಾಕೆ?" ತರಹದ ಪ್ರಶ್ನೆಗಳು ...ತ್ತಿದ್ದರೆ ಇನ್ನೊಂದು ತರಹದ ಜನರ ತಲೆಗಳನ್ನು ...ರೀತಿಯ ಪ್ರಶ್ನೆಗಳು ತಿನ್ನುತ್ತಿವೆ. "ನಮ್ಮ ಜಾತಿಗೆ ...ಾನ ಬೇಕು. ಇಲ್ಲದೆ ಇದ್ದರೆ ಹೇಗೆ? ಯಾರು ...ಲ್ಲ ಹೇಳಿ. ನಮ್ಮವನು ಸಿಕ್ಕಿಹಾಕಿಕೊಂಡಿದ್ದೇ ತಪ್ಪಾ? ... ದುಡ್ಡು ಮಾಡೋದೇ ಮುಖ್ಯ, ಬೇರೆಯೆಲ್ಲಾ ..., ಏನಂತೀರಾ?" ಎಂಬಂತಹ ಪ್ರಶ್ನೆಗಳವು.

...ಂಥವರ ಮಧ್ಯೆ ಇವತ್ತು ನಾವು ನೀವು ಇದ್ದೇವೆ. ...ಮ್ಮ ಈ ಪ್ರೀತಿಯ ರಾಜ್ಯಕ್ಕೆ ಏನಾಗುತ್ತಿದೆ? ಯಾಕೆ ...ಲ್ಲ ಆಗುತ್ತಿದೆ? ಜಾತ್ಯತೀತರ, ಸೌಹಾರ್ದಪ್ರಿಯರ, ...ರ, ಭಾರತದಾದ್ಯಂತ ಮರ್ಯಾದೆ ಪಡೆಯುತ್ತಿದ್ದ ... ನಾಡಾಗಿದ್ದ ನಮ್ಮ ಕರ್ನಾಟಕ ಯಾಕೆ ಇವತ್ತು ..., ಕಾಮುಕ, ಜಾತಿವಾದಿ, ಕೋಮುವಾದಿ, ...ಷ್ಟರನ್ನು ತಮ್ಮ ನಾಯಕರನ್ನಾಗಿ ಆಯ್ಕೆ ಮಾಡುತ್ತಿದೆ? ...ಲ್ಲ ಸರಿಪಡಿಸುವುದು ಹೇಗೆ? ಇಂತಹ ಪ್ರಶ್ನೆಗಳು ...ಮ್ಮನ್ನೆಲ್ಲ ಸದಾ ಕಾಡುತ್ತಿರುತ್ತವೆ, ಕೆಣಕುತ್ತಿರುತ್ತವೆ, ...ಗಳನ್ನು ಕಂಡುಕೊಳ್ಳಲು ಪ್ರಚೋದಿಸುತ್ತಿರುತ್ತವೆ. ಈ ...ಕ್ಕೆ ಇವತ್ತು ನಾವೆಲ್ಲ ಇಲ್ಲಿ ...ದ್ದೇವೆ. ಅದೂ ಪಿ.ಲಂಕೇಶರ 78ನೇ ...ಟ್ಟ ಹಬ್ಬದ ಸಂದರ್ಭದಲ್ಲಿ.

...ಎಲ್ಲರಿಗೂ ಗೊತ್ತಿರುವಂತೆ ...ಶರು ಈ ರಾಜ್ಯದ ಬಗ್ಗೆ ಅಪಾರ ... ಉಳ್ಳವರಾಗಿದ್ದರು. ಭ್ರಷ್ಟರ ಬಗ್ಗೆ ...ವಲ್ಲ, ಇಲ್ಲಿನ ಸೋಮಾರಿಗಳ ...ೂ ಅವರು ಕೆಂಡಕಾರುತ್ತಿದ್ದರು. ...ಾಯಕರಿಗೆ ಅನ್ಯಾಯವಾದಾಗ ...ುತ್ತಿದ್ದರು. ಜಾತಿವಾದಿಗಳನ್ನು ಮತ್ತು ...ಮುವಾದಿಗಳನ್ನು ತರಾಟೆಗೆ ...ಕೊಳ್ಳುತ್ತಿದ್ದರು. ತಪ್ಪು ದಾರಿ ಹಿಡಿದ ಸಾಹಿತಿಗಳನ್ನು ...ುತ್ತಿದ್ದರು. ಇಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ..., ಸಾಹಿತ್ಯಿಕ ಕ್ಷೇತ್ರಗಳ ಮೇಲೆ ಸದಾ ಹದ್ದಿನ ...ರುತ್ತಿದ್ದರು. ಒಂದು ರೀತಿಯಲ್ಲಿ ಅವರು ಎಲ್ಲರನ್ನು ...ವ 'ಗಾರ್ಡಿಯನ್' ತರಹ ಇದ್ದರು. ಯಾಕೆ ಅವರಿಗೆ ...ಲ್ಲಾ ಮಾಡುವ ಅಗತ್ಯವಿತ್ತು? ಅದಕ್ಕೆ ಉತ್ತರವಾಗಿ ... ಒಂದು ಸಂದರ್ಶನದಲ್ಲಿ ಹೇಳಿದ ಮಾತು. ಹೀಗಿದೆ. ...ರು ನನಗೆ ಅದೆಷ್ಟು ಪ್ರೀತಿಯನ್ನು ಕೊಟ್ಟಿದ್ದಾರೆಂದರೆ, ... ಅದೆಷ್ಟು ವಿಶ್ವಾಸವನ್ನು ಇಟ್ಟಿದ್ದಾರೆಂದರೆ ನಾನು ...ಗೆ ಎಷ್ಟು ಒಳ್ಳೆಯದನ್ನು ಮಾಡಿದರೂ ಕೂಡ ಅದು ...ು ಎನಿಸುತ್ತದೆ. ಆ ದೃಷ್ಟಿಯಿಂದ ನಾನು ಈಗ ...ದರು ಮಾಡಿದರೆ, ಏನನ್ನಾದರು ಬರೆದರೆ ಅದರಿಂದ ಜನರಿಗೆ ಅನುಕೂಲ ಆಗಬೇಕೆಂದು ನಾನು ತಿಳಿದುಕೊಂಡಿದ್ದೇನೆ."

ನಿಸ್ಸಂದೇಹವಾಗಿ ಈ ರಾಜ್ಯ ಕಂಡಿರುವ ಅತ್ಯುತ್ತಮ ವ್ಯಕ್ತಿಗಳಲ್ಲಿ ಲಂಕೇಶ್ ಕೂಡ ಒಬ್ಬರು. ಅವರ ವ್ಯಕ್ತಿತ್ವವನ್ನು ರೂಪಿಸಿದ್ದು ಇದೇ ಶಿವಮೊಗ್ಗ ಜಿಲ್ಲೆ. ನಾನು ಕಳೆದ ವಾರಪತ್ರಿಕೆಯಲ್ಲಿ ಬರೆದಂತೆ ಇಲ್ಲಿಗೆ ಹದಿನೈದು ಕಿಲೋಮೀಟರ್ ದೂರದಲ್ಲಿರುವ ಅವರ ಹುಟ್ಟೂರು ಕೊನಗವಳ್ಳಿ, ಶಿವಮೊಗ್ಗೆಯಲ್ಲಿರುವ ಶಾಲೆ, ಕಾಲೇಜು, ಲೈಬ್ರರಿ, ಇಲ್ಲಿ ಜನ್ಮವೆತ್ತ ಚಳವಳಿಗಳು, ಚಿಂತನೆ, ಪ್ರಬಲವಾಗಿದ್ದ ಸಮಾಜವಾದಿ ಸಿದ್ಧಾಂತ, ಇಲ್ಲಿನ ಸಾಹಿತಿಗಳು ಸೃಷ್ಟಿಸಿದ ಸಾಹಿತ್ಯ ಪರಿಸರ, ಭಾಷೆ... ಇವೆಲ್ಲವೂ ಲಂಕೇಶರ ಆಳದಲ್ಲಿದ್ದ ತಳಮಳ ಮತ್ತು ಆಕಾಂಕ್ಷೆ, ಭಯ ಮತ್ತು ಭಂಡತನ, ಹಿಂಜರಿಕೆ ಮತ್ತು ಧೈರ್ಯದೊಂದಿಗೆ ಜೊತೆಗೂಡಿ ಸೃಷ್ಟಿಸಿದ್ದು ಲಂಕೇಶ್ ಎಂಬ ಸಾಹಿತಿ ಮತ್ತು ಪತ್ರಕರ್ತರನ್ನು.

ಇದೆಲ್ಲದರಿಂದಾಗಿ ಸಹಜವಾಗಿಯೇ ಲಂಕೇಶರಲ್ಲಿ ಶಿವಮೊಗ್ಗೆಯ ಬಗ್ಗೆ ಹೆಚ್ಚಿನ ಪ್ರೀತಿ ಮತ್ತು ಕಾಳಜಿ ಇತ್ತು, ಅವರು ಶಿವಮೊಗ್ಗೆ, ಹೊನ್ನಾಳಿ, ಭದ್ರಾವತಿ, ಶಿಕಾರಿಪುರ, ತೀರ್ಥಹಳ್ಳಿ ಕಡೆಯ ಜನರನ್ನು ತನ್ನ ಒಡಹುಟ್ಟಿದವರು ಎಂದೇ ಭಾವಿಸಿದ್ದರು. ಆದರೆ ಇವತ್ತು ಶಿವಮೊಗ್ಗೆ, ಹೊನ್ನಾಳಿ, ಶಿಕಾರಿಪುರವನ್ನು ಎಂಥವರು ಪ್ರತಿನಿಧಿಸುತ್ತಿದ್ದಾರೆ ಎಂದು ನೋಡಿದ್ದರೆ ಲಂಕೇಶರಿಗೆ ಹಾರ್ಟ್ ಅಟ್ಯಾಕ್ ಆಗುತ್ತಿತ್ತು, ಪ್ರಾಯಶಃ ಅವರ ಹುಟ್ಟು ಜಿಲ್ಲೆಯಾದ ಶಿವಮೊಗ್ಗೆಯಲ್ಲಿ ಇವತ್ತು ಅವರಿಗೆ ಒಂದಿಷ್ಟು ನೆಮ್ಮದಿ ನೀಡುತ್ತಿದ್ದದ್ದು ತೀರ್ಥಹಳ್ಳಿಯನ್ನು ಪ್ರತಿನಿಧಿಸುತ್ತಿರುವ ಕಿಮ್ಮನೆ ರತ್ನಾಕರ ಅವರು ಮಾತ್ರ.



ಲಂಕೇಶರ ವ್ಯಕ್ತಿತ್ವ ಎಂತಹದ್ದೆಂದರೆ ಅವರು ಶಿವಮೊಗ್ಗ ಶಿಕಾರಿಪುರ ಮತ್ತು ಹೊನ್ನಾಳಿಯ ಜನಪ್ರತಿನಿಧಿಗಳನ್ನು ವಿಮರ್ಶೆ, ಟೀಕೆ ಮತ್ತು ಖಂಡನೆಗೆ ಒಳಪಡಿಸುತ್ತಿದ್ದರೇ ಹೊರತು ಅಂಥವರನ್ನು ಗೆಲ್ಲಿಸಿದ್ದ ತಮ್ಮ ಒಡಹುಟ್ಟಿದ ಸಾಮಾನ್ಯ ಜನರನ್ನಲ್ಲ. ಬದಲಾಗಿ ಜನ ಎಲ್ಲೋ ತಪ್ಪು ಮಾಡಿದ್ದಾರೆ, ಸಂದರ್ಭವನ್ನು ಅರ್ಥಮಾಡಿಕೊಳ್ಳುವಲ್ಲಿ ಎಡವಿದ್ದಾರೆ ಎಂದೇ ಭಾವಿಸಿ "ನೋಡಿ ಪರಿಸ್ಥಿತಿ ಹೀಗಿದೆ. ಈ ಜನ ಇಂತಹವರು" ಎಂದು ಸಾಮಾನ್ಯ ಜನರನ್ನು ಎಚ್ಚರಿಸಲು ಪ್ರಯತ್ನಿಸುತ್ತಿದ್ದರು. ಹಾಗೆ ಮಾಡುವುದು ತನ್ನ ಕರ್ತವ್ಯ ಎಂದೇ ಲಂಕೇಶರು ತಿಳಿದಿದ್ದರು.

ಅಂತಹ ಲಂಕೇಶರು ಇವತ್ತು ನಮ್ಮೊಂದಿಗಿಲ್ಲ, ಆದರೆ ಅವರಂತೆ ಈ ರಾಜ್ಯದ ಬಗ್ಗೆ ಕಾಳಜಿ ಹೊಂದಿರುವ, ಸಮಾನ ಸಮಾಜದ ಕನಸು ಹೊತ್ತಿರುವ, ಅನ್ಯಾಯ, ಭ್ರಷ್ಟಾಚಾರ, ಕೋಮುವಾದಗಳನ್ನು ತೀವ್ರವಾಗಿ ವಿರೋಧಿಸುವ ನಾವೆಲ್ಲ ಇದ್ದೇವೆ. ನಮ್ಮ ಕೈಲಾದಷ್ಟರ ಮಟ್ಟಿಗೆ ಲಂಕೇಶರು ಆಶಿಸಿದ್ದ ಕರ್ನಾಟಕಕ್ಕೆ ಶ್ರಮಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಕಳೆದ ಎಂಟು ವರ್ಷಗಳಿಂದ ನಮ್ಮ 'ಲಂಕೇಶ್' ವಾರಪತ್ರಿಕೆಯ ತಂಡ ಇದನ್ನೇ ಮಾಡುತ್ತಾ ಬಂದಿದೆ. ನಮ್ಮ ಈ ಯತ್ನದಲ್ಲಿ ನಮ್ಮ ಸಂಸ್ಥೆಯ 'ಗೈಡ್' ಮಾಸಿಕ, 'ಗೈಡ್ ಪ್ರಕಾಶನ', 'ಜಾಬ್ ನ್ಯೂಸ್' ಪಾಕ್ಷಿಕಗಳು ನಮಗೆ ವಿವಿಧ ಬಗೆಯಲ್ಲಿ ನೆರವು ನೀಡುತ್ತಿವೆ. ಇದೆಲ್ಲದರ ಜೊತೆಗೆ ನಮ್ಮ ಸಂಸ್ಥೆಯ 'ಲಂಕೇಶ್ ಪ್ರಕಾಶನ' ಕೂಡ ಸಾಹಿತ್ಯಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಅರಿವನ್ನು ವೃದ್ಧಿಸುತ್ತಾ ಸಾಗಿದೆ. ನಮ್ಮ ತಂಡದ ಈ ಎಲ್ಲಾ ಪ್ರಯೋಗ ಮತ್ತು ಪ್ರಯತ್ನಗಳನ್ನು ನಮ್ಮ ರಾಜ್ಯದ ಪ್ರಗತಿಪರರು ಬೆಂಬಲಿಸುತ್ತಾ ಬಂದಿದ್ದಾರೆ. ಅವರೆಲ್ಲರಿಗೂ ನಮ್ಮ ತಂಡದ ಪರವಾಗಿ ಧನ್ಯವಾದಗಳು.

ನಮ್ಮ ಪತ್ರಿಕೆಗೆ ರಾಜ್ಯದಾದ್ಯಂತ ಓದುಗರಿದ್ದಾರೆ. ಆದರೂ ನಾವು ನಮ್ಮ ವಾರ್ಷಿಕ ಸಮಾರಂಭವನ್ನು ರಾಜಧಾನಿ ಬೆಂಗಳೂರಿನಲ್ಲಿ ಆಚರಿಸುತ್ತಿದ್ದೆವು. ಆದರೆ ಕಳೆದ ವರ್ಷದಿಂದ ಪತ್ರಿಕೆಯ ಈ ಸಮಾರಂಭವನ್ನು ರಾಜ್ಯದ ಇತರೆ ಕಡೆ ಆಚರಿಸಬೇಕೆಂದೂ, ಆ ಮೂಲಕ ವಿವಿಧ ಕಡೆ ಇರುವ ಪತ್ರಿಕೆಯ ಓದುಗರೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಳ್ಳಬಹುದೆಂದೂ ಯೋಚಿಸಿದೆವು. ಆ ಕಾರಣಕ್ಕೆ ಹೋದ ವರ್ಷ ಮಂಗಳೂರಿನಲ್ಲಿ ಮತ್ತು ಈ ವರ್ಷ ಶಿವಮೊಗ್ಗೆಯಲ್ಲಿ ಇದನ್ನು ಆಯೋಜಿಸಿದ್ದೇವೆ.

ಮೊದಲೇ ಹೇಳಿದಂತೆ ಶಿವಮೊಗ್ಗೆ ಲಂಕೇಶರ ಹುಟ್ಟು ಜಿಲ್ಲೆ, ಒಡಹುಟ್ಟಿದವರ ಜಿಲ್ಲೆ, ಆದರೆ ಈ ಜಿಲ್ಲೆ ಯಾಕೆ ಸಮಾಜವಾದದಿಂದ ಕೋಮುವಾದದತ್ತ ಮುಖ ಮಾಡಿದ್ದು ಎಂದು ನೋಡುವ ಜರೂರತ್ತು ಇದೆ. ಯಾಕೆಂದರೆ ಇವತ್ತು ಕರ್ನಾಟಕವನ್ನು ಕಾಡುತ್ತಿರುವ ಹಲವಾರು ರೋಗಗಳಿಗೆ ಮತ್ತು ಭವಿಷ್ಯದಲ್ಲಿ ಸಿಗಬಹುದಾದ ಪರಿಹಾರಕ್ಕೆ ಈ ಜಿಲ್ಲೆ ಸಾಂಕೇತಿಕವಾಗಿದೆ. ಹಿಂದೊಮ್ಮೆ ಗೋಪಾಲ ಗೌಡರಂತಹ ಸಮಾಜವಾದಿಗಳಿಗೆ ಜನ್ಮ ನೀಡಿದ ಗರ್ಭವಾಗಿದ್ದ ಶಿವಮೊಗ್ಗೆ ಇವತ್ತು ಹೊಡಿ, ಬಡಿ, ಕಡಿ ಸಂಸ್ಕೃತಿಯ ರಾಜಕೀಯಕ್ಕೆ, ರೇಪಿಸ್ಟರು, ವ್ಯಭಿಚಾರಿಗಳು, ಅವಕಾಶವಾದಿಗಳು ನಾಯಕರಾಗುತ್ತಿರುವ, ಜಾತಿವಾದವನ್ನು ಮತ್ತು ಕೋಮುವಾದವನ್ನು ಬೆಂಬಲಿಸುವವರ ನೆಲೆಯಾಗಿದೆ. ಇದೆಲ್ಲವನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಇವತ್ತಿನ ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ಇವತ್ತಿನ ಸಮಾರಂಭ ಲಂಕೇಶರ ಹುಟ್ಟುಹಬ್ಬ ಮಾತ್ರವಲ್ಲ, ನಮ್ಮ ಸಂಸ್ಥೆಯ ವಾರ್ಷಿಕೋತ್ಸವ ಮಾತ್ರವಲ್ಲ, ಬದಲಾಗಿ ಇದೆಲ್ಲದರ ಜೊತೆಗೆ ಜನಪರ, ಜೀವಪರ, ಜಾತ್ಯತೀತಪರ ಶಕ್ತಿಗಳ ಒಗ್ಗಟ್ಟಿನ ಸಮಾರಂಭ ಎಂದೇ ಭಾವಿಸಿದ್ದೇನೆ.

ಇವತ್ತಿನ ಸಮಾರಂಭ ಕುವೆಂಪು, ಗೋಪಾಲಗೌಡ, ಅಪ್ಪಣ್ಣ ಹೆಗ್ಡೆ ಮತ್ತು ಲಂಕೇಶ್ ಅವರು ಕನಸು ಕಂಡಿದ್ದ ಸಮಾಜಕ್ಕೆ, ರಾಜ್ಯಕ್ಕೆ, ಸಿದ್ಧಾಂತಕ್ಕೆ ಹೋರಾಡುವ ಶಕ್ತಿ ಮತ್ತು ಸ್ಫೂರ್ತಿ ನೀಡುವಂತಾಗಲಿ ಎಂದು ಆಶಿಸುತ್ತೇನೆ.

ಈ ಕಾರ್ಯಕ್ರಮವನ್ನು ಆಯೋಜಿಸಲು ನೆರವು ನೀಡಿದ ಲಂಕೇಶರ ಅಭಿಮಾನಿಗಳಿಗೆ, ಮಿತ್ರರಿಗೆ, ಶಿವಮೊಗ್ಗೆಯ ಜನರಿಗೆ ಧನ್ಯವಾದಗಳು.

(ಮಾರ್ಚ್ 10, 2013ರಂದು ಶಿವಮೊಗ್ಗೆಯಲ್ಲಿ ನಡೆದ 'ಲಂಕೇಶ್ 78' ಕಾರ್ಯಕ್ರಮದ ಉದ್ಘಾಟನಾ ಸಭೆಯಲ್ಲಿ ನಾನು ಮಾಡಿದ ಭಾಷಣ ಇದು.)

'ಲಂಕೇಶ್' ಜಾತ್ರೆ

ನಮ್ಮೂರ ಕಡೆ ವರ್ಷಕ್ಕೊಮ್ಮೆ ವಿವಿಧ ದೇವರುಗಳ ಉತ್ಸವ, ಕುಸ್ತಿ ...ಡಿಗಾಡಿ ಸ್ಪರ್ಧೆ ನಡೆಯುತ್ತವೆ. ಅದಕ್ಕೆ ನಾವು ಜಾತ್ರೆ ಅಂತ ಕರಿತೀವಿ. ...ಷ್ಟು ಜನ ಸೇರ್ತಾರೆ.

...ೊನ್ನೆ ಮಾರ್ಚ್ 10ರಂದು ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ ... ರೀತಿಯ ಜಾತ್ರೆ ನಡೆಯಿತು. ನನ್ನ ಊಹೆಗೂ ಮೀರಿದ ಜನಸ್ತೋಮ ... ಸೇರಿತ್ತು.

...ಖ್ಯಾತ ಅಂಕಣಕಾರ ಬಿ.ಚಂದ್ರೇಗೌಡರ ಪ್ರಸ್ತಾವನೆ ಎಷ್ಟು ಬೇಕೋ ಅಷ್ಟಿತ್ತು. ...ಶರೊಂದಿಗೆ ಅತ್ಯಂತ ನಿಕಟ ಸಂಬಂಧ ಇಟ್ಟುಕೊಂಡಿದ್ದ ಗೌಡರು ಪತ್ರಿಕೆ, ...ಶ್ ಬಗ್ಗೆ ತುಂಬಾ ಚೆನ್ನಾಗಿ ಮಾತನಾಡಿದರು. ಹಂಪಿ ವಿಶ್ವವಿದ್ಯಾಲಯದ ...ಹಮತ್ ತರೀಕೆರೆ ಈಗಿನ ತಲ್ಲಣಗಳನ್ನು ಅರ್ಥಪೂರ್ಣವಾಗಿ ವಿವರಿಸಿದರು. ... ಬಿಡುಗಡೆ ಮಾಡಿದ ಅಜ್ಜ ಕಡಿದಾಳು ಶಾಮಣ್ಣ ಕಾರ್ಯಕ್ರಮಕ್ಕೊಂದು ...ಟಿ ತಂದರು. ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಿದ ಶಾಮಣ್ಣ ...ವನ್ನು 'ಸ್ಲೇಟ್' ತರಹ ಹಿಡಿಯದೆ ಹೆಗಲ ಮೇಲೆ ಪ್ರದರ್ಶಿಸುವ ...ಲಕ ಹೊಸ ಭಂಗಿಯನ್ನು ಪರಿಚಯಿಸಿದ್ದು ವಿಶೇಷವಾಗಿತ್ತು.

...ಾಜಕಾರಣಿಗಳ ಹಿಂದಿನಲ್ಲಿ ಭಿನ್ನವಾಗಿ ಕಾಣುವ ಶಾಸಕ ಕಿಮ್ಮನೆ ರತ್ನಾಕರ್ "... ನನ್ನನ್ನು ಮದುವೆಗೆ ಯಾಕೆ ಬರಲಿಲ್ಲ, ಮುಂಜಿಗೆ ಯಾಕೆ ಬರಲಿಲ್ಲ, ...ಕರಣ, ಆರತಕ್ಷತೆಗೆ ಯಾಕೆ ಬರಲಿಲ್ಲ ಎಂದು ಕೇಳುತ್ತಾರೆಯೇ ಹೊರತು ...ವಾಗಿ ಯಾವ ಜನಪರ ಶಾಸನವನ್ನು ತಂದೆ ಎಂದು ಕೇಳುವುದಿಲ್ಲ, ...ಾದರೂ ನಮ್ಮೂರಿಗೆ ಏನೇನು ಮಾಡಿದ್ದೀರಿ ಎಂದು ಕೇಳುವುದಿಲ್ಲ" ... ನೋವಿನಿಂದ ಹೇಳಿದರು. ಇದು ವಾಸ್ತವ ಕೂಡಾ. ಅದಕ್ಕೆ ಈ ...ಾರಣಿ ನನಗೆ ಇಷ್ಟವಾದರು. ಲಂಕೇಶ್ ಇಂತಹವರನ್ನು ಇಷ್ಟಪಡುತ್ತಿದ್ದರು. ...ಪತ್ರಿಕೆ ಬಳಗದ ಪಾರ್ವತೀಶ ಮಲೆನಾಡಿನಲ್ಲಿ ಸಮಾಜವಾದಿಗಳ ಮತ್ತು ...ಬಿಸ್ಕರ ಪಾತ್ರದ ಬಗ್ಗೆ ವಿವರವಾಗಿ ಮಂಡಿಸಿದರು. ಆರ್ಥಿಕ ಬಿಕ್ಕಟ್ಟು ಬಗ್ಗೆ ಕೆ.ಎಲ್. ಅಶೋಕ್, ಪ್ರಸ್ತುತ ರಾಜಕೀಯ ಸ್ಥಿತ್ಯಂತರ ಬಗ್ಗೆ ಬಿ.ಎಂ.ಪುಟ್ಟಯ್ಯ ಮಾತುಗಳು ತೂಕವ್ರೋ ತೂಕ. ಸಮಕಾಲೀನ ಕರ್ನಾಟಕ ರಾಜಕೀಯ ಸ್ಥಿತ್ಯಂತರಗಳ ಬಗ್ಗೆ ಡಾ.ವಾಸು ಎಷ್ಟೊಂದು ಅರ್ಥಗರ್ಭಿತವಾಗಿ ಮಾತನಾಡಿದರು. ಅವರು ಓದಿದ್ದು ವೈದ್ಯಕೀಯವಾದರೂ ಯೋಚನೆಗಳು ಸಮಾಜ ಚಿಂತನೆ ಬಗ್ಗೆ.

ಸಾಹಿತ್ಯ ಸಂಸ್ಕೃತಿ ಬಗ್ಗೆ ಕೆ.ಫಣಿರಾಜ್ ಎಂದಿನಂತೆ ಆಕ್ರೋಶಭರಿತವಾಗಿ ಮಾತನಾಡಿದರು. ಬಿಜೆಪಿ ಸರ್ಕಾರದ ದುರಾಡಳಿತ, ಮಿತಿಮೀರಿದ ಆಸ್ತಿ ಕಬಳಿಕೆ, ಸ್ವಜನಪಕ್ಷಪಾತಗಳ ಬಗ್ಗೆ ಬಂಜಗೆರೆ ಜಯಪ್ರಕಾಶ್ ಮಾತುಗಳು ಚಿನ್ನಕ್ಕಿಟ್ಟ ಕಲಶದಂತಿದ್ದವು.

ಲಂಕೇಶ್ ಸಾಹಿತ್ಯದ ಪ್ರಸ್ತುತತೆಯ ಬಗ್ಗೆ ಜಿ. ರಾಜಶೇಖರ ಮಾತನಾಡಿ, ಲಂಕೇಶರು ಈಗ ಇದ್ದಿದ್ದರೆ ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದರು ಎಂದು ಪ್ರಶ್ನಿಸಿ, ಲಂಕೇಶ್ ಜೀವಂತ ಇದ್ದಾರೆ ಎನ್ನುವುದನ್ನು ಮನದಟ್ಟು ಮಾಡಿದರು.

ಸಾಗರದ ಹಿರಿಯ ಜೀವಿ ನಾ.ಡಿಸೋಜರಂತೂ ಪತ್ರಿಕೆ ತನ್ನನ್ನು ಹೇಗೆ ಬೆಳೆಸಿತು ಎಂದು ಹೇಳಿದರು. ಅವತ್ತು ಸಂಜೆ ನಡೆದ ಜೆನ್ನಿ ತಂಡದವರ ಸಂಗೀತ ಕಾರ್ಯಕ್ರಮ ಅದ್ಭುತವಾಗಿತ್ತು, ಜೆನ್ನಿಯ ಕಂಚಿನ ಕಂಠ, ರಾಗ ಆಯ್ಕೆ ಮಾಡಿಕೊಂಡ ಹಾಡುಗಳು. . . ಮತ್ತೆ ಮತ್ತೆ ಕೇಳಬೇಕೆನಿಸುತ್ತಿತ್ತು.

ಲಂಕೇಶರ ಖ್ಯಾತ 'ಅವ್ವ' ಕವನಕ್ಕೆ ಸಂಗೀತ ಸಂಯೋಜನ ಮಾಡಿ ಅದನ್ನು ಹಾಡಿದಾಗ ಎಲ್ಲರ ಕಣ್ಣಲ್ಲೂ ಕಣ್ಣೀರು. ಜೆನ್ನಿ ಲಂಕೇಶರನ್ನು, ಅವ್ವನನ್ನು ನೆನಪಿಸಿಕೊಂಡು ನಮ್ಮನ್ನು ಅಳಿಸಿದ. ಜೆನ್ನಿಗೆ ವಿಶೇಷ ಅಭಿನಂದನೆಗಳು.

ಇಂದಿರಾ ಅಮ್ಮ ನಾಲ್ಕು ಮಾತಾಡಬೇಕಿತ್ತು. ಶಿವಸುಂದರ್‌ಗೆ ಮಾತಾಡಲು ಅವಕಾಶ ಕೊಡಬೇಕಿತ್ತು.

ಮಾರನೇ ದಿನ ಶಿವಮೊಗ್ಗೆಯ ಎಲ್ಲಾ ಪತ್ರಿಕೆಗಳಲ್ಲಿ ಲಂಕೇಶ್ ಜಾತ್ರೆಯದೇ ಸುದ್ದಿ, ನಿಮ್ಮ ಸಿದ್ಧಾಂತವನ್ನು ಅಪಾರವಾಗಿ ವಿರೋಧಿಸುವ ಚಿಡ್ಡಿ ಪತ್ರಿಕೆಯೂ ಸಖತ್ ಸುದ್ದಿ ಮಾಡಿತು. ಆದರೆ ಶೂದ್ರರ ಪತ್ರಿಕೆಯೊಂದು ಈ ಕಾರ್ಯಕ್ರಮದ ಬಗ್ಗೆ ಏನೊಂದು ವರದಿ ಮಾಡಲಿಲ್ಲ.

ಲಂಕೇಶ್ ಜಾತ್ರೆ ಹೀಗೆ ಪ್ರತಿ ವರ್ಷ ನಡೆಯುತ್ತಲೇ ಇರಲಿ.

-ಶೂದ್ರ ಸಂತೋಷ್, ಅಜ್ಜಂಪುರ

ಶಿವಮೊಗ್ಗದಲ್ಲಿ ಮಾರ್ಚ್ 10ರಂದು ನಡೆದ 'ಲಂಕೇಶ್ 78' ಕಾರ್ಯಕ್ರಮ ಅರ್ಥಪೂರ್ಣವಾಗಿತ್ತು. ಬೆಳಗಿನ ಉದ್ಘಾಟನಾ ಕಾರ್ಯಕ್ರಮದಿಂದ ಹಿಡಿದು ಸಮಾರೋಪದವರೆಗೂ, ಅಷ್ಟೇ ಏಕೆ ಸಂಜೆ ಜೆನ್ನಿ ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮದಲ್ಲೂ, ಲಂಕೇಶರ ಬರವಣಿಗೆಯ ಜೀವದ್ರವ್ಯ ಮತ್ತೆ ಮತ್ತೆ ಜನಮನವನ್ನು ತುಂಬಿತು.

12ನೇ ಶತಮಾನದಲ್ಲಿ ರಾಜಮಾರ್ಗದಲ್ಲಿದ್ದ ಸಾಹಿತ್ಯವನ್ನು ಜನಮಾರ್ಗಕ್ಕೆ ತಂದು, ಜಾತಿ ಮತ ವರ್ಗಭೇದವಿಲ್ಲದೆ ಎಲ್ಲಾ ವರ್ಗದ ಎಲ್ಲಾ ಜಾತಿಯ ಜನರನ್ನು - ಅಲ್ಲಿಯವರೆಗೆ ನಿರ್ಲಕ್ಷಕ್ಕೆ ಒಳಗಾಗಿದ್ದ ಮಹಿಳೆಯರನ್ನೂ - ಅನುಭವಮಂಟಪಕ್ಕೆ ಬರುವಂತೆ ಮಾಡಿ ತಮ್ಮ ತಮ್ಮ ಸಂವೇದಗಳನ್ನು ಮುಕ್ತವಾಗಿ ಅಭಿವ್ಯಕ್ತಪಡಿಸುವ ಅವಕಾಶವನ್ನು ಬಸವಣ್ಣ ಕೊಟ್ಟ ಹಾಗೆ ಲಂಕೇಶ್ ಕೂಡ ತಮ್ಮ ಪತ್ರಿಕೆಯಲ್ಲಿ ಎಲ್ಲಾ ವರ್ಗದ, ಎಲ್ಲಾ ಜಾತಿಯ ಬರಹಗಾರರಿಗೆ, ವಿಶೇಷವಾಗಿ ಮಹಿಳೆಯರಿಗೆ ಅವಕಾಶ ನೀಡಿ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟ ಆಧುನಿಕ ಬಸವಣ್ಣ ಎಂದರೆ ತಪ್ಪಾಗಲಾರದು.

ಇಡೀ ದಿನ ನಡೆದ ಎಲ್ಲಾ ಗೋಷ್ಠಿಗಳಲ್ಲಿ ಮಾತನಾಡಿದ ಚಿಂತಕರೆಲ್ಲರೂ 'ಈಗ ಲಂಕೇಶ್ ಇದ್ದಿದ್ದರೆ ತಮ್ಮನ್ನು ಕಾಡುವ ಪ್ರಶ್ನೆಗಳಿಗೆ ಉತ್ತರವಾಗುತ್ತಿದ್ದರು' ಎಂದು ಹಂಬಲಿಸಿದ್ದು ಲಂಕೇಶರ ವ್ಯಕ್ತಿತ್ವವನ್ನು ಅನಾವರಣಗೊಳಿಸಿದಂತಿತ್ತು. ಆದರೆ ನನಗೆ ಮಾತ್ರ ಲಂಕೇಶ್ ಗತಿಸಿಲ್ಲ, ಅವರು ಇಂದಿಗೂ ಬದುಕಿದ್ದಾರೆ, ಅನೇಕರ ಮನಗಳಲ್ಲಿ-ಕೃತಿಗಳಲ್ಲಿ-ಚಿಂತನೆಗಳಲ್ಲಿ ಜೀವಂತವಾಗಿದ್ದಾರೆ ಅನ್ನಿಸಿತು.


ಬದುಕನ್ನು ವಿಶಿಷ್ಟ ಗ್ರಹಿಕೆಯ ಮೂಲಕ ನೋಡುವ ಲಂಕೇಶ್ ಭ್ರಷ್ಟ ಸರ್ಕಾರಗಳಿಗೆ, ಭ್ರಷ್ಟ ರಾಜಕಾರಣಿಗಳಿಗೆ, ಹುಸಿ ಡಾಂಬಿಕ ಬರಹಗಾರರಿಗೆ ಸಿಂಹಸ್ವಪ್ನವಾಗಿದ್ದರಲ್ಲದೆ ಸಜ್ಜನರ ಬದುಕು ಹಸನಾಗಬೇಕು ಎಂದು ಹಂಬಲಿಸಿದವರು.

ತಮ್ಮೆಲ್ಲ ಬರವಣಿಗೆಗಳಲ್ಲಿ ಜನ ಮತ್ತು ಬದುಕು ಹೇಗಿರಬೇಕು, ಹೇಗಿದ್ದರೆ ಚೆಂದ ಎಂಬುದನ್ನು ಒತ್ತಿ ಹೇಳಿದ್ದಾರೆ. ಹಾಗಾಗಿ ಲಂಕೇಶ್ ಇಂದಿಗೂ ಬದುಕಿದ್ದಾರೆ ಎಂಬುದು ನನ್ನ ಅಭಿಪ್ರಾಯ. ಈ ಮಾತಿಗೆ ಅಂದು ಕಾರ್ಯಕ್ರಮಕ್ಕೆ ಸೇರಿದ ಲಂಕೇಶ್ ಅಭಿಮಾನಿಗಳ ಸಂಖ್ಯೆಯೇ ಸಾಕ್ಷಿ.

-ಹಾ. ಚನ್ನಬಸಪ್ಪ, ಪ್ರಿನ್ಸಿಪಾಲರು,
ಅಂತರಗಟ್ಟೆ, ಕಡೂರು ತಾಲೂಕು

ಪಾರ್ಕನ್ನೂ ಬಿಡದೆ ಲೂಟಿಗೈದ ಹೊಸ ಹಗರಣ

ಉದ್ಯಮಿ ಆಲಂ ಪಾಷಾಗೆ ವಂಚನೆ ನಿರಾಣಿಗೆ ಜೈಲು ಗ್ಯಾರಂಟಿ




ಇನ್ನು ಹೆಚ್ಚೆಂದರೆ ಮೂರೋ ನಾಲ್ಕೋ ದಿನಗಳಷ್ಟೇ ಬಾಕಿ. ಭಾರೀ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ರಾಜ್ಯಪಾಲರ ಅಂಕಿತ ಬಿತ್ತೆಂದರೆ, ಅಲ್ಲಿಗೆ ಬಿಜೆಪಿಯ ಮತ್ತೊಬ್ಬ ಮಂತ್ರಿಯ ಜೈಲು ಯಾನಕ್ಕೆ ಗ್ರೀನ್ ಸಿಗ್ನಲ್ ಬಿದ್ದಂತೆಯೇ.

ನಿರಾಣಿ ಜೈಲು ಪಾಲಾಗುವ ಎಲ್ಲ ಲಕ್ಷಣಗಳೂ ನಿಕ್ಕಿಯಾಗಿವೆ. ಮೊನ್ನೆ ಮಾರ್ಚ್ 1 ರಂದು ಲೋಕಾಯುಕ್ತದ ನಗರ ಪೊಲೀಸ್ ಇನ್ಸ್‌ಪೆಕ್ಟರ್ ಕೆ. ಅಂಜನ್‌ಕುಮಾರ್ ನ್ಯಾಯಮೂರ್ತಿ ಸುಧೀಂದ್ರರಾವ್‌ರ ಲೋಕಾಯುಕ್ತ ನ್ಯಾಯಾಲಯಕ್ಕೆ ಸಲ್ಲಿಸಿದ ಅಂತಿಮ ತನಿಖಾ ವರದಿಯ ಪ್ರಕಾರ ಮಂತ್ರಿ ನಿರಾಣಿ ಫೋರ್ಜರಿ ಮಾಡಿರುವುದು, ತನ್ನ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೈಗಾರಿಕೋದ್ಯಮಿ ಆಲಂ ಪಾಷಾರ 26 ಎಕರೆ ಭೂಮಿ ವಂಚಿಸಿರುವುದು, ಹಾಗೆ ವಂಚಿಸಿದ ಭೂಮಿಯನ್ನು ತನ್ನ ಬೇನಾಮಿಗಳಿಗೆ ಮಂಜೂರು ಮಾಡುವ ಮೂಲಕ ಸ್ವಜನ ಪಕ್ಷಪಾತ ಎಸಗಿರುವುದು ಮತ್ತು ಲಂಚ ನಿರೋಧ ಕಾಯ್ದೆ ರೀತ್ಯ ಅಪರಾಧವೆಸಗಿದ್ದು ಸಾಬೀತಾಗಿದೆ!

ಲೋಕಾ ಪೊಲೀಸರು ನಡೆಸಿದ ತನಿಖೆ ಮತ್ತು ಸಲ್ಲಿಸಿದ ಅಂತಿಮ ತನಿಖಾ ವರದಿಯನ್ನು ಸ್ವೀಕರಿಸಿದ ನ್ಯಾಮೂ. ಸುಧೀಂದ್ರ ರಾವ್ ಅವರ ಕೋರ್ಟು ನಿರಾಣಿ ವಿರುದ್ಧ ಕ್ರಿಮಿನಲ್ ಖಟ್ಲೆಗೆ ರಾಜ್ಯಪಾಲರ ಅನುಮತಿ ಕೋರಿದೆ. ಹೆಚ್ಚೆಂದರೆ ಇನ್ನು ಒಂದು ವಾರವಷ್ಟೇ ಬಾಕಿ. ರಾಜ್ಯಪಾಲ ಹಂಸರಾಜ್ ಭಾರದ್ವಾಜ್‌ರ ಅಂಕಿತ ಬಿತ್ತೆಂದರೆ ಅಲ್ಲಿಗೆ ನಿರಾಣಿ ಜೈಲು ಪಾಲಾಗುವುದು ಶತಸ್ಸಿದ್ಧ.

ಮೊದಲು ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾ ಹೇಗೆ ರೈತರ ಬಾಳಿಗೆ ಚಟ್ಟಾ ಆಗಿ ಜೈಲು ಪಾಲಾದನೋ ಅದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ಕೈಗಾರಿಕೋದ್ಯಮಿಗಳನ್ನು ವಂಚಿಸಿ ರಿಯಲ್ ಎಸ್ಟೇಟ್ ಲೂಟಿಗಿಳಿದವನು ನಿರಾಣಿ. ಇಂದಿರಾನಗರದ ಆಲಂ ಪಾಷಾ ಎಂಬ ಕೈಗಾರಿಕೋದ್ಯಮಿಗೆ ಮಂಜೂರಾಗಿದ್ದ 26 ಎಕರೆ ಭೂಮಿಯನ್ನು ನಿರಾಣಿ ಮಂತ್ರಿಯಾಗಿ ವಂಚಿಸಿದ್ದು ಅದಕ್ಕೆ ತಾನೇ ನಿಂತು ಫೋರ್ಜರಿ ಮಾಡಿಸಿದ್ದು ಲೋಕಾಯುಕ್ತ ತನಿಖೆಯಿಂದ ಸಾಬೀತಾಗಿದೆ. ಅದರ ವಿವರಣೆಯೇ ಲೋಕಾಯುಕ್ತ ಪೊಲೀಸ್ ಎಸ್.ಪಿ. ಶಿವರಾಮರೆಡ್ಡಿ ಮತ್ತು ಇನ್ಸ್‌ಪೆಕ್ಟರ್ ಅಂಜನ್‌ಕುಮಾರ್‌ರ ದಿಟ್ಟತನವನ್ನು ಸಾರಿಹೇಳುತ್ತದೆ:




ಆಲಂ ಪಾಷಾ ಮತ್ತು 26 ಎಕರೆ

ಇಂದಿರಾನಗರ ಉದ್ಯಮಿ ಆಲಂ ಪಾಷಾ-ತನಗಾದ ಅನ್ಯಾಯದ ವಿರುದ್ಧ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು ಆ ನಂತರ ನೇರವಾಗಿ ಕೋರ್ಟ್ ಮೋರೆ ಹೊಕ್ಕಿದ್ದು ಈಗಾಗಲೇ ಸುದ್ದಿಯಾಗಿದೆ. ವಿಶೇಷವೆಂದರೆ ಈ ಪ್ರಕರಣದಲ್ಲಿ ನಿರಾಣಿ ಮೊದಲ ಆರೋಪಿಯಾದರೆ ಆತನ ರಾಜಕೀಯ ಧಣಿ ಯಡ್ಡಿ 2ನೇ ಆರೋಪಿ. ಹಿರಿಯ ಐಎಎಸ್ ಅಧಿಕಾರಿ ವಿ.ಪಿ. ಬಳಿಗಾರ್ ಮತ್ತು ಆವತ್ತು ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕೆಎಎಸ್ ಅಧಿಕಾರಿ ಕೆ.ಎಸ್. ಶಿವಸ್ವಾಮಿ ಕ್ರಮವಾಗಿ 3 ಮತ್ತು 4ನೇ ಆರೋಪಿಗಳು.

ಪ್ರತಿವರ್ಷ ಕೋಟಿಗಟ್ಟಲೇ ಖರ್ಚು ಮಾಡಿ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಅಂದರೆ ವಿಶ್ವ ಹೂಡಿಕೆದಾರರ ಸಮ್ಮೇಳನವನ್ನು ನಡೆಸುವ ಕರ್ನಾಟಕ ಸರ್ಕಾರದ ಕಪಟ ನಾಟಕದ ಹಿಂದೆ ಏನೆಲ್ಲಾ ವಂಚನೆ, ಲೂಟಿಯಿರುತ್ತದೆ ಎಂಬುದಕ್ಕೆ ಈ ಪ್ರಕರಣವೊಂದೇ ಸಾಕು.

2010 ರಲ್ಲಿ ನಡೆದ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನಲ್ಲಿ ಭಾಗವಹಿಸಿದ್ದ ಉದ್ಯಮಿ ಆಲಂ ಪಾಷಾ ತಮ್ಮ 'ಪಾಷ ಸ್ಪೇಸ್ ಇಂಟರ್‌ನಾಷನಲ್ ಪ್ರೈ. ಲಿ' ಕಂಪನಿ ವತಿಯಿಂದ 500 ಮಂದಿಗೆ ಉದ್ಯೋಗಾವಕಾಶದ 'Value Homes for Middle and Lower Income Group' ಎಂಬ ಪ್ರಾಜೆಕ್ಟ್ ಒಂದಕ್ಕೆ ಅರ್ಜಿ ಸಲ್ಲಿಸುತ್ತಾರೆ. ಇದು ನಿರಾಣಿ ಅಧ್ಯಕ್ಷತೆಯ ಆಗ




ಕರ್ನಾಟಕ ಲೋಕಾಯುಕ್ತ

ನಗರ ವಿಭಾಗ, ಬೆಂಗಳೂರು.
ಮೊ.ಸಂ. 48/2012
ಕಲಂ. 418, 465, 471 ಜೊತೆಗೆ 120 (ಬಿ) ಐ.ಪಿ.ಸಿ ಮತ್ತು 15 ಜೊತೆ 13(1)(ಡಿ) ಪಿ.ಸಿ. ಆಕ್ಟ್-1988
A. ALAM PASHA : ACR: 025/2012
ಅಂತಿಮ ತನಿಖಾ ವರದಿ

ತನಿಖಾಧಿಕಾರಿಗಳು	ಆರೋಪಿತರುಗಳು
ಶ್ರೀ. ಅಂಜನ್ ಕುಮಾರ್.ಕೆ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ನಗರ ವಿಭಾಗ, ಬೆಂಗಳೂರು.	1) ಶ್ರೀ.ಮುರುಗೇಶ್ ಆರ್ ನಿರಾಣಿ, ಭಾರಿ ಹಾಗೂ ಮಧ್ಯಮ ಕೈಗಾರಿಕೆ ಸಚಿವರು, ಕರ್ನಾಟಕ ಸರ್ಕಾರ. 2) ಶ್ರೀ.ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳು, 3) ಶ್ರೀ.ವಿ.ಪಿ.ಬಳಿಗಾರ್, ಐ.ಎ.ಎಸ್., ಹಿಂದಿನ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು. 4) ಶ್ರೀ. ಕೆ.ಎಸ್.ಶಿವಸ್ವಾಮಿ, ಹಿಂದಿನ ವ್ಯವಸ್ಥಾಪಕರು, ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು. ಹಾಲಿ ವ್ಯವಸ್ಥಾಪಕ ನಿರ್ದೇಶಕರು, ಎ.ಐ.ಟಿ.ಸಿ., ಬೆಂಗಳೂರು.

ಲೋಕಾಯುಕ್ತರ ತನಿಖಾ ವರದಿ



PASH SPACE INTERNATIONAL PVT. LTD.
Incorporated under the Indian companies act 19[illegible]
Regd. Office : #135, I Stage, 10th Cross, INDIRANAGAR, BANGALORE - 560 038. INDIA
080-25274971 Tel/Fax : 080-25256878 E-mail : pash_space@yahoo.com

20th January 2011.

To:
The Managing Director,
Karnataka Udyoga Mithra,
Race Course Road,
Khanija Bhavan,
Bangalore.

Sir,

REF: GC No:CI 365 SPI 2010 dated 15.07.2010.

With reference to the above subject, we hereby inform you that we are not interested to continue with the proposed project proposal for Value Homes at Devanahally.

Please cancel the allotment and oblige.


Thanking you,

Yours faithfully,
For Pash Space International Pvt.,Ltd.
Managing Director
A. Alam Pasha

CERTIFIED TRUE COPY
Managing Director
Karnataka Udyog Mitra

Project:
Sy. No. 41/18, (P) 124/1,2,3,5&6 (P), Chikkanagaru & Doddanagaru, Begur Hobli, Bangalore South Tk.
Sy. No. 34/2, Dosegounapalli Village, Yeppanapalli, 635 121 T.N.

ಆಲಂ ಪಾಷಾ ಹೆಸರಲ್ಲಿ ನಕಲಿ ದಾಖಲೆ



:: 2 ::

In view of the above, 10 industrial units had been allotted 10.85 acres of land after obtaining approval from the competent authority during the period from 2000 to 2004 as indicated in the statement appended as Annexure-1. Further, an extent of 3.95 acres of land was also allotted in favour of 3 units for CA purposes, out of the balance 11-62 acres of "Park area" as indicated in the statement appended as Annexure-2. In the remaining 7-67 acres of "Park area", an extent of 1-82 acres is utilized for water supply facilities, such as, over-head tank, sump, pump house etc., and at present the "Park area" is only 5-85 acres.


The Hon'ble Minister for Medium & Large Scale Industries has directed on 30-10-2008 to reserve 5-85 acres of "Park area" for Civic Amenities purpose. In this connection, a proposal was placed before the Board in its meeting held on 19-12-2008 and after detailed discussions, the Board decided to obtain the approval of the Govt. for the same. An extract of the proceedings of the Meeting is appended as Annexure-3

The State Level Single Window Clearance Committee had approved the following projects and recommended to KIADB for allotment of land as detailed below:

Name of the company	Nature of industry	Date of SLSWCC meeting	Extent recommended (In acres)
M/s. Hariveda IT Parks Pvt. Ltd.,	Shopping mall, Multiplex & Multi-level car parking.	26-6-2009 & 31-7-2009	3.00
M/s. Kappa Technology India Pvt. Ltd.	IT Park	26-6-2009 & 31-7-2009	2.85
		TOTAL	5.85

The Govt. in C&I Dept. was requested on 25-9-2009 to accord approval for earmarking the balance 5-85 acres of "Park area" as Civic Amenity area and also for allotting land in favour of M/s. Hariveda IT Parks Pvt. Ltd., and M/s. Kappa Technology India Pvt. Ltd., as recommended by the SLSWCC. Accordingly, the Govt. in its letter No. CI 469 /SPQ/ 2009 dated 25-11-2009 directed KIADB to allot 3-00 acres of land in favour of M/s. Hariveda IT Parks Pvt. Ltd., and 2-85 acres of land to M/s. Kappa Technology India Pvt. Ltd. by levying 10% extra on the prevailing allotment rate of ₹. 2.00 crores per acre. A copy of the letter is appended as Annexure-4.

ನಿರಾಣಿಯ ಲೂಟಿಗೆ ಬಲಿಯಾದ ಪಾರ್ಕ್ ದಾಖಲೆ



Purpose	322nd Board Meeting
Date	2-3-2013
Time	11-00 am
Venue	ARI Guest House
Proposed/Prepared by	General Manager
Approved for placing by	CEO&EM

SUBJECT NO: 3

FILE No. 18463

Request of M/s. Hariveda IT Parks Pvt. Ltd. for restoration of allotment of 3 acres of land in Plot No.120-D (Park Area) of EPIP Area, II Phase, Whitefield, Bangalore
-o0o-

An extent of 554-20 acres of land was acquired in Hoodi Village, Bengaluru East Taluk for development of Export Promotion Industrial Park. Out of this, the allottable area of 459.76 acres had been allotted to 123 units. An extent of 22.47 acres of land was earmarked as "Park", while approving the layout plan and cost structure of EPIP Area I Phase on 20-1-1996.

The financial position of KIADB from the year 1996-97 onwards was bleak, resulting in huge borrowings from Nationalised Banks and also borrowings by way of debentures thereby the interest obligation on account of borrowings was also on the higher side. The then CEO&EM, during his inspection of EPIP area in 1998, opined that large extent of land admeasuring 22.47 acres earmarked as "Park area" was not desirable in view of demand for plots in EPIP Area and felt that the Board could generate additional revenue by allotting industrial plots at the then high allotment price of Rs.40.00 lakhs per acre fixed in EPIP Area. As such, it was suggested to allot industrial plots by reducing the "Park Area" by 50% of 22.47 acres.

The details of loans availed and interest paid during the period from 1996-97 to 2003-04 are as below:

Sl. No.	Year	Loan outstanding at the end of the year (Rs. in Lakhs)	Interest paid (Rs. in Lakhs)
1	1996-97	4800.00	39.50
2	1997-98	5010.00	73.69
3	1998-99	7068.28	1070.93
4	1999-00	5894.00	1236.25
5	2000-01	13054.00	2119.38
6	2001-02	8325.75	1684.78
7	2002-03	2870.75	1019.28

ಕೆಐಎಡಿಬಿಯ ನಿರ್ಣಯದ ಪ್ರತಿ

100 ಕೋಟಿ ಭೂಕಬಳಿಕೆಯ ಮತ್ತೊಂದು ಹಗರಣ!

ಸದ್ಯ ವೈಟ್‌ಫೀಲ್ಡ್‌ನ ಐಟಿಪಿಎಲ್ ಸುತ್ತಮುತ್ತಲ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ಅಬ್ಬರ ಯಾವ ಮಟ್ಟಕ್ಕಿದೆಯೆಂದರೆ ಅಲ್ಲಿ ಎಕರೆಯೊಂದಕ್ಕೆ ಕನಿಷ್ಠ 20 ಕೋಟಿಯಿಂದ 30 ಕೋಟಿಯ ಮಾರ್ಕೆಟ್ ರೇಟಿದೆ.

ಇಂಥಾದ್ದರಲ್ಲಿ ಕೆಐಎಡಿಬಿಯ 5.85 ಎಕರೆಯ ಪಾರ್ಕ್ ಪ್ರದೇಶವನ್ನು ಎಕರೆಗೆ ತಲಾ ಎರಡು ಕೋಟಿಯಂತೆ ನಿರಾಣಿ ಮಂಜೂರು ಮಾಡುತ್ತಾನೆಂದರೆ ಅದರ ಕಮಿಷನ್ ಇನ್ನೆಷ್ಟಿರಬೇಡ?

ಇದೇ 2013 ರ ಮಾರ್ಚ್ 2 ರಂದು ನಡೆದ ಕೆಐಎಡಿಬಿಯ 322 ನೇ ಬೋರ್ಡ್ ಮೀಟಿಂಗ್‌ನಲ್ಲಿ ವಿಚಿತ್ರ ಪ್ರಸ್ತಾವನೆಯೊಂದನ್ನು ಸಿಇಓ ದ್ಯಾಬೇರಿ ಮತ್ತು ಜನರಲ್ ಮ್ಯಾನೇಜರ್ ಅಶೋಕ್ ಮನವಿ ಮಂಡಿಸುತ್ತಾರೆ. ಅದೇನೆಂದರೆ ಪ್ರತಿಷ್ಠಿತ ವೈಟ್ ಫೀಲ್ಡ್‌ನ ಐಟಿಪಿಎಲ್ ಎದುರಿಗಿರುವ ಇಪಿಐಪಿ ಪ್ರದೇಶದ ಪ್ಲಾಟ್ ನಂ. 120 ಡಿಯಲ್ಲಿರುವ 5.85 ಎಕರೆ ವಿಸ್ತೀರ್ಣದ ಪಾರ್ಕ್ ಪ್ರದೇಶವನ್ನು ಎರಡು ನಕಲಿ ಐಟಿ ಕಂಪೆನಿಗಳಿಗೆ ಮಂಜೂರು ಮಾಡುವುದು.

ಈ ರೀತಿ ಅಳಿದುಳಿದ ಉದ್ಯಾನವನದ ಭೂಮಿಯನ್ನು ಹೊಡೆದ ಕಂಪೆನಿಗಳಾವುವೆಂದು ಕೆದಕಿದರೆ ಅದು ಹರಿವೇದ ಐಟಿ ಪಾರ್ಕ್ ಪ್ರೈ ಲಿ. ಮತ್ತು ಕಪ್ಪಾ ಟೆಕ್ನಾಲಜಿ ಇಂಡಿಯಾ ಲಿ. ಎಂಬ ಹೆಸರಿಲ್ಲದ, ಬೋರ್ಡಿಲ್ಲ, ಕಚೇರಿ, ಸಿಬ್ಬಂದಿ, ವ್ಯವಹಾರ, ವಹಿವಾಟು ಏನೊಂದೂ ಇಲ್ಲದ ಎರಡು ನಕಲಿ ಕಂಪನಿಗಳು. ಈ ಪೈಕಿ ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ಕಂಪನಿಗೆಂದು ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶದ 2 ನೇ ಹಂತದ ಇಪಿಐಪಿ ಏರಿಯಾದಲ್ಲಿ 3 ಎಕರೆಯನ್ನೂ, ಕಪ್ಪಾ ಟೆಕ್ನಾಲಜಿಗೆಂದು ಉಳಿಕೆ 2.85 ಎಕರೆಯನ್ನೂ ಮಂಜೂರು ಮಾಡಿದ್ದು ನಿರಾಣಿ. ನಿರಾಣಿಯ ಆದೇಶವನ್ನು ಯಥಾವತ್ತಾಗಿ ಪಾಲಿಸಲು ಕೆಐಎಡಿಬಿಯ ಅಧಿಕಾರಿಗಳು ಬಲಿಕೊಟ್ಟಿದ್ದು ಸಾರ್ವಜನಿಕ ಉದ್ದೇಶಕ್ಕೆಂದು ಮೀಸಲಿಟ್ಟ ಪಾರ್ಕ್ ಪ್ರದೇಶವನ್ನು!

ಹೋಗಲಿ ಮಾರುಕಟ್ಟೆ ದರಕ್ಕಾದರೂ ಮಾರಿಕೊಂಡಿದ್ದರೆ ಕನಿಷ್ಠ ಕೆಐಎಡಿಬಿಯ ಬೊಕ್ಕಸ ತುಂಬುತ್ತಿತ್ತು. ಆದರೆ ಕೆಐಎಡಿಬಿ ಆರ್ಥಿಕವಾಗಿ ಸಂಕಷ್ಟದಲ್ಲಿದೆಯೆಂದು, ಅದರ ಸಾಲದ ಹೊರೆ ಇಳಿಸಲೆಂದು, ಸಾರ್ವಜನಿಕರಿಗೆ ಮೀಸಲಿಟ್ಟ ಉದ್ಯಾನವನದ ಜಾಗ ಮಾರಲೇಬೇಕಾದ ದುಸ್ಥಿತಿಯಿದೆಯೆಂದು ಕೆಐಎಡಿಬಿ ಆ ಜಮೀನನ್ನು ಮಾರುತ್ತಿರುವುದು ಯಾವ ರೇಟಿಗೆ?


ಮಾರುಕಟ್ಟೆಯಲ್ಲಿ ಎಕರೆಗೆ 15 ರಿಂದ 30 ಕೋಟಿ ಮೌಲ್ಯವಿರುವ ಜಮೀನನ್ನು ಕೇವಲ 2 ಕೋಟಿಗೆ ಮಾರಿಕೊಳ್ಳುವ ಮೂರ್ಖತನದ ಹಿಂದೆ ನಿರಾಣಿ ಮತ್ತು ಆತನ ಸಕಲ ಶೋಕಿಗಳ ಸಾಥಿ ಮಹಾಬಳ ಶೆಟ್ಟಿ ಎಂಬುವವರೇ ಈ ಹಗಲು ದರೋಡೆಯ ಸೂತ್ರಧಾರರು.


ಬೆಂಗಳೂರು ಪೂರ್ವ ತಾಲ್ಲೂಕು ಹೂಡಿ-ಸೊನ್ನೇನಹಳ್ಳಿ ಗ್ರಾಮಗಳಲ್ಲಿ ಇಪಿಐಪಿ ಕೈಗಾರಿಕಾ ಪ್ರದೇಶಕ್ಕೆಂದು ವಶಪಡಿಸಿಕೊಂಡ 554 ಎಕರೆ ಕೃಷಿ ಭೂಮಿಯಲ್ಲಿ 459 ಎಕರೆಗಳನ್ನು ಅಭಿವೃದ್ಧಿ ಪಡಿಸಿ ಅದನ್ನು 102 ಘಟಕಗಳಿಗೆ ಹಂಚಿದ ನಂತರ 22.47 ಎಕರೆಗಳಷ್ಟು ಉದ್ಯಾನಕ್ಕೆಂದು ಮೀಸಲಿಟ್ಟ ಜಮೀನಿತ್ತು. ಕೈಗಾರಿಕಾ ಪ್ರದೇಶವೊಂದರ ಮಧ್ಯೆ ಪಾರ್ಕ್ ಇರಲೇಬೇಕೆಂಬ ನಿಯಮವಿದ್ದಾಗ್ಯೂ ಆಗಾಗ ಬಂದ ಸರ್ಕಾರಗಳು ಈ ಪಾರ್ಕನ್ನು ಬಿಡದೆ ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿಕೊಂಡ ನಂತರ ಅವಶೇಷವೆಂಬಂತೆ 5.85 ಎಕರೆಯಷ್ಟೇ ಮಿಕ್ಕಿತ್ತು.


ಓರ್ವ ಕೈಗಾರಿಕಾ ಮಂತ್ರಿಯಾಗಿ ಕನಿಷ್ಠ ಈ ಪಾರ್ಕನ್ನಾದರೂ ನಿರಾಣಿ ಉಳಿಸಬಹುದಿತ್ತು. ಆದರೆ ನಿರಾಣಿಯದ್ದು ಹುಟ್ಟು ಮನೆಹಾಳ ಬುದ್ಧಿ. ಇದಕ್ಕೆಂದೇ ತನ್ನ ಛೇಲಾ ಮತ್ತು ಕೆಐಎಡಿಬಿಯ ಅಧಿಕೃತ ಬ್ರೋಕರ್ ಮಹಾಬಳ ಶೆಟ್ಟಿಯನ್ನು ಛೂ ಬಿಟ್ಟ. ಈಗಾಗಲೇ ಡೆಕ್ಕನ್ ಹೈಡ್ರಾಲಿಕ್ಸ್ ಎಂಬ ಕಂಪೆನಿಯ ಹೆಸರಲ್ಲಿ ಈ ಭೂಮಿಯನ್ನು ಕಮ್ಮಿ ರೇಟಿಗೆ ದೋಚಲು ಶಶಿಕಾಂತ್ ಎಂಬ ನೆಲಗಳ್ಳನೊಬ್ಬ ಹೊಂಚಿ ಕೂತಿದ್ದನ್ನು ಗಮನಿಸಿದ ನಿರಾಣಿ ಎಕರೆಗೆ ಯಾರು ಹತ್ತು ಕೋಟಿಯಷ್ಟು ಲಂಚ ಕೊಡುತ್ತಾರೋ ಅವರಿಗಷ್ಟೇ ವೈಟ್‌ಫೀಲ್ಡ್‌ನ ಪಾರ್ಕ್ ಎಂಬ ನಿಗೂಢ ಸಂದೇಶವೊಂದನ್ನು ಮಹಾಬಳ ಶೆಟ್ಟಿಯ ಮೂಲಕ ತೇಲಿಬಿಟ್ಟ.

ಮಾರುಕಟ್ಟೆ ರೇಟೇ ಎಕರೆಗೆ 15 ರಿಂದ 30 ಕೋಟಿಯಿರುವಾಗ ಮಂತ್ರಿ ನಿರಾಣಿಯ ಬಾಯಿಗೆ 10 ಕೋಟಿ ಹಾಕಿ ಕೆಐಎಡಿಬಿಗೆ ಎಕರೆಗೆ 2 ಕೋಟಿ ಕಟ್ಟಿದರೂ ಅನಾಯಸವಾಗಿ ಏಳೆಂಟು ಕೋಟಿ ಮಿಕ್ಕುತ್ತದೆ. ಎತ್ತಿಂದೆತ್ತ

ವೈಟ್‌ಫೀಲ್ಡ್‌ನ ಸಾರ್ವಜನಿಕ ಪಾರ್ಕ್




ರಾಜ್ಯಪಾಲ ಭಾರದ್ವಾಜ್


ಯಡ್ಡಿ


ಆಲಂ ಪಾಷಾ

ಖ್ಯಮಂತ್ರಿಯಾಗಿದ್ದ ಯಡ್ಡಿ ಕೂಡ ಸದಸ್ಯರಾಗಿದ್ದ ವರ್ ಕಮೀಟಿಯಲ್ಲಿ 2010ರ ಜೂನ್ 19 ರಂದು ೀಕಾರ ಪಡೆಯುತ್ತದೆ. ಜೊತೆಗೆ ದೇವನಹಳ್ಳಿ ಕೈಗಾರಿಕಾ ಶದಲ್ಲಿ 26 ಎಕರೆ ಭೂಮಿ ಮಂಜೂರು ಮಾಡುವಂತೆ ಣಿಯೇ ಕೆಐಎಡಿಬಿಗೆ ಆದೇಶಿಸುತ್ತಾರೆ. ಮಂಜೂರಾದ ೀನಿಗೆ ಆಲಂ ಪಾಷಾ ಇಎಂಡಿ ಮೊತ್ತವನ್ನೂ ತಿಸುತ್ತಾರೆ.

ಆದರೆ ಪ್ರಾಜೆಕ್ಟ್ ಅಂಗೀಕಾರಗೊಂಡು ಜಮೀನು ಜೂರಾದ ಆರೇ ತಿಂಗಳಲ್ಲಿ ಸರ್ಕಾರ ಉಲ್ಟಾ ಡೆಯುತ್ತದೆ. 2011ರ ಜನವರಿ 24 ರಂದು ಖುದ್ದು ಣಿ, ಯಡ್ಡಿ, ವಿ.ಪಿ. ಬಳಿಗಾರ್ ಭಾಗವಹಿಸಿದ್ದ 24ನೇ LCC ಅಂದರೆ ಹೈಲೆವೆಲ್ ಕಮಿಟಿ ಮೀಟಿಂಗ್‌ನಲ್ಲಿ ಏಕಿ ಆಲಂ ಪಾಷಾರ ಪ್ರಾಜೆಕ್ಟನ್ನು ತಿರಸ್ಕರಿಸಲಾಗುತ್ತದೆ!

ಫೋರ್ಜರಿ ಪತ್ರದಲ್ಲಿ...!

ಆತಂಕಗೊಂಡ ಆಲಂ ಪಾಷಾ 'ಉದ್ಯೋಗ ಮಿತ್ರ'ಕ್ಕೆ ಗಿ ವಿಚಾರಿಸಲಾಗಿ ತನಗೆ ಸದರಿಯ ಯೋಜನೆಯನ್ನು ಮುಂದುವರಿಸುವ ಆಸಕ್ತಿಯಿಲ್ಲವೆಂದೂ ಆ ಕಾರಣ ಈ ೀಜನೆಗೆ ಮಂಜೂರಾಗಿದ್ದ ಜಮೀನನ್ನು ೊಳಿಸಬೇಕೆಂದು ಅವರದ್ದೇ ಸಹಿ ಮತ್ತು ಲೆಟರ್‌ಹೆಡ್ ಲಕ ಮನವಿ ಸಲ್ಲಿಸಿದ್ದು ಗೊತ್ತಾಗುತ್ತದೆ.. ನಾನು ದದೊಂದು ಪತ್ರವನ್ನೇ ನೀಡದಿರುವಾಗ ತನ್ನದೇ ಮಿದ್ದ ತನ್ನದೇ ಲೆಟರ್ ಹೆಡ್ ಮೂಲಕ ಅದ್ಹೇಗೆ ಸಲ್ಲಿಸಲು ಸಾಧ್ಯವೆಂದು ತಲೆ ಕೆಡಿಸಿಕೊಂಡ ಆಲಂ ಾಗೆ ಗೊತ್ತಾಗಿದ್ದು ಅದು ಫೋರ್ಜರಿ ಪತ್ರವೆಂದು!

ಈ ಬಗ್ಗೆ ತನಿಖೆ ಮಾಡುವಂತೆ ನಿರಾಣಿಗೇ ಮನವಿ ತ್ತಾರೆ. ಆವತ್ತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ನ ಕಾರ್ಯದರ್ಶಿಯಾಗಿದ್ದ ವಿ.ಪಿ. ಬಳಿಗಾರ್‌ಗೂ ು ಸಲ್ಲಿಸುತ್ತಾರೆ. ಆದರೆ ಫೋರ್ಜರಿ ಪತ್ರ ಮತ್ತು ನ್ನೇ ಆಧರಿಸಿ ತನಗೆ ಮಂಜೂರಾಗಿದ್ದ 26 ಎಕರೆ ಗಿದ್ದರ ರಹಸ್ಯ ಮಾತ್ರ ಬಯಲಾಗುವುದೇ ಇಲ್ಲ. ಈ ಎಲ್ಲಾ ಪ್ರಶ್ನೆಗಳಿಗೂ ಲೋಕಾಯುಕ್ತ ಇನ್ಸ್‌ಪೆಕ್ಟರ್ ನ್‌ಕುಮಾರ್ ಪುರಾವೆ ಒದಗಿಸಿದ್ದಾರೆ.

ಇದೀ ಕರ್ಮಕಾಂಡದ ಹಿಂದೆ ನಿರಾಣಿಯು ಡವಿರುವುದು ನಿಚ್ಚಳವಾಗಿದೆ. ದೇವನಹಳ್ಳಿಯಲ್ಲಿ ಜೂರಾಗಿದ್ದ 26 ಎಕರೆ ಜಮೀನನ್ನು ರದ್ದುಗೊಳಿಸುವಂತೆ ಆಲಂ ಪಾಷಾ ಕೆಐಎಡಿಬಿಗೆ ಬರೆದರೆನ್ನಲಾದ ರ್ಜರಿ ಪತ್ರವೇ ನಿರಾಣಿಯ ದುರಾಚಾರಕ್ಕೆ ಸಾಕ್ಷಿ ಕಲ್ಪಿಸುತ್ತದೆ.

2011ರ ಜನವರಿ 24ರಂದು ನಡೆದ 24ನೇ SHLCC ಸಭೆಯಲ್ಲಿ ಆಲಂ ಪಾಷಾ ನೀಡಿದ ಪತ್ರದ ಆಧಾರದ ಮೇಲೆಯೇ ಅವರ ಪ್ರಾಜೆಕ್ಟ್‌ನ್ನು ರದ್ದು ಪಡಿಸಲಾಯಿತೆಂದು ನಿರಾಣಿ ಸಚಿವಾಲಯ ವಿವರಣೆ ನೀಡುತ್ತದೆ ನಿಜ. ಆದರೆ ಆಲಂ ಪಾಷಾ ನೀಡಿದರೆನ್ನಲಾದ ಆ ಪತ್ರ 'ಉದ್ಯೋಗ ಮಿತ್ರ'ದಲ್ಲಿ ಸ್ವೀಕಾರವಾಗಿರುವುದು 2011ರ ಫೆಬ್ರವರಿ 1ರಂದು!

2011ರ ಫೆಬ್ರವರಿ 1ರಂದು ಉದ್ಯೋಗ ಮಿತ್ರಕ್ಕೆ ಯೋಜನೆ ರದ್ದು ಗೊಳಿಸುವಂತೆ ಆಲಂ ಪಾಷಾ ಪತ್ರ ಸಲ್ಲಿಸಿದ್ದೇ ಆದ ಪಕ್ಷದಲ್ಲಿ ಇದಕ್ಕೂ 8 ದಿನಗಳ ಹಿಂದೆಯೇ ನಡೆದಿದ್ದ SHLCC ಸಭೆಯಲ್ಲಿ ಈ ಬಗ್ಗೆ ವಿಷಯ ಮಂಡನೆಯಾಗಲು ಹೇಗೆ ಸಾಧ್ಯ? ಇದೇ ಪತ್ರವನ್ನು ಆಧರಿಸಿ ಪ್ರಾಜೆಕ್ಟ್‌ನ್ನು ರದ್ದು ಪಡಿಸಲು ಹೇಗೆ ಸಾಧ್ಯ?

ಇದರರ್ಥ 2011ರ ಜನವರಿ 24ರ ಸಭೆಯಲ್ಲಿ ಮೊದಲೇ ತೀರ್ಮಾನಿಸಿದಂತೆ ಪ್ರಾಜೆಕ್ಟನ್ನು ರದ್ದು ಮಾಡಿ ಅದಕ್ಕೆಂದು ಮಂಜೂರಾಗಿದ್ದ ಭೂಮಿಯನ್ನು ಸಮಯ ಟೀವಿಯ ಮುಖ್ಯಸ್ಥ ಮತ್ತು ರಿಯಲ್ ಎಸ್ಟೇಟ್ ಡೀಲರ್ ಸಚಿನ್ ನಾರಾಯಣಗೆ ನಿರಾಣಿ ಅಕ್ರಮವಾಗಿ ಮಂಜೂರು ಮಾಡಿದ್ದಾರೆ. ಸಚಿನ್ ಒಡೆತನದ ಅವ್ಯಕ್ತ್ ಹೌಸಿಂಗ್ ಅಂಡ್ ಕನ್ಸ್‌ಟ್ರಕ್ಷನ್ಸ್ ಕಂಪೆನಿಗೆ ಭೂಮಿ ಮಂಜೂರು ಮಾಡಲು ಆಲಂ ಪಾಷಾ ಜಮೀನನ್ನು ನಕಲಿ ಲೆಟರ್ ಹೆಡ್ ಮತ್ತು ಫೋರ್ಜರಿ ಸಹಿಯನ್ನು ಬಳಸಿ ವಂಚಿಸಲಾಗಿದೆ.

ಹತ್ತು ದಿನಗಳ ಮೊದಲೇ

ಆನಂತರ ಮಾಡಿದ ಪಾಪವನ್ನು ಮುಚ್ಚಿಕೊಳ್ಳಲು ಸೃಷ್ಟಿಸಿದ ಫೋರ್ಜರಿ ಪತ್ರವನ್ನು ಕಾನೂನು ಬದ್ಧಗೊಳಿಸಲು ಯತ್ನಿಸಲಾಗಿದೆ. ಹೀಗೆ ಸೃಷ್ಟಿಸಿದ ಫೋರ್ಜರಿ ಪತ್ರವನ್ನು ಉದ್ಯೋಗ ಮಿತ್ರಕ್ಕೆ ಫೆಬ್ರವರಿ 2 ರಂದು ಸಲ್ಲಿಸಲಾಗಿದೆ. ಅದನ್ನು ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕೆಎಎಸ್ ಅಧಿಕಾರಿ ಶಿವಸ್ವಾಮಿ ಫೆಬ್ರವರಿ 2 ರಂದು ಸ್ವೀಕರಿಸಿದರಾದರೂ ಸ್ವೀಕೃತಿಗೆ ತಮ್ಮ ಛೋಟಾ ಸಹಿಯನ್ನಷ್ಟೇ ಹಾಕಿ ಪಕ್ಕದಲ್ಲಿ ದಿನಾಂಕವನ್ನು ಮಾತ್ರ ಬೇಕಂತಲೇ ನಮೂದಿಸದೇ ಬಿಟ್ಟಿದ್ದಾರೆ.

ಈ ಪತ್ರದ ಮೂಲಕವೇ ತನಿಖೆ ಆರಂಭಿಸಿದ ಲೋಕಾಯುಕ್ತ ಪೊಲೀಸರಿಗೆ ಕೆದಕಿದಂತೆಲ್ಲಾ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನ ವಂಚನೆ ಬಯಲಾಗತೊಡಗಿದೆ.

2011ರ ಜನವರಿ 24ರ ಕೆಐಎಡಿಬಿಯ ಹೈಲೆವೆಲ್ ಕಮಿಟಿಯ ಸಭೆಯಲ್ಲಿ ಮುಖ್ಯಮಂತ್ರಿಯಾಗಿದ್ದ ಯಡ್ಡಿ, ಮಂತ್ರಿ ನಿರಾಣಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ವಿ.ಪಿ. ಬಳಿಗಾರ್, ಉದ್ಯೋಗ ಮಿತ್ರದ ಎಂ.ಡಿ. ಶಿವಸ್ವಾಮಿ ಮುಂತಾದವರೆಲ್ಲ ಭಾಗವಹಿಸಿದ್ದಾರೆ. ಇದೇ ಸಭೆಯಲ್ಲೇ ಪ್ರಾಜೆಕ್ಟ್ ರದ್ಧತಿ ಕೋರಿದ ಆಲಂ ಪಾಷಾರ ಪತ್ರದ ವಿಷಯನ್ನೂ ಅಜೆಂಡಾದಲ್ಲಿ ಮೊದಲೇ ಪ್ರಸ್ತಾಪಿಸಲಾಗಿತ್ತು.

ಇದನ್ನೇ ಆಧರಿಸಿ ಹೇಳುವುದಾದರೆ ಇದಕ್ಕೂ ವಾರದ ಮೊದಲೇ 24ನೇ SHLCC ಸಭೆಯ ಅಜೆಂಡಾ ಬಗ್ಗೆ ಅನುಮೋದನೆ, ತಯಾರಿ, ವಿಷಯದ ಚೆರಳಚ್ಚು ಪ್ರಕ್ರಿಯೆ ನಡೆದಿರಲೇಬೇಕು. ಫೆಬ್ರವರಿ 1 ರಂದು ಉದ್ಯೋಗ ಮಿತ್ರಕ್ಕೆ ಸಲ್ಲಿಕೆಯಾದ ಆಲಂ ಪಾಷಾರ ಪತ್ರದ ಕುರಿತಂತೆ ಇದಕ್ಕೆ ಹತ್ತೋ ಹದಿನೈದೋ ದಿನಗಳ ಮೊದಲೇ ಹೇಗೆ ವಿಷಯ ಮಂಡನೆಯಾಗಲು ಸಾಧ್ಯ?

24ನೇ SHLCC ಸಭೆಯಲ್ಲಿ ಹೌಸಿಂಗ್ ಬೋರ್ಡಿಗೆ ನೂರು ಎಕರೆಯನ್ನು, ಮುಂಬಯಿ ಮೂಲದ ಉತ್ತಮ್ ಡೆವಲಪರ್ಸ್ ಕಂಪೆನಿಗೆ 200 ಎಕರೆಯನ್ನೂ ನಿರಾಣಿ ಮತ್ತು ಯಡ್ಡಿ ಸೇರಿ ಮಂಜೂರು ಮಾಡುತ್ತಾರಾದರೂ ಆಲಂ ಪಾಷಾರಿಗೆ ಮಂಜೂರಾಗಿದ್ದ ಜಮೀನನ್ನು ಮಾತ್ರ ರದ್ದುಪಡಿಸುತ್ತಿರಲಿಲ್ಲ. ಹೀಗೆ ರದ್ದು ಪಡಿಸಿದ ಮತ್ತು ಬೇರೆ ಬೇರೆ ರಿಯಲ್ ಎಸ್ಟೇಟ್ ಕಂಪೆನಿಗಳಿಗೆ ಜಮೀನು ಮಂಜೂರು ಮಾಡಿದ ನಡವಳಿಕೆಗೆ ಯಡ್ಡಿ, ನಿರಾಣಿ, ಬಳಿಗಾರ್ ಸೇರಿದಂತೆ ಪ್ರತಿಯೊಬ್ಬರೂ ಸಹಿ ಹಾಕುತ್ತಾರೆ. ಅಲ್ಲಿಗೆ ಫೋರ್ಜರಿ ಪತ್ರವನ್ನು ತಾವು ಗಮನಿಸಿಲ್ಲ ಅಥವಾ ಅದು ತಮಗೆ ಸಂಬಂಧಿಸಿದ್ದಲ್ಲ ಎನ್ನುವಂತಿಲ್ಲ.

ಎಲ್ಲಕ್ಕೂ ಮಿಗಿಲಾಗಿ ಲೋಕಾಯುಕ್ತ ತನಿಖೆಯಿಂದ ಬಯಲಾದ ಸೂಕ್ಷ್ಮ ಸಂಗತಿಯೆಂದರೆ ಯೋಜನೆ ರದ್ಧತಿ ಕೋರಿ ಫೋರ್ಜರಿ ಮಾಡಿದ ನಕಲಿ ಪತ್ರವನ್ನು ಆಲಂ ಪಾಷಾ ಯೋಜನೆಯ ಮಂಜೂರಾತಿಗೆಂದು ಸಲ್ಲಿಸಿದ್ದ ಅರ್ಜಿಯಿಂದಲೇ ನಕಲಿ ಮಾಡಲಾಗಿತ್ತು. ಮೂಲ ಅರ್ಜಿಯಲ್ಲಿದ್ದ ಲೆಟರ್ ಹೆಡ್‌ನಲ್ಲಿದ್ದ ಕಂಪೆನಿಯ ಲೋಗೋ ಅನ್ನು ಕಂಪ್ಯೂಟರ್ ಮೂಲಕ ಸ್ಕ್ಯಾನ್ ಮಾಡಿದ್ದು ಆನಂತರ ಆಲಂ ಪಾಷಾರ ಸಹಿ ಮತ್ತು ಸೀಲನ್ನು ಸ್ಕ್ಯಾನ್ ಮಾಡಿ ಅದನ್ನು ನಕಲು ಮಾಡಿದ ರದ್ಧತಿ ಕೋರಿಕೆಯ ಲೆಟರ್ ಹೆಡ್‌ಗೆ ಪ್ರಿಂಟ್ ಮಾಡಿದ್ದನ್ನು ವಿಧಿವಿಜ್ಞಾನ ಪ್ರಯೋಗಾಲಯ ಪತ್ತೆ ಹಚ್ಚಿತ್ತು.

ಆ ಪ್ರಕಾರ ಯೋಜನೆಯ ಮಂಜೂರಾತಿ ಕೋರಿ ಆಲಂ ಪಾಷಾ ಸಲ್ಲಿಸಿದ್ದ ಮೂಲ ಅರ್ಜಿಯಲ್ಲಿದ್ದ ಲೆಟರ್‌ಹೆಡ್ ಉದ್ಯೋಗ ಮಿತ್ರದಲ್ಲಷ್ಟೇ ಇರಲು ಸಾಧ್ಯ ಅಂದರೆ ನಿರಾಣಿಯ ರಿಯಲ್ ಎಸ್ಟೇಟ್ ಲಾಭಕ್ಕಾಗಿ. ನಿರಾಣಿಯ ಬೇನಾಮಿ ಮತ್ತು ಸಮಯ ಟೀವಿಯ ಧಣಿ ಸಚಿನ್ ನಾರಾಯಣ್‌ನ ಅವ್ಯಕ್ತ್ ಹೌಸಿಂಗ್ ಕಂಪೆನಿಗೆ ಜಮೀನು ಮಂಜೂರು ಮಾಡಲಿಕ್ಕಾಗಿಯೇ ಆಲಂ ಪಾಷಾರಿಗೆ ನಿರಾಣಿ ವಂಚಿಸಿರುವುದು, ನಿರಾಣಿಯ ಸೂಚನೆಯ ಮೇರೆಗೇ ಫೋರ್ಜರಿ ಪತ್ರ ಸೃಷ್ಟಿಯಾಗಿರುವುದು, ಈ ಪತ್ರ ಬಳಸಿಕೊಂಡೇ ನಿರಾಣಿ ಆಲಂ ಪಾಷಾರಿಗೆ ಮಂಜೂರಾಗಿದ್ದ ಜಮೀನು ರದ್ದು ಮಾಡಿರುವುದು ಮತ್ತು ಇದಕ್ಕೆ ಯಡ್ಡಿ ಮತ್ತು ವಿ.ಪಿ. ಬಳಿಗಾರ್ ಕೈ ಜೋಡಿಸಿರುವುದು ದಾಖಲೆಗಳ ಮೂಲಕವೇ ಸಾಬೀತಾಗಿತ್ತು.

ಇದು ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಂಜನ್‌ಕುಮಾರ್‌ರ ಅಂತಿಮ ತನಿಖಾ ವರದಿಯ ಮುಖ್ಯಾಂಶ. ಸರಿಸುಮಾರು 72 ಪುಟಗಳ ತನಿಖಾ ವರದಿಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ನಲವತ್ತಕ್ಕೂ ಅಧಿಕ ಸಿಬ್ಬಂದಿಗಳನ್ನು ಸಾಕ್ಷಿಗಳಾಗಿ ನಮೂದಿಸಲಾಗಿದೆ. ಐನೂರಕ್ಕೂ ಅಧಿಕ ಪುಟಗಳಷ್ಟು ಸಾಕ್ಷಿಗಳ ಹೇಳಿಕೆ, ದಾಖಲಾತಿಗಳನ್ನು ಲಗತ್ತಿಸಲಾಗಿದೆ. ಇದೆಲ್ಲವನ್ನು ಆಧಾರವಾಗಿಟ್ಟುಕೊಂಡು ಮಾಡಿದ ತನಿಖಾ ವರದಿಯನ್ನು ಆಧರಿಸಿಯೇ ನಿರಾಣಿಯ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲು ರಾಜ್ಯಪಾಲರ ಅಂಕಿತವೊಂದೇ ಬಾಕಿಯಿದೆ. ನಿರಾಣಿ ತನ್ನ ಗುರು ಯಡ್ಡಿಯ ಸಮೇತ ಮತ್ತೊಮ್ಮೆ ಜೈಲು ಪಾಲಾಗುವ ಕಾಲ ಸನ್ನಿಹಿತಗೊಂಡಿದೆ.

● ರಾ. ಸೋಮನಾಥ್

ಹಾಕಿದರೂ ಕೋಟಿಗಟ್ಟಲೆ ಲಾಭವೆ. ಇಂಥ ಲೆಕ್ಕಚಾರ ಮೇ ಎಕರೆಗೆ 10 ಕೋಟಿ ಲಂಚದಂತೆ ಒಟ್ಟು ನ 5.85 ಎಕರೆಗೆ ಕನಿಷ್ಠ 50 ಕೋಟಿಯ ಡೀಲು ರಿಸಿದವನು ಛೇಲಾ ಮಹಾಬಳ ಶೆಟ್ಟಿ.

ಇದಕ್ಕೆಂದೇ ಹುಟ್ಟಿಕೊಂಡಿದ್ದು ಹರಿವೇದ ಐಟಿ ಪಾರ್ಕ್ ಕಪ್ಪಾ ಟೆಕ್ನಾಲಜಿಸ್ ಎಂಬ ನಕಲಿ ಕಂಪೆನಿಗಳು.


ಈಗಾಗಲೇ 5.85 ಎಕರೆಯನ್ನು ಪಾರ್ಕ್ ಶಕ್ಕಾಗೇ ಮೀಸಲಿಡಬೇಕೆಂದು ಮಾಲಿನ್ಯ ನಿಯಂತ್ರಣ ಳಿ ಸೂಚಿಸಿತ್ತು. ಸಾರ್ವಜನಿಕರು ಹೈಕೋರ್ಟಿನಲ್ಲಿ ಜನಿಕ ಹಿತಾಸಕ್ತಿ ಮೊಕದ್ದಮೆಯನ್ನೂ ಹೂಡಿದ್ದರು. ನಿರಾಣಿ ಮಂತ್ರಿಯಾಗಿದ್ದೇ ಕಪ್ಪಾ ಟೆಕ್ನಾಲಜಿಗೆ 2.85 ಯನ್ನೂ, ಹರಿವೇದ ಐಟಿ ಪಾರ್ಕ್‌ಗೆಂದು 3 ಯನ್ನೂ ತಲಾ ಎಕರೆಗೆ 2 ಕೋಟಿಯಂತೆ ಶಿಸಿಕೊಂಡು ಹಂಚಿಕೆ ಮಾಡುವಂತೆ ಆದೇಶಿಬಿಟ್ಟ. ನಾಗೇ ಎಕರೆಗೆ 2 ಕೋಟಿಯಂತೆ ಒಮ್ಮೆಗೇ ಕೊಳ್ಳುವ ಬದಲು ಶೇ. 20 ರಂತೆ ಕಂತುಗಳ ರದಲ್ಲಿ ಕಟ್ಟಿಸಿಕೊಳ್ಳುವ ಔದಾರ್ಯವನ್ನೂ ತೋರಿದ ಡಿಬಿ ಇದಕ್ಕೆ ಕೊಟ್ಟ ಕಾರಣ ಮಾತ್ರ ಕೆಐಎಡಿಬಿಗಿರುವ ಕ ದುಸ್ಥಿತಿ. ಸ್ವಿಕ್ಕಾಷಟ್ಟೆ ಆರ್ಥಿಕ ದುಸ್ಥಿತಿಯೋ ್ಲೋ ಇದ್ದಿದ್ದರೆ ಇದ್ದ ಜಮೀನನ್ನು ಹರಾಜಿಗಿಡಬೇಕಿತ್ತು. ಮಾರುಕಟ್ಟೆ ರೇಟಾದರೂ ಸಿಗುತ್ತಿತ್ತು. ಇದ್ಯಾವುದನ್ನು ದೆ ತನಗೆ ಬೇಕಾದ ಎರಡು ನಕಲಿ ಕಂಪೆನಿಗಳಿಗೆ ್ಟ ಬಂದ ಪುಡಿಗಾಸಿಗೆ ಮಾರಿಹಾಕಿದ ನಿರಾಣಿಯದ್ದು ನ ದರೋಡೆಯಲ್ಲದೆ ಮತ್ತೇನೂ ಆಗಲು ಸಾಧ್ಯವಿಲ್ಲ.

ಇಷ್ಟಾಗ್ಯೂ ಈ ಎರಡು ಕಂಪೆನಿಗಳು ಕಟ್ಟಬೇಕಿದ್ದ ಕಂತನ್ನು ನಿಗದಿಯ ಅವಧಿಯೊಳಗೆ ಕಟ್ಟಲಿಲ್ಲ. ಆ ಕಾರಣಕ್ಕಾಗಿಯೇ ಮಂಜುರಾತಿಯನ್ನು ಈ ಹಿಂದೆ ರದ್ದು ಪಡಿಸಲಾಗಿತ್ತಾದರೂ ಈಗ ಮತ್ತೆ ನಿರಾಣಿಯೇ ನಿಂತು ಈ ಎರಡು ಕಂಪೆನಿಗಳಿಗೆ ಪಾರ್ಕ್ ಜಮೀನನ್ನು ಹಳೇ ರೇಟಿಗೆ ಹಂಚಿಕೆ ಮಾಡುವಂತೆ ಆದೇಶ ಹೊರಡಿಸಿದ್ದಾನೆಂದರೆ ಅದರ ಹಿಂದಿರುವ ಕಮೀಷನ್‌ನ ಮೊತ್ತವೇನೂ ಕಮ್ಮಿಯಿರಲಿಕ್ಕಿಲ್ಲ.

ಕೆಐಎಡಿಬಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಿಂದ ಹಿಡಿದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೆಗೂ ಇದನ್ನು ಪಾರ್ಕ್ ಉದ್ದೇಶಕ್ಕಾಗಿಯೇ ಮೀಸಲಿಡುವಂತೆ ಸುತ್ತೋಲೆ ಹೊರಡಿಸಿದ್ದಾರೆ. ಹೀಗಿದ್ದೂ ಪುಡಿಕಾಸಿಗೆ ಪಾರ್ಕ್ ಮಾರಿಕೊಂಡಿದ್ದಾನೆ ಖದೀಮ ನಿರಾಣಿ. ಲಂಚ ಹುಟ್ಟುತ್ತದೆಯೆಂದರೆ ಕಾಯ್ದೆ, ಕೋರ್ಟ್, ನಿಯಮಾವಳಿ ಯಾವುದೂ ನಿರಾಣಿಗೆ ಲೆಕ್ಕಕ್ಕಿಲ್ಲ.

ನೂರೋ ನೂರೈವತ್ತೋ ಕೋಟಿಯ ಪಾರ್ಕ್ ಭೂಮಿಯನ್ನು ಕೇವಲ ಹತ್ತೋ ಹನ್ನೆರಡೋ ಕೋಟಿಗೆ ಕಳ್ಳರ ಬಾಯಿಗಿಟ್ಟ ನಿರಾಣಿಗೆ ಕಮ್ಮಿಯೆಂದರೂ 50 ಕೋಟಿಯ ಲಂಚ ಹುಟ್ಟಿರುವ ಸಾಧ್ಯತೆ ಇದೆ. ಈ ಬಗ್ಗೆ ಹೋರಾಡಲು ಯಾರೇ ಆರ್‌ಟಿಐ ಕಾರ್ಯಕರ್ತರಾಗಲಿ, ರೈತ ಕಾರ್ಯಕರ್ತರಾಗಲಿ ಮುಂದಾಗಿದ್ದೇ ಆದಲ್ಲಿ ಅವರಿಗೆ ಬೇಕಾದ ಎಲ್ಲಾ ದಾಖಲಾತಿಗಳನ್ನು ಒದಗಿಸಲು ಪತ್ರಿಕೆ ಸಿದ್ಧವಿದೆ.

ರಾಷ್ಟ್ರಪತಿಯನ್ನು ಮೀರಿಸಿದ ತುಮಕೂರು ವಿವಿಯ ಉಪಕುಲಪತಿ



ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳು ಸುದ್ದಿ ಮಾಡುತ್ತಲೇ ಇವೆ. ಜ್ಞಾನ ಕೇಂದ್ರಗಳಾಗಿ ಸಕಾರಾತ್ಮಕ ಸಾಧನೆ ಮಾಡಿದ ಸುದ್ದಿಯಂತೂ ಅಲ್ಲವೇ ಅಲ್ಲ. ಭ್ರಷ್ಟಾಚಾರ, ಕೇಸರೀಕರಣ, ಅಧಿಕಾರದ ದುರ್ಬಳಕೆ ಮುಂತಾದ ಹಗರಣಗಳ ಕಾರಣಕ್ಕಾಗಿ. ಹೀಗೆ ಸುದ್ದಿ ಮಾಡುತ್ತಿರುವ ವಿವಿಗಳಲ್ಲಿ ತುಮಕೂರು ವಿಶ್ವವಿದ್ಯಾಲಯ ಮುಂಚೂಣಿ ಸಾಲಿನಲ್ಲಿದೆ.

ತುಮಕೂರು ವಿಶ್ವವಿದ್ಯಾಲಯಕ್ಕೆ ಧಾರಾಳವಾಗಿ ಕುಖ್ಯಾತಿ ತಂದಿತ್ತವರು ಬೇರೆ ಯಾರೂ ಅಲ್ಲ, ಇದೇ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀಮಾನ್ ಎಸ್.ಸಿ.ಶರ್ಮ ಅವರೇ. ಇಂಥಾ ವ್ಯಕ್ತಿಯ ಘನ ಸಾಧನೆಗಾಗಿ ಸರ್ಕಾರ ಎಷ್ಟು ವೇತನ ಕೊಡುತ್ತಿರಬಹುದು?

ಇಂಥಾ ಕುತೂಹಲಕಾರಿ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಆರ್‌ಟಿಐ ಕಾಯ್ದೆ ಬಳಸಿ ಪಡೆದುಕೊಂಡ ಮಾಹಿತಿ ಆಶ್ಚರ್ಯಕರವಾಗಿದೆ.

ಈ ಪ್ರಭೃತಿಗೆ ತಿಂಗಳಿಗೆ ಬರೋಬ್ಬರಿ 2,76,469/- ರೂಪಾಯಿಗಳ ಸಂಬಳ!? ಯೂನಿವರ್ಸಿಟಿಯ ವಿ.ಸಿಗಳಿಗೆ ಈಪಾಟಿ ಸಂಬಳ ಕೊಡುತ್ತಾರಾ ಅಂತ ತಲೆಕೆಡಿಸಿಕೊಂಡು ಮತ್ತಷ್ಟು ಕೆದಕಿದರೆ ಇನ್ನಷ್ಟು ಮಾಹಿತಿಗಳು ಹೊರ ಬಿದ್ದಿವೆ. ಈ ಎಸ್.ಸಿ.ಶರ್ಮನ ಸಮಾನಾಂತರ ಹುದ್ದೆಯಲ್ಲಿರುವ ರಾಜ್ಯದ ಇನ್ನಿತರ ನಾಲ್ಕು ವಿಶ್ವವಿದ್ಯಾಲಯಗಳ ವಿಸಿಗಳ ತಿಂಗಳ ಸಂಬಳ 86,750 ರೂಪಾಯಿಗಳು. ಅಂದರೆ ಮಿಸ್ಟರ್ ಶರ್ಮ ಎಷ್ಟು ಪಟ್ಟು ಅಧಿಕ ಸಂಬಳ ಪಡೆಯುತ್ತಿದ್ದಾರೆ ಎಂಬುದನ್ನು ನೀವೆ ಲೆಕ್ಕಹಾಕಿ.

ಇಲ್ಲಿ ಇನ್ನಿತರ ಕೆಲವು ಗಣ್ಯರ ಸಂಬಳಗಳನ್ನೂ ಹೋಲಿಸಿ ನೋಡಬಹುದು. ಈ ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿಯ ತಿಂಗಳ ಸಂಬಳ 1,50,000 ರೂಪಾಯಿ; ಪ್ರಧಾನ ಮಂತ್ರಿಯ ಸಂಬಳ ತಿಂಗಳಿಗೆ ಒಂದು ಲಕ್ಷ ರೂಪಾಯಿ; ಅಷ್ಟೇ ಏಕೆ? ಈ ಉಪ ಕುಲಪತಿಯನ್ನು ನೇಮಕ ಮಾಡಿದ ಕುಲಪತಿ ಅರ್ಥಾತ್ ರಾಜ್ಯಪಾಲರ ತಿಂಗಳ ಸಂಬಳ ಸುಮಾರು ಒಂದು ಲಕ್ಷ ರೂಪಾಯಿ. ಹೀಗಿರುವಾಗ ಶರ್ಮ ಸಾಹೇಬರಿಗೆ ತಿಂಗಳಿಗೆ ಎರಡೂ ಮುಕ್ಕಾಲು ಲಕ್ಷ ಸಂಬಳವನ್ನು ಅಧಿಕೃತವಾಗಿಯೇ ಕೊಡಲಾಗುತ್ತಿದೆ. ಹೀಗೆ ಬಡಬೋರೇಗೌಡನ ತೆರಿಗೆ ಹಣಕ್ಕೆ ಕನ್ನ ಕೊರೆಯಲು ನಾನಾ 'ತಾಂತ್ರಿಕ' ನೆಪಗಳನ್ನು ಗುರಾಣಿಗಳಾಗಿ ಬಳಸಿಕೊಂಡಿದ್ದಾರೆ.


ಈ ಬಗ್ಗೆ ಕೆಲ ಪತ್ರಕರ್ತರು ರಾಜ್ಯಪಾಲರನ್ನು ಪ್ರಶ್ನಿಸಲಾಗಿ "ಈ ವಿಷಯದ ಬಗ್ಗೆ ನನಗೆ ಹೆಚ್ಚಿನ ಮಾಹಿತಿಯಿಲ್ಲ" ಎಂದು ಹೇಳಿ ನುಣುಚಿಕೊಂಡಿದ್ದಾರೆ.

ಅಂದಹಾಗೆ ತುಮಕೂರು ವಿವಿಗೆ ನಾನಾರೀತಿಯಲ್ಲಿ ಕಳಂಕ ತಂದ ಈ ಮಹಾನುಭಾವನ ಅಧಿಕಾರಾವಧಿ ಬರುವ ಮೇ ತಿಂಗಳಲ್ಲಿ ಕೊನೆಗೊಳ್ಳಲಿದೆ. ಆದರೆ ಶರ್ಮ ಇಲ್ಲಿಂದ ಜಾಗ ಖಾಲಿ ಮಾಡುವ ಲಕ್ಷಣಗಳು ಕಾಣಿಸುತ್ತಿಲ್ಲ. ಯಾಕೆಂದರೆ, ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆಯಲ್ಲಿ ವಿಸಿಗಳು ಎರಡನೇ ಅವಧಿಗೆ ಮುಂದುವರೆಯಬಹುದೆಂಬ ಒಂದು ನಿರ್ಣಯ ಕೂಡಾ ಆಗಿದೆ ಎಂಬ ಸುದ್ದಿ ಬಂದಿದೆ.

ಇಂಥಾ ಸುದ್ದಿ ಕೇಳಿ ವಿದ್ಯಾರ್ಥಿಗಳು, ಅಧ್ಯಾಪಕರಾದಿಯಾಗಿ ಎಲ್ಲರ ಭವಿಷ್ಯದ ಮೇಲೆ ಕಾರ್ಮೋಡ ಕವಿದಂತಾಗಿರುವುದಂತೂ ಸುಳ್ಳಲ್ಲ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಗೂಳಿಹಟ್ಟಿಯ ಚಿತ್ತ ಎತ್ತ?




ಚುನಾವಣೆ ಸಮೀಪಿಸಿದಂತೆ ಹೊಸದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ರಾಜಕೀಯ ತಲ್ಲಣಗಳು ಶುರುವಾಗಿವೆ. ಇಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಕೆಜೆಪಿ ಮತ್ತು ಬಿಎಸ್‌ಆರ್ ಕಾಂಗ್ರೆಸ್ ಪಕ್ಷಗಳಿಗೆ ಸ್ಪರ್ಧಿಸುವ ಇರಾದೆ ಇದ್ದರೂ ಹಾಲಿ ಪಕ್ಷೇತರ ಶಾಸಕ ಗೂಳಿಹಟ್ಟಿ ಶೇಖರ್ ಎಲ್ಲಾ ಪಾರ್ಟಿಗಳಲ್ಲಿ ಹೆದರಿಕೆ ಮೂಡಿಸಿದ್ದಾರೆ.

ಇಲ್ಲಿ ಕಾಂಗ್ರೆಸ್ ಪಕ್ಷದ್ದು ಡೋಲಾಯಮಾನ ಸ್ಥಿತಿ. ಇಲ್ಲಿ 'ಕೈ' ಪಕ್ಷಕ್ಕೆ ಗೋವಿಂದಪ್ಪ ಎಂಬ ಮಾಜಿ ಶಾಸಕನೇ ಏಕೈಕ ಲೀಡರ್. ಚುನಾವಣೆ ಎಂದರೆ ಏದುಸಿರು ಬಿಡುವ ಗೋವಿಂದಪ್ಪ ಇಲ್ಲಿ ಪಕ್ಷವನ್ನು ಬೆಳೆಸಿದ ಲಕ್ಷಣಗಳೇ ಇಲ್ಲ. ತಾನು ಗೆಲ್ಲದಿದ್ದರೂ ಪರವಾಗಿಲ್ಲ, ಬೇರೆ ಯಾರೂ ನಾಯಕರಾಗಿ ಬೆಳೆಯಬಾರದೆಂದು ಇತರರನ್ನು ಹೆಣೆಯುತ್ತ ಬಂದಿರುವ ಗೋವಿಂದಪ್ಪ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ನಾಶಕ್ಕೆ ನಾಂದಿ ಹಾಡಿದ ಮನುಷ್ಯ. ಬರುವ ಚುನಾವಣೆಯಲ್ಲಿ ಹೊಸದುರ್ಗದಲ್ಲಿ ಪ್ರಬಲವಾಗಿರುವ ದೇವಾಂಗ ಸಮುದಾಯ ಇವರನ್ನು ಬೆಂಬಲಿಸುವುದಿರಲಿ, ಗೋವಿಂದಪ್ಪನ ಸ್ವಜಾತಿ ಕುರುಬ ಸಮುದಾಯವೂ ಇವರ ಕೈ ಹಿಡಿಯುವುದು ಅನುಮಾನಾಸ್ಪದ.

ಇನ್ನು ಕೆಜೆಪಿಯ ದಂಡನಾಯಕ ಯಡಿಯೂರಪ್ಪ ಹೊಸದುರ್ಗದಲ್ಲಿ ತನ್ನ ಪಕ್ಷದ ವತಿಯಿಂದ ದಂಡಪಿಂಡಕ್ಕೊಂದಿರಲಿ ಎಂಬಂತೆ ಲಿಂಗಮೂರ್ತಿ ಎಂಬುವವರನ್ನು ತಮ್ಮ ಅಭ್ಯರ್ಥಿಯನ್ನಾಗಿಸಿದ್ದಾರೆ. 2008ರ ಚುನಾವಣೆಯಲ್ಲಿ ಯಡ್ಡಿ ತನ್ನ ಸ್ವಜಾತಿ ಪ್ರೀತಿಯನ್ನು ಮೆರೆದು ಇದೇ ಲಿಂಗಮೂರ್ತಿಗೆ ಬಿಜೆಪಿ ಟಿಕೆಟ್ ಕರುಣಿಸಿದ್ದರೂ, ಆಗ ಲಿಂಗಾಯತರ ಅಲೆ ಇದ್ದರೂ, ಇವರು ಗೂಳಿಹಟ್ಟಿ ವಿರುದ್ಧ ಸೋತಿದ್ದರು. ಬರುವ ಚುನಾವಣೆಯಲ್ಲೂ ಕುಂಚಿಟಿಗ ಲಿಂಗಾಯತ ಲಿಂಗಮೂರ್ತಿ ತನ್ನ ಸ್ವಜಾತಿ ಮತಗಳನ್ನೇ ನಂಬಿರುವಂತಿದೆ. ಯಡ್ಡಿ ಬಿಜೆಪಿಯಲ್ಲಿದ್ದಾಗಲೇ ಲಿಂಗಮೂರ್ತಿಯನ್ನು ಸೋಲಿಸಿದ್ದ ಲಿಂಗಾಯತರು ಈಗ ಕೆಜೆಪಿ ವೇಷದಲ್ಲಿ ಬಂದಿರುವ ಅವರನ್ನು ಬೆಂಬಲಿಸಲಾರರು.

ಈಗಾಗಲೇ ಹೊಸದುರ್ಗದಲ್ಲಿ ಬಿಎಸ್‌ಆರ್ ಪಾರ್ಟಿಯ ಅಧಿನಾಯಕ ಶ್ರೀರಾಮುಲು ಎರಡು ಮೂರು ಸಮಾವೇಶಗಳನ್ನು ಮಾಡಿದ್ದಾರೆ. ಆದರೆ ಯಾವ ಸಮಾವೇಶಕ್ಕೂ 250ಕ್ಕಿಂತ ಹೆಚ್ಚು ಜನ ಸೇರಿರಲಿಲ್ಲ, ಇಷ್ಟಾದರೂ ಬಿಎಸ್‌ಆರ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಯಲು ಗೋವಿಂದಸ್ವಾಮಿ ಎನ್ನುವವರು ತಯಾರಿ ನಡೆಸಿದ್ದಾರೆ. ಆದರೆ ಇವರು ಹೊಸದುರ್ಗದ ಮತದಾರರಿಗೆ ಅಪರಿಚಿತ. ಇವರು ಮೂಲತಃ ಹೊಸದುರ್ಗ ತಾಲೂಕಿನವರಾದರೂ ಇವರ ಬದುಕಿನ ಬುಡ-ಬೇರುಗಳೆಲ್ಲ ಇರುವುದು 90 ಕಿಲೋಮೀಟರ್ ದೂರವಿರುವ ದಾವಣಗೆರೆಯಲ್ಲಿ, ರೈಲ್ವೆ ಇಲಾಖೆಯಲ್ಲಿದ್ದ ಗೋವಿಂದಸ್ವಾಮಿ ಆ ನೌಕರಿಗೆ ಗುಡ್‌ಬೈ ಹೇಳಿ ಸೈಟ್ ಬ್ರೋಕರಿಕೆಗೆ ಇಳಿದಿದ್ದವರು. ಶ್ರೀರಾಮುಲುವಿನ ಬಿಎಸ್‌ಆರ್ ಪಾರ್ಟಿಯಿಂದಲಾದರೂ ಹೊಸದುರ್ಗದಲ್ಲಿ ಮತದಾರರ ಪರಿಚಯ ಮಾಡಿಕೊಂಡರಾಯಿತೆಂದು ಅವರು ಇಲ್ಲಿಗೆ ಬಂದಂತಿದೆ. ಶ್ರೀರಾಮುಲು ನಾಯಕ ಸಮುದಾಯದವರಾದರೂ ಕ್ಷೇತ್ರದ ಕುಂಚಿಟಿಗ ಲಿಂಗಾಯತರು, ಕುರುಬರು ಮತ್ತು ದೇವಾಂಗ ಸಮುದಾಯದ ಮತದಾರರು ಗೋವಿಂದನ ಕಡೆ ಮುಖ ಮಾಡುವುದು ಕಷ್ಟವಾಗಬಹುದು.



ಗೋವಿಂದಪ್ಪ

ಹಾಲಿ ಶಾಸಕ ಗೂಳಿಹಟ್ಟಿ ಶೇಖರ್ ಅವರ ರಾಜಕೀಯ ನಡೆ ಯಾವ ದಿಕ್ಕಿನತ್ತ ಎಂಬ ಮರ್ಮ ಇತರೆ ಪಕ್ಷಗಳ ನಾಯಕರನ್ನು ಕಂಗೆಡಿಸಿದೆ. 2008ರ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿ ಸ್ಥಳೀಯ ಘಟಾನುಘಟಿಗಳನ್ನು ಮಣ್ಣುಮುಕ್ಕಿಸಿದ್ದ ಶೇಖರರ ರಾಜಕೀಯ ದಾಳಗಳೇ ನಿಗೂಢ. ಇಲ್ಲಿ ಬೋವಿ ಸಮುದಾಯದ ಮತಗಳು ಬೆರಳೆಣಿಕೆಯಷ್ಟಿದ್ದರೂ ಶೇಖರ್ ಎರಡು ಬಾರಿ ಶಾಸಕರಾದದ್ದೇ ಪವಾಡದಂತಿತ್ತು.

ಈಗ ಈ ಗೂಳಿಹಟ್ಟಿ ಶೇಖರ್ ಬಗ್ಗೆ ಒಂದು ಅನುಮಾನ ಮತದಾರರನ್ನು ಕಾಡುತ್ತಿದೆ. ಅದೇನೆಂದರೆ ಈ ಬಾರಿ ಶೇಖರ್ ಕಾಂಗ್ರೆಸ್ ಅಥವಾ ಬಿಜೆಪಿಗೆ ಹೋಗುತ್ತಾರೋ ಅಥವಾ ಮತ್ತೆ ಪಕ್ಷೇತರರಾಗಿ ಸ್ಪರ್ಧಿಸುತ್ತಾರೋ ಎಂಬುದು. ಇದಕ್ಕೆ ಕಾರಣಗಳೂ ಇವೆ.

ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಗೆದ್ದಿದ್ದ ನಾಲ್ಕೈದು ಶಾಸಕರು ಕಾಂಗ್ರೆಸ್ ಸೇರುವ ವರ್ತಮಾನವಿದೆ. ಉದಾಹರಣೆಗೆ ಹಿರಿಯೂರು ಶಾಸಕ ಸುಧಾಕರ ಈಗಾಗಲೇ ತಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ಪರಮೇಶ್ವರ್ ಅವರೇ ಶೇಖರ್ ಅವರನ್ನು ತಮ್ಮ ಪಾರ್ಟಿಗೆ ಆಹ್ವಾನಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಯಾಕೆಂದರೆ ಕಾಂಗ್ರೆಸ್‌ಗೆ ಈಗ ಇಲ್ಲಿಂದ ಗೆಲ್ಲುವ ಕುದುರೆಯ ಅಗತ್ಯವಿದೆ.

ಒಂದು ಮೂಲದ ಪ್ರಕಾರ ಬಿಜೆಪಿ ಕೂಡ ಶೇಖರ್ ಅವರನ್ನು ಆಹ್ವಾನಿಸಿದೆ. ಯಾಕೆಂದರೆ ಯಡಿಯೂರಪ್ಪ ಕೆಜೆಪಿ ಕಟ್ಟಿದ ನಂತರ ಈ ಕ್ಷೇತ್ರದಲ್ಲಿ ಬಿಜೆಪಿ ದಿಕ್ಕುದೆಸೆ ಇಲ್ಲದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಕಳೆದ ಬಾರಿ ಶೇಖರ್ ಗೆದ್ದ ನಂತರ ಬಿಜೆಪಿ ಸರ್ಕಾರವನ್ನು ಗಟ್ಟಿಗೊಳಿಸಲು ಸಹಕರಿಸಿದ್ದ ಪಕ್ಷೇತರರಲ್ಲಿ ಒಬ್ಬರು. ಅದಕ್ಕಾಗಿ ಅವರಿಗೆ ಮಂತ್ರಿ ಸ್ಥಾನವನ್ನೂ ನೀಡಲಾಗಿತ್ತು, ಆದರೆ ಬಿಜೆಪಿಯ ಆಂತರಿಕ ಕಿತ್ತಾಟದಿಂದ ಬೇಸರಗೊಂಡ ಶೇಖರ್ ಯಡಿಯೂರಪ್ಪ ಸರ್ಕಾರದ ವಿರುದ್ಧ ತಿರುಗಿ ಬಿದ್ದರು. ತಮ್ಮ ಮಂತ್ರಿ ಸ್ಥಾನವನ್ನೂ ಬಿಟ್ಟುಕೊಟ್ಟರು. ಆದರೆ ಯಾವಾಗ ಯಡಿಯೂರಪ್ಪ ಹೋಗಿ ಸದಾನಂದ ಗೌಡ ಮುಖ್ಯಮಂತ್ರಿಯಾದರೋ ಆಗ ಬಿಜೆಪಿಯೊಂದಿಗಿನ ಶೇಖರ್ ಅವರ ಸಂಬಂಧ ಮತ್ತೊಮ್ಮೆ ಚಿಗುರಿಕೊಂಡಿತ್ತು. ಸದಾನಂದಗೌಡರು ನಗುನಗುತ್ತಲೇ ಶೇಖರ್ ಕೇಳಿದಷ್ಟು ಅನುದಾನವನ್ನು ಬಿಡುಗಡೆ ಮಾಡುತ್ತಿದ್ದರು. ಅಷ್ಟೇ ಅಲ್ಲ, ಒಂದೇ ಏಟಿಗೆ ಒಮ್ಮೆ ಗೌಡರು 45 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದರು. ಕಾಂಗ್ರೆಸ್‌ಗೆ ಹೇಗೆ ಗೆಲ್ಲುವ ಕುದುರೆಯ ಅವಶ್ಯಕತೆ ಇದೆಯೋ ಹಾಗೆಯೇ ಬಿಜೆಪಿಗೂ ಹೊಸುದರ್ಗದಿಂದ ಸ್ಪರ್ಧಿಸಿ ಗೆಲ್ಲುವ ಅಭ್ಯರ್ಥಿಯ ಅಗತ್ಯತೆ ಇದೆ. ಈ ಕಾರಣಕ್ಕೆ ಬಿಜೆಪಿ ಶೇಖರ್ ಅವರ ಬೆನ್ನು ಸವರುತ್ತಿದೆ. ಕೆಲವು ಮೂಲಗಳ ಪ್ರಕಾರ ಶೇಖರ್ ಅವರಿಗೂ ಒಂದು ರಾಷ್ಟ್ರೀಯ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಕಣಕ್ಕಿಳಿದು ಚುನಾವಣೆ ಎದುರಿಸುವ ಮನಸ್ಸು ಇದೆ.

ಶೇಖರ್ ಅವರ ರಾಜಕೀಯ ಭವಿಷ್ಯದ ನಡೆಯ ಬಗ್ಗೆ ಇಷ್ಟೆಲ್ಲಾ ಸುದ್ದಿ ಚಾಲ್ತಿಯಲ್ಲಿದ್ದರೂ ಶೇಖರ್ ಮಾತ್ರ ಕಾಂಗ್ರೆಸ್ ಅಥವಾ ಬಿಜೆಪಿಗೆ ಹೋಗುವ ಬಗ್ಗೆ ಸಣ್ಣ ಸುಳಿವನ್ನೂ ಬಿಟ್ಟು ಕೊಟ್ಟಿಲ್ಲ. ಅವರ ಗುಣವೇ ಅಂತಹದ್ದು. ಕ್ಷೇತ್ರದ ಮತದಾರನ ನಾಡಿ ಮಿಡಿತವನ್ನು ಸೂಕ್ಷ್ಮವಾಗಿ ಗಮನಿಸುತ್ತ ತಮ್ಮ ರಾಜಕೀಯ ನಡೆಯನ್ನು ಬದಲಾಯಿಸುವಷ್ಟು ರಾಜಕೀಯ ತಂತ್ರಗಾರಿಕೆ ಅವರದ್ದು.

ಶೇಖರ್ ಯಾವ ಪಾರ್ಟಿಗೆ ಹೋದರೂ, ಹೋಗದಿದ್ದರೂ, ಪಕ್ಷೇತರರಾಗಿ ಸ್ಪರ್ಧಿಸಿದರೂ ಅವರು ಮತ್ತೆ ಗೆಲ್ಲುವ ಹವಾ ಕ್ಷೇತ್ರದಲ್ಲಿ ಕಂಡುಬರುತ್ತಿದೆ. ಶೇಖರ್ ಶಾಸಕರಾಗಿ, ಮಂತ್ರಿಯಾಗಿ ಕ್ಷೇತ್ರದಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳೇ ಅವರ ಕೈಹಿಡಿಯುತ್ತವೆ ಎಂದು ಅವರ ವಿರೋಧಿ ರಾಜಕಾರಣಿಗಳೂ ಪಿಸುಗುಟ್ಟುತ್ತಿದ್ದಾರೆ.

ಗೂಳಿಹಟ್ಟಿ ಶೇಖರ್ ಬ್ರಹ್ಮಚಾರಿ. ಹೆಂಡತಿ ಮಕ್ಕಳ ಕಾಟವಿಲ್ಲ, ಸ್ವಂತ ಮನೆಯ ಸಮಸ್ಯೆಗಳಿಲ್ಲ, ಇತರೆ ಕ್ಷೇತ್ರಗಳಿಗೆ ಹೋಲಿಸಿದರೆ ಹೊಸದುರ್ಗದಲ್ಲಿ ಸರ್ಕಾರಿ ಕಾಮಗಾರಿಗೆ ಕಮೀಷನ್ ಮತ್ತು ಲಂಚದ ಹಾವಳಿ ಇಲ್ಲ, ಈ ಎಲ್ಲ ಕಾರಣಗಳಿಗೆ ಹೊಸದುರ್ಗದ ಮತದಾರರು ಗೂಳಿಹಟ್ಟಿ ಶೇಖರ್ ಅವರ ಜಾತಿ, ಕುಲ ನೋಡುವುದಿಲ್ಲ ಎನ್ನುವ ವಾತಾವರಣವಿದೆ.

ಹಾಗಾಗಿಯೇ ಗೂಳಿಹಟ್ಟಿ ಶೇಖರ್ ಮತ್ತೆ ವಿಜಯದ ನಗು ಬೀರುವ ಸಾಧ್ಯತೆಗಳೇ ಹೆಚ್ಚಾಗಿವೆ.

● ಟಿ.ಎನ್.ಷಣ್ಮುಖ

ಮುಂದಿನ ವಾರ ಧಾರವಾಡದಲ್ಲಿ ನಡೆಯಲಿರುವ 'ಕರ್ನಾಟಕ ಜನಸಾಹಿತ್ಯ ಸಮಾವೇಶ'ದ ಕಾರ್ಯಕ್ರಮ ಪಟ್ಟಿ ಇಲ್ಲಿದೆ. ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆ ಕುರಿತು ಮರುಚಿಂತನೆ ಮತ್ತು ಹೊಸ ಸಮಾಜ ನಿರ್ಮಾಣಕ್ಕೆ ಬೇಕಾದ ನೆಲೆ ಹಾಗೂ ಪ್ರೇರಣೆಗಳ ಕುರಿತಂತೆ ಸಮಾವೇಶದಲ್ಲಿ ಚರ್ಚಿಸಲಾಗುತ್ತಿದೆ. ಬಂಡಾಯ ಸಾಹಿತ್ಯ, ಜಾಗೃತ ಸಾಹಿತ್ಯ ಸಮ್ಮೇಳನಗಳ ನಂತರ ಕರ್ನಾಟಕದಲ್ಲಿ ನಡೆಯುತ್ತಿರುವ ಮಹತ್ವದ ಸಮಾವೇಶ ಇದಾಗಿದೆ.

ಕರ್ನಾಟಕ ಜನಸಾಹಿತ್ಯ ಸಮಾವೇಶ

ಮಾರ್ಚ್ 23 ಮತ್ತು 24, 2013.
ಪಾಟೀಲ ಪುಟ್ಟಪ್ಪ ಸಭಾಭವನ,
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಮಾ.23. ಬೆ. 10.30-11.30:

1. ಆಶಯ ನುಡಿ

ಪ್ರಸ್ತಾವನೆ : ಡಾ. ಎಂ ಡಿ ಒಕ್ಕುಂದ
ಆಶಯ ಮಾತು: ಲಕ್ಷ್ಮಣ ಗಾಯಕವಾಡ, ಮರಾಠಿ ದಲಿತ ಲೇಖಕರು
ಬಾನು ಮುಷ್ತಾಕ್
ಸ್ಪಂದನ: ಜಿ. ರಾಮಕೃಷ್ಣ
ಸಂಯೋಜನೆ: ಡಾ. ಸಂಜೀವ ಕುಲಕರ್ಣಿ

2. ವರ್ತಮಾನದ ಬಿಕ್ಕಟ್ಟು; ವಿವಿಧ ನೋಟಗಳು 11.30-2.00

ದು. ಸರಸ್ವತಿ
ಡಾ. ನಾಗೇಶ ಹೆಗಡೆ
ಡಾ. ಬಂಜಗೆರೆ ಜಯಪ್ರಕಾಶ
ಡಾ. ಎಸ್.ಬಿ.ಜೋಗುರ
ಸ್ಪಂದನ : ಡಾ. ಮುಜಾಫ್ಫರ್ ಅಸ್ಸಾದಿ
ಸಂಯೋಜನೆ : ಡಾ. ಜಗದೀಶ ಕೊಪ್ಪ

3. ಸಮಾಜ ಮತ್ತು ನನ್ನ ಬರಹ ಮ. 3.00 - 5.00

ಸರ್ಜಾಶಂಕರ್ ಹರಳಿಮಠ
ಬಿ.ಪೀರ್‌ಬಾಷಾ
ವೀರಣ್ಣ ಮಡಿವಾಳರ
ಡಾ. ಅನಸೂಯಾ ಕಾಂಬಳೆ
ವಸಂತ ಬನ್ನಾಡಿ
ಜ್ಯೋತಿ ಚೇಳಾಯರು
ಡಾ. ಮಲ್ಲಿಕಾರ್ಜುನ ಮೇಟಿ
ಟಿ. ಕೆ. ದಯಾನಂದ
ಡಾ. ಬಾಲ ಗುರುಮೂರ್ತಿ
ರಮೇಶ ಅರೋಲಿ
ಸ್ಪಂದನ : ಡಾ. ಕುಂ. ವೀರಭದ್ರಪ್ಪ
ಸಂಯೋಜನೆ : ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

4. ಕವಿಗೋಷ್ಠಿ ಸಂಜೆ 5.30 - 8.00

ರಾತ್ರಿ 8.00 ಸಾಂಸ್ಕೃತಿಕ ಕಾರ್ಯಕ್ರಮ
ಚಾಲನೆ - ಜನಾರ್ದನ್ (ಜನ್ನಿ)
ಕೇಸರಿ ಹರವೂ ನಿರ್ದೇಶನದ
'ನಗರ ಮತ್ತು ನದೀ ಕಣಿವೆ' ಸಾಕ್ಷ್ಯಚಿತ್ರ ಪ್ರದರ್ಶನ

ಮಾರ್ಚ್ 24, ಬೆಳಿಗ್ಗೆ 9.30 - 10.30

5. ಹೊಸತಲೆಮಾರಿನ ಸಾಹಿತ್ಯ

ಕಾವ್ಯ
ತಾರಿಣಿ ಶುಭದಾಯಿನಿ
ಡಾ. ಎಚ್.ಎಸ್.ಅನುಪಮಾ
ಸ್ಪಂದನ - ಕೆ. ಪಿ. ಸುರೇಶ್
ಸಂಯೋಜನೆ : ಜಗದೀಶ ಮಂಗಳೂರಮಠ

ಕತೆ: 10.30 - 11.30.
ಮಂಜುನಾಥ್ ಲತಾ
ಮಹಾಂತೇಶ್ ನವಲಕಲ್
ಸ್ಪಂದನ: ಎಸ್. ಗಂಗಾಧರಯ್ಯ
ಸಂಯೋಜನೆ : ಸುನಂದಾ ಕಡಮೆ

ಸಮಾಜ ವಿಜ್ಞಾನ ಬರೆಹ ಮತ್ತು ಸಂಸ್ಕೃತಿ ಚಿಂತನೆ: 11.30 - 12.30
ದೇವು ಪತ್ತಾರ
ಡಾ. ರಂಗನಾಥ ಕಂಟನಕುಂಟೆ
ಸ್ಪಂದನ: ಕೆ. ಫಣಿರಾಜ್
ಸಂಯೋಜನೆ : ಡಾ. ಸಿದ್ರಾಮ ಕಾರಣಿಕ

6. ಹೊಸ ತಲೆಮಾರು : ನಮ್ಮ ಗ್ರಹಿಕೆ 12.30-2.30


ಜೆ. ಪಿ. ಬಸವರಾಜು
ಡಾ. ನಟರಾಜ್ ಬೂದಾಳು
ಡಾ ಎಲ್. ಹನುಮಂತಯ್ಯ
ಡಾ. ಸಬಿಹಾ ಭೂಮಿಗೌಡ
ಕೆ. ನೀಲಾ
ಸಂಯೋಜನೆ: ಶಂಕರ ಹಲಗತ್ತಿ

7. ಹೊಸ ಸಾಹಿತ್ಯ ಚಳುವಳಿಯ ಸಾಧ್ಯತೆ: ಮ. 3.30 - 5.30

ಡಾ. ಸಿದ್ದನಗೌಡ ಪಾಟೀಲ್
ಡಾ. ವಿನಯಾ
ಡಾ. ಬಿ. ಎಂ. ಪುಟ್ಟಯ್ಯ
ಡಾ. ರಹಮತ್ ತರೀಕೆರೆ
ಸಂಯೋಜನೆ: ಡಾ. ಕೆ. ಆರ್. ದುರ್ಗಾದಾಸ

ಬನ್ನಿ, ಗೆಳೆಯರ ಜತೆಗೆ..

...ಕೈ' ಕೆಸರಾಗದೆ ಬಾಯಿ ಮೊಸರು!



'ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎನ್ನುವ ಆಡು ಮಾತನ್ನು 'ಗೆದ್ದರೂ ಮೀಸೆ ಮಣ್ಣಾಗಲಿಲ್ಲ' ಎಂದು ಕೊಂಚ ಬದಲಾಯಿಸಿ ಹೇಳಬೇಕಾಗಿರುವುದು ಕಾಂಗ್ರೆಸ್ ಪಾರ್ಟಿಗೆ.

ಸ್ಥಳೀಯ ಸಂಸ್ಥೆ ಚುನಾವಣೆಗಳೆಂಬ ಸೆಮಿಫೈನಲ್ ಮ್ಯಾಚ್‌ನಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ರಾಜ್ಯ ಕಾಂಗ್ರೆ ನಾಯಕರು, ಶಾಸಕಾಕಾಂಕ್ಷಿಗಳು, ಕಾರ್ಯಕರ್ತರೆಲ್ಲಾ ಈಗಾಗಲೇ ಅಸೆಂಬ್ಲಿ ಎಲೆಕ್ಷನ್ನನ್ನು ...ಬಿಟ್ಟೆವೆಂಬ ಉಮೇದಿನಲ್ಲಿದ್ದಾರೆ. ಮತದಾರರು ಕಾಂಗ್ರೆಸ್ ಪಕ್ಷದ ...ಿ, ಕಾರ್ಯಕ್ರಮಗಳು, ಪ್ರಾಮಾಣಿಕತೆಗಳನ್ನು ನೋಡಿ ಹೀಗೆ ಓಟು ...ಪ್ರೋತ್ಸಾಹಿಸಿದ್ದಾರೆ ಎಂದು ಜನರನ್ನು ನಂಬಿಸಲು ಯತ್ನಿಸಲಾಗುತ್ತಿದೆ. ...ಕಾಂಗ್ರೆಸ್ ಪಾರ್ಟಿಗೇ ತನ್ನ ಬಗ್ಗೆ ನಂಬಿಕೆ ಇರದಿದ್ದರೂ ಇಮೇಜ್ ...ದ್ದರೂನು....!



ಮೇಲ್ನೋಟಕ್ಕೇನೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿರುವುದು ಕಾಣುತ್ತಿದೆ. ಆದರೂ ಇದು ಅಭೂತಪೂರ್ವ ಮುನ್ನಡೆಯೇನಲ್ಲ. ಈಗಿನ ಫಲಿತಾಂಶವನ್ನು ನಾಳಿನ ಅಸೆಂಬ್ಲಿ ಚುನಾವಣೆಯ ಗೆಲುವಿನ ಇಂಡಿಕೇಟರ್ ಎಂದು ನಂಬಿಕೊಂಡರೂ ಸಹ ಕಾಂಗ್ರೆಸ್‌ಗೆ ಅದರದ್ದೇ ಆದ ಕಷ್ಟಗಳೂ ಇವೆ. ಉದಾಹರಣೆಗೆ ಬೇರೆ ಪಕ್ಷದೊಂದಿಗೆ ಮೈತ್ರಿ ಇರದಿದ್ದಾಗಲೂ ಚುನಾವಣೆ ನಡೆದ ಒಟ್ಟು 4867 ವಾರ್ಡ್‌ಗಳ ಪೈಕಿ ಕಾಂಗ್ರೆಸ್‌ಗೆ ಅಭ್ಯರ್ಥಿಗಳನ್ನು ನಿಲ್ಲಿಸಲು ಸಾಧ್ಯವಾದದ್ದು ಕೇವಲ 4492 ರಲ್ಲಿ ಮಾತ್ರ. ಅಂದರೆ ಈ ಹಳೆಯ ರಾಷ್ಟ್ರೀಯ ಪಕ್ಷಕ್ಕೆ 372 ವಾರ್ಡ್‌ಗಳಲ್ಲಿ ಸೂಕ್ತ ಕ್ಯಾಂಡಿಡೇಟ್‌ಗಳೇ ಸಿಕ್ಕಿಲ್ಲ ಅಂತಾಯಿತು. ಇಷ್ಟರ ಮೇಲೂ ಸ್ಪರ್ಧಿಸಿದ್ದ 4492 ರಲ್ಲಿ ಕಾಂಗ್ರೆ ಗೆದ್ದಿರುವುದು 1960 ವಾರ್ಡ್‌ಗಳಲ್ಲಿ ಮಾತ್ರ. ಇದು ಶೇಕಡಾ 44 ರಷ್ಟರ ಗೆಲುವು. ಇದನ್ನು ಅಂಕಿ ಅಂಶಗಳ ಆಧಾರದಲ್ಲಿ ಇನ್ನಷ್ಟು ವಿಭಜಿಸಿ ನೋಡಿದರೆ ಹೀಗೆ ಕಾಣುತ್ತದೆ.

ಪಕ್ಷ	ಮಹಾ ನಗರಪಾಲಿಕೆ	ನಗರ ಸಭೆ	ಪುರಸಭೆ	ಪಟ್ಟಣ ಪಂಚಾಯತಿ
ಕಾಂಗ್ರೆಸ್	3	10	37	18
ಜೆಡಿಎಸ್	-	5	9	2
ಬಿಜೆಪಿ	-	2	10	8
ಕೆಜೆಪಿ	-	-	3	2
ಅತಂತ್ರ	4	26	33	35
ಒಟ್ಟು	7	43	92	65

ಈ ಅಂಕಿ ಅಂಶಗಳು ಮುಂದಿನ ಅಸೆಂಬ್ಲಿ ಚುನಾವಣೆಯಲ್ಲೂ ಕಾಂಗ್ರೆಗೆ ಮೇಲುಗೈ ದೊರಕಿಸಿ ಕೊಡುವಂತೆ ಕಾಣಿಸಿದರೂ ಅದರೊಂದಿಗೆ ಸ್ವಲ್ಪ ಅತಂತ್ರ ಸ್ಥಿತಿಯನ್ನು ತರುವಂತೆ ಕಾಣುತ್ತಿದೆ. ಕಾಂಗ್ರೆ, ದಳ, ಬಿಜೆಪಿ, ಕೆಜೆಪಿ ಸೇರಿದಂತೆ ಸ್ವತಂತ್ರ ಅಭ್ಯರ್ಥಿಗಳ ಪಾಲೇ ಹೆಚ್ಚಿರುವುದನ್ನು 'ಅತಂತ್ರ' ಕಾಲಂ ಸ್ಪಷ್ಟವಾಗಿ ತೋರಿಸುತ್ತಿದೆ. ಇವು ಯಾವೊಂದು ಪಾರ್ಟಿಗೂ ಖಚಿತ ಬಹುಮತ ಸಿಕ್ಕಿರದ ಕೇಂದ್ರಗಳಾಗಿವೆ.

ಈ ಚುನಾವಣೆಯ ನಂತರ ಅನೇಕ ಕಡೆ ಸ್ವತಂತ್ರರೊಂದಿಗೇ ಸೇರಿ ಕಾಂಗ್ರೆಗಳು ಸ್ಥಳೀಯ ಸಂಸ್ಥೆಗಳ ಅಧಿಕಾರ ಹಿಡಿಯುವುದು ಖಚಿತ. ಗೆದ್ದೆತ್ತಿನ ಬಾಲ ಹಿಡಿಯುವುದರಿಂದ ಸ್ವತಂತ್ರರಿಗೂ ಮುಂದಿನ ಐದು ವರ್ಷ ನಿರಾಳವಾಗಿ ತಿಂದುಂಡುಕೊಂಡು ಇರುಹುದೆಂಬ ಲೆಕ್ಕಾಚಾರವಿದ್ದೇ ಇರುತ್ತದೆ. ಹೀಗೆ ಇವತ್ತು ಏರ್ಪಡುವ ಕಾಂಗ್ರೆ ಹಾಗೂ ಸ್ವತಂತ್ರರ ಮೈತ್ರಿಕೂಟವೂ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಗೆಲುವಿಗೆ ನೆರವಾಗುವುದು ಖಚಿತ. ಜೊತೆಗೆ ಗೆಲ್ಲುವ ಕುದುರೆ ಕಾಂಗ್ರೆಸತ್ತ ಇನ್ನು ಮುಂದೆ ಪಕ್ಷಾಂತರವೂ ಹೆಚ್ಚಾಗುವ ಸಾಧ್ಯತೆಯಂತೂ ಇದ್ದೇ ಇದೆ.

ದಳ-ಬಿಜೆಪಿ ತಳಮಳ

2007ರಲ್ಲಿ 1502 ವಾರ್ಡ್‌ಗಳಲ್ಲಿ ಗೆದ್ದಿದ್ದ ಜೆಡಿಎಸ್ ಈ ಬಾರಿ 597 ಸ್ಥಾನ ಕಳೆದುಕೊಂಡು 905 ರಲ್ಲಿ ಮಾತ್ರ ಗೆದ್ದಿದೆ. ಅದೇ ರೀತಿ ಬಿಜೆಪಿಯೂ ಕಳೆದ ಬಾರಿ ಇದ್ದ 1180 ರಲ್ಲಿ 275 ವಾರ್ಡ್‌ಗಳನ್ನು ಕಳೆದುಕೊಂಡು 905 ರಲ್ಲಿ ಮಾತ್ರ ಗೆದ್ದಿದೆ. ಆಶ್ಚರ್ಯ ಏನೆಂದರೆ ಚುನಾವಣೆ ನಡೆದ 4867 ಸ್ಥಾನಗಳ ಪೈಕಿ ಜೆಡಿಎಸ್‌ಗೆ 1216 ರಲ್ಲಿ ಹಾಗೂ ಬಿಜೆಪಿಗೆ 913 ವಾರ್ಡ್‌ಗಳಲ್ಲಿ ಸ್ಪರ್ಧಿಸಲು ಸೂಕ್ತ ಅಭ್ಯರ್ಥಿಗಳೇ ಸಿಕ್ಕಿಲ್ಲದಿರುವುದು. ಅಂದರೆ ಜೆಡಿಎಸ್-ಬಿಜೆಪಿಗಳು ಶೇ.25 ವಾರ್ಡ್‌ಗಳಲ್ಲಿ ಸ್ಪರ್ಧಿಸಲೂ ಆಗಿಲ್ಲ ಎಂಬುದು ಗಮನಾರ್ಹ ಸಂಗತಿ. ಜೊತೆಗೆ ಬಿಜೆಪಿಗೆ ಮಹಾನಗರಗಳು ಹಾಗೂ ಕೊಂಚ ದೊಡ್ಡ ಸೈಜಿನ ನಗರಗಳಲ್ಲಿ ಜನ ಬೆಂಬಲ ಅಷ್ಟಿಲ್ಲದಿರುವುದನ್ನು ಈಗಿನ ಫಲಿತಾಂಶ ತೋರಿಸುತ್ತಿದೆ. ಆದರೆ ದಳಕ್ಕೆ ನಗರಸಭೆ ತಾಲ್ಲೂಕು ಕೇಂದ್ರಗಳ ಪುರಸಭೆಗಳು ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಮತ್ತು ಬಿಜೆಪಿಗೆ ಪುರಸಭೆ ಲೆವೆಲ್‌ನಲ್ಲಿ ಸ್ವಲ್ಪ ಪರವಾಗಿಲ್ಲ ಎಂಬ ಫಲಿತಾಂಶ ಸಿಕ್ಕಿದೆ.

ಈಗಾಗಲೇ ನಿತ್ರಾಣಗೊಂಡಿರುವ ಬಿಜೆಪಿಗೆ ಈಗ ICU ಸೇರುವ ಪರಿಸ್ಥಿತಿ ಬಂದಂತೆ ಕಾಣುತ್ತಿದೆ. ಈ ಖದೀಮರ ಪಾರ್ಟಿ ಸದ್ಯಕ್ಕೆ ಚೇತರಿಸಿಕೊಳ್ಳುವುದು ಕಷ್ಟವೇ.

ಯಡ್ಡಿ ರಾಮುಲು ಓಟಿನ ಕನ್ನ


ಕೆಜೆಪಿ 1966 ವಾರ್ಡ್‌ಗಳಲ್ಲಿ ಹಾಗೂ ರಾಮುಲು 1496ರಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ತಲಾ 274 ಹಾಗೂ ನೂರಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ಗೆದ್ದಿರುವುದು ಮೇಲ್ನೋಟಕ್ಕೆ ಚಿಕ್ಕದೆನಿಸಿದರೂ ಮುಂದಿನ ಎಲೆಕ್ಷನ್‌ನಲ್ಲಿ ಇನ್ನಷ್ಟು ಪರಿಣಾಮ ಬೀರಲಿದೆ. ಸಹಜವಾಗಿಯೇ ಇದು ಬಿಜೆಪಿಯ ಓಟ್ ಬ್ಯಾಂಕ್‌ಗೆ ಕನ್ನ ಹಾಕಲಿದೆ. ನಾಳೆ ಇದು ಕಾಂಗ್ರೆಸ್ ಗೆಲುವಿಗೇ ನೆರವಾಗಲಿರುವ ಅಂಶಗಳಾಗಿವೆ.


ಇಷ್ಟವಿರದಿದ್ದರೂ ಚುನಾವಣೆಗಿಳಿದ ಕಾಂಗ್ರೆಸ್ ಮೇಲುಗೈ ಸಾಧಿಸಿರುವುದು, ಬಿಜೆಪಿಗೆ ನಿರೀಕ್ಷಿತ ಮುಖಭಂಗ ಆಗೇ ಬಿಟ್ಟಿರುವುದು ನಾಳಿನ ಅಸೆಂಬ್ಲಿ ಚುನಾವಣಾ ಫಲಿತಾಂಶದ ದಿಕ್ಸೂಚಿ ನಿಜ. ಕಾಂಗ್ರೆಸ್‌ನ ಕೈ ಕೆಸರಾಗದೆ ಬಾಯಿ ಮೊಸರಾಗಿದೆ.

● ಪಾರ್ವತೀಶ

ಬೇಡದಿದ್ದ ಎಲೆಕ್ಷನ್ನೂ ಮತದಾರರ ಸೆಲೆಕ್ಷನ್ನು

...ವಲ ಒಂದು ತಿಂಗಳ ಹಿಂದೆ ಈ ಚುನಾವಣೆ ನಡೆಸುವ ಬಗ್ಗೆ ಎಲ್ಲಾ ...ಯ ಪಕ್ಷಗಳೂ ವಿರೋಧ ವ್ಯಕ್ತಪಡಿಸಿದ್ದನ್ನು ಜನ ಇನ್ನೂ ಮರೆತಿಲ್ಲ. ... ಅವಧಿಯೊಳಗಾಗಿ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ... ನೀಡಿದಾಗಲೂ ಆದನ್ನೇ ನಿರ್ಲಕ್ಷಿಸಿ 'ಚುನಾವಣೆ ಬೇಡ' ಎಂದು ...ಸಭಾ ಅಧಿವೇಶನದಲ್ಲೇ ಫೆಬ್ರವರಿ 5 ರಂದು ಸರ್ವಾನುಮತದ






...ದು ಅಂಗೀಕರಿಸಲಾಗಿತ್ತು. ಆದರೆ ರಾಜ್ಯ ಚುನಾವಣಾ ಆಯೋಗವು ...ರ್ಣಯವನ್ನು ಲೆಕ್ಕಿಸದೆ ಮುಂದಡಿ ಇಟ್ಟಾಗ ಚುನಾವಣಾ ಕಮಿಷನರ್ ... ಚಿಕ್ಕಮಠ್‌ರನ್ನೇ ಕರೆಸಿ ಶಾಸಕಾಂಗದ ಪ್ರಮುಖರ ಸಮ್ಮುಖದಲ್ಲಿ ...ುವ ಪ್ರಯತ್ನವೂ ಆಗಿಹೋಯಿತು. ನಮ್ಮ ರಾಜಕೀಯ ಪಕ್ಷಗಳು ...ವಾಗಿರುವುದೇ ನಿಜವಾಗಿದ್ದಲ್ಲಿ ಹೀಗೆ ಚುನಾವಣೆಗೆ ಹೆದರುವ ಪ್ರಸಂಗ ...ಬರುತ್ತಿತ್ತು? ಕೊನೆಗೆ ಸುಪ್ರೀಂ ಕೋರ್ಟ್ ಪುನಃ ಮಧ್ಯ ಪ್ರವೇಶಿಸಿ ...ಕಾರಿಗಳನ್ನು ಹಾಗೂ ಅಂತರಪಿಶಾಚಿಯಂತಿರುವ ಬಿಜೆಪಿ ಸರ್ಕಾರವನ್ನು ...ದ ಮೇಲೆಯೇ ಈ ಅನಿವಾರ್ಯ ಚುನಾವಣೆಯನ್ನು ನಡೆಸಲಾಗಿದೆ.

ಹಾಳೂರಿಗೆ ಉಳಿದದ್ದೇ ಕಾಂಗ್ರೆಸ್

ರಾಹುಲ್ ಗಾಂಧಿಗೆ ಕ್ರೆಡಿಟ್ ಸಲ್ಲಿಸಲು ತಯಾರಿ



ಕರ್ನಾಟಕದ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ರಾಜ್ಯ ಕಾಂಗ್ರೆಸ್‌ನ ನೇರ ಚುನಾವಣಾ ಉಸ್ತುವಾರಿ ರಾಜಕುಮಾರ ರಾಹುಲ್ ಗಾಂಧಿಯ ಕೈಯಲ್ಲಿರುತ್ತದೆ!

ಈ ನಿರ್ಧಾರದ ಹಿಂದೆ ಕಾಂಗ್ರೆಸ್ ಹೈ ಕಮಾಂಡ್‌ಗೆ ಎರಡು ಪ್ಲಾನ್‌ಗಳಿವೆ.

ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಲ್ಪಡುತ್ತಿರುವ ರಾಹುಲ್‌ಗೆ ಒಂದು ಸಕ್ಸಸ್ ಸ್ಟೋರಿ ಈಗ ತುರ್ತಾಗಿ ಬೇಕಿದೆ.

ಕರ್ನಾಟಕದಲ್ಲಿ ಹೇಗೂ ಕಾಂಗ್ರೆ ಗೆಲ್ಲುವುದು ನಿಚ್ಚಳವಾಗುತ್ತಿದ್ದಂತೆ ಈ ಚುನಾವಣಾ ಸಾರಥ್ಯವನ್ನು ರಾಹುಲ್‌ಗೆ ವಹಿಸಿದಂತೆ ಮಾಡಿ ಆತನ ಇಮೇಜ್ ಬೆಳೆಸಲು ಇದನ್ನು ಬಳಸಿಕೊಳ್ಳುವುದು.

ಇವೇ ಆ ಸೂತ್ರಗಳು. ಹಾಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ರಾಹುಲ್ ಗಾಂಧಿ ಈ ಹಿಂದೆ ಗುಜರಾತ್, ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಕಾಂಗ್ರೆಸ ಸಾರಥ್ಯ ವಹಿಸಿಕೊಂಡಿದ್ದರೂ ಹೇಳಿಕೊಳ್ಳುವಂತಹ ಛಾಪು ಮೂಡಿಸಲು ಆಗಿರಲಿಲ್ಲ. ಈಗ ರಾಹುಲ್‌ಗೆ ಪ್ರತಿಸ್ಪರ್ಧಿಯಾಗಿ ಬಿಜೆಪಿಯ ನರೇಂದ್ರ ಮೋದಿಯೇ ಅಖಾಡಕ್ಕಿಳಿಯುವುದರಿಂದ ಮೋದಿಗಿಂತ ರಾಹುಲ್ ತಾನೇ ಏನು ಕಡಿಮೆ ಎಂದು ಬಿಂಬಿಸಲು ಕಾಂಗ್ರೆಸ್‌ಗೆ ಒಂದೆರಡು ಸಕ್ಸಸ್ ಸ್ಟೋರಿಗಳು ಬೇಕಾಗಿವೆ.

ರಾಹುಲ್‌ನ ಇಮೇಜ್ ಬೆಳೆಸಬಲ್ಲ ಕೊಡುಗೆ ನೀಡುವ ಸಾಧ್ಯತೆ ಸದ್ಯಕ್ಕಿರುವುದು ಈಗ ಕರ್ನಾಟಕಕ್ಕೆ ಮಾತ್ರ.

ಚುನಾವಣಾ ಪೂರ್ವ ಸಮೀಕ್ಷೆಗಳು ಹಾಗೂ ಈಗಿನ ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾದ ಅಭಿಪ್ರಾಯ ವ್ಯಕ್ತಗೊಂಡಿರುವುದರಿಂದ ಕಾಂಗ್ರೆ ಹೈಕಮಾಂಡ್ ಈಗ ರಾಹುಲ್ ಮೇಲುಸ್ತುವಾರಿಯಲ್ಲೇ ಕರ್ನಾಟಕದ ಅಸೆಂಬ್ಲಿ ಚುನಾವಣೆಗೆ ಚಾಲನೆ ನೀಡಲಿದೆ. ತಂತಾನೆ ಬರುತ್ತಿರುವ ಆ ಗೆಲುವಿನ ಕೆಡಿಟ್ ಅನ್ನು 'ರಾಹುಲ್ ಪ್ರಭಾವ'ದಿಂದ ಆಯಿತೆಂದು ಬಿಂಬಿಸಿದರೆ 2014ರ ಸಂಸತ್ ಚುನಾವಣೆಯ ವೇಳೆಗೆ ರಾಹುಲ್‌ನ ರಾಜಕೀಯ ವ್ಯಕ್ತಿತ್ವಕ್ಕೂ ಒಂದು ಮೆರುಗು ಸಿಗಲಿದೆ ಅಲ್ಲವೆ?

ಇದೊಂದು ರೀತಿಯಲ್ಲಿ ಸವಾರನೇ ಇರದೆ ರೇಸ್‌ನಲ್ಲಿ ಮೊದಲಿಗನಾಗಿ ಓಡುತ್ತಿರುವ ಕಾಂಗ್ರೆ ಕುದುರೆಯ ಮೇಲೆ ರಾಹುಲ್ ಗಾಂಧಿ ಎಂಬ ಜಾಕಿಯನ್ನು ತಂದು ಕೂರಿಸಿ 'ಆ ಜಾಕಿಯಿಂದಾಗಿಯೇ ಕುದುರೆಯ ರೇಸ್‌ನಲ್ಲಿ ಗೆದ್ದಿತು' ಎಂದು ಬಿಂಬಿಸುವ ಸುಲಭೋಪಾಯ. ಆದರೆ ಇದೇನೆ ಇರಲಿ, ಚುನಾವಣಾ ರಾಜಕೀಯದ ಚುಕ್ಕಾಣಿ ರಾಹುಲ್ ಕೈಗೆ ಬಂದ ನಂತರ ಅನ್ಯಪಕ್ಷಗಳ ಖದೀಮರು, ಭ್ರಷ್ಟ ಟಿಕೆಟ್ ಆಕಾಂಕ್ಷಿಗಳಿಗೆ ಕಾಂಗ್ರೆಸೊಳಗೆ ಸಲೀಸಾಗಿ ಪಕ್ಷಾಂತರ ಮಾಡಲು ಅವಕಾಶ ಸಿಗುತ್ತಿಲ್ಲ.

ರಾಹುಲ್‌ರ ಈ ನಿರ್ಧಾರವು ಜನಸಾಮಾನ್ಯರಿಗೆ ಇಷ್ಟವಾಗುವ ಛಾನ್ಸ್ ಇದೆ.

...ಪ್ರಗತಿಪರರ ದುರವಸ್ಥೆ!


...ಾರೂ ನಗಬಾರದೆಂಬ ಷರತ್ತಿನೊಂದಿಗೆ ಇಲ್ಲಿ ಇನ್ನೊಂದೆರಡು ಸಂಗತಿಗಳ ...ರ್ಚಿಸಬಹುದು.

...ನ್ನೆರಡು ತಿಂಗಳಲ್ಲಿ ಬರಲಿರುವ ಅಸೆಂಬ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸಿ ...ಸೌಧವನ್ನು ವಶಪಡಿಸಿಕೊಳ್ಳುವ ಮಾತನ್ನು ಕೆಲವು ಜನಪರ-ಪ್ರಗತಿಪರ ...ನೆಗಳು ಹೇಳುತ್ತಾ ಬಂದಿರುವುದನ್ನು ಬಹುಶಃ ನೀವು ಗಮನಿಸಿರುತ್ತೀರಿ. ...ಗಾದರೆ ಚುನಾವಣೆಯನ್ನು ಇಷ್ಟು ಸೀರಿಯಸ್ಸಾಗಿ ಪರಿಗಣಿಸಿರುವ ಈ ...ಗಳು ಸ್ಥಳೀಯ ಸಂಸ್ಥೆ ಚುನಾವಣೆಯೆಂಬ ಸೆಮಿಫೈನಲ್‌ನಲ್ಲಿ ಏನೇನು ... ಮಾಡಿದ್ದಾರೆಂದು ಒಮ್ಮೆ ನೋಡಲೇಬೇಕಲ್ಲವೆ?

...ರ್ವೋದಯ ಪಾರ್ಟಿಯ ಉದಾಹರಣೆಯನ್ನೇ ಮೊದಲು ನೋಡೋಣ. ...ವರೆ ಸಾವಿರ ವಾರ್ಡ್‌ಗಳ ಪೈಕಿ ಸರ್ವೋದಯ ಪಕ್ಷ ಎಷ್ಟರಲ್ಲಿ ಗೆದ್ದಿದೆಯೋ ...ಗವಂತನೇ ಬಲ್ಲ. ಆದರೆ ಅವರು ...ದ್ದ ವಾರ್ಡ್‌ಗಳ ಸಂಖ್ಯೆ ಎಷ್ಟು ಗೊತ್ತೆ?

...ದಿಮೂರು!

...ದರೆ ಶೇಕಡಾ ಒಂದೂ ಅಲ್ಲ!!



...ಷ್ಟು ನಗರ ಪ್ರದೇಶಗಳಲ್ಲಿ ಅದರಲ್ಲೂ ...ಕರ ನಡುವೆ ನೂರಾರು ವರ್ಷಗ...ೂ ಸಂಘಟನೆ ಕೆಲಸ ಮಾಡುತ್ತಾ ...ವ ಸಿಪಿಐ ಹಾಗೂ ಸಿಪಿಎಂಗಳಾದರೂ ...ವಾರ್ಡ್‌ಗಳಲ್ಲಿ ಸ್ಪರ್ಧಿಸಿವೆ? 20 ಮತ್ತು ...ಲ್ಲಿ ಮಾತ್ರ! ಈ ಪಕ್ಷಗಳವರು ಚುನಾವಣಾ ರಾಜಕೀಯ ಮಾಡುತ್ತೇವೆ ... ಹೇಳಿಕೊಳ್ಳುತ್ತಾರೆ. ಆ ಹಾದಿ ಸೂಕ್ತ ಎನಿಸಿದರೆ ಮಾಡಿಕೊಳ್ಳಲಿ. ...ಮಾಡೋ ಕೆಲಸವನ್ನು ಟಿಪ್ಪುಗ ಮಾಡದೆ, ಗಂಭೀರವಾಗಿಯೂ ಪರಿಗಣಿಸದೆ ...ಿ ಯಾರಿಗೆ ತಾನೇ ಇವರ ಬಗ್ಗೆ ನಂಬಿಕೆ ಹುಟ್ಟುತ್ತದೆ?

ಕರಾವಳಿ: ಹಿಂದೂತ್ವದ ಹೋಮದಲ್ಲಿ ಬೂದಿಯಾದ ಬಿಜೆಪಿ!!

ಕರಾವಳಿಯ ಭಯಾನಕ ಬಿಜೆಪಿ ಹಿಂದೂತ್ವದ ಹೋಮ ಕುಂಡದಲ್ಲಿ ಭಸ್ಮವಾಗಿಹೋಗಿದೆ! ಪೌರ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಸಂಘ ಪರಿವಾರದ ಧರ್ಮಕಾರಣಿಗಳನ್ನು ಮತದಾರರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ; ಚೆಡ್ಡಿ-ಕಾವಿಗಳ ರಕ್ತ ರಾಜಕಾರಣಕ್ಕೆ ಅಂಕುಶ ಹಾಕಿದ್ದಾರೆ. ಕಳೆದ ಒಂದೂವರೆ ದಶಕದಿಂದ ಆರ್ಭಟಿಸುತ್ತಿದ್ದ ಜೀವ ವಿರೋಧಿ ಭಜರಂಗಿ-ಸಂಘ ಕೂಟ ಕರಾವಳಿಯ ಉದ್ದಗಲದ 22 ಪೌರ ಸಂಸ್ಥೆಗಳಲ್ಲಿ ಮೂರ್ನಾಲ್ಕರಲ್ಲಷ್ಟೇ ಉಸಿರಿಟ್ಟುಕೊಂಡಿದೆ. ಉಳಿದೆಲ್ಲೆಡೆ ಹಿನಾಯ ಅವಸಾನ ಕಂಡಿದೆ. ಧರ್ಮದ ಮುಖವಾಡದಲ್ಲಿ ಅಡಗಿಕೊಂಡು ರಾಜಕೀಯ ಸುಖ-ಸೌಲಭ್ಯ ಸವಿಯುತ್ತಿದ್ದ ಆರೆಸ್ಸೆಸ್‌ನ ಆನಾಹುತಕಾರಿ ಡಾನ್-ಡಾಕೂಗಳೀಗ ಮತದಾರರು ಕೊಟ್ಟ ಜನರು ರವಾನಿಸಿದ್ದಾರೆ!!


ಒಂದೆಡೆ ಧರ್ಮಕಾರಣವಾದರೆ, ಮತ್ತೊಂದೆಡೆ ಭ್ರಷ್ಟಾಚಾರ, ಸುಲಿಗೆ, ಜನರನ್ನು ಸತಾಯಿಸುವ ಆಡಳಿತದಿಂದ ಬಿಜೆಪಿ ಕಾರ್ಪೋರೇಟರ್‌ಗಳೆಲ್ಲ ಸಾಕ್ಷಾತ್ ರಾಕ್ಷಸರಂತಾಗಿಹೋಗಿದ್ದರು. ಮಂತ್ರಿಯಾಗಿದ್ದ ಬಿಲ್ಡರ್-ರಿಯಲ್ ಎಸ್ಟೇಟ್ ಉದ್ಯಮಿ ಕೃಷ್ಣ ಪಾಲೇಮಾರ್‌ನ ಬಿಲ್ಡರ್ಸ್ ಗ್ಯಾಂಗ್‌ನ ಮರ್ಜಿಗೆ ತಕ್ಕಂತೆ ಪಾಲಿಕೆ ತನ್ನ ಕಾರ್ಯವೈಖರಿ ರೂಢಿಸಿಕೊಂಡಿತ್ತು. ಹೀಗಾಗಿ ಅಕ್ರಮ ಬಹುಮಹಡಿ ಕಟ್ಟಡಗಳು ನೋಡು ನೋಡುತ್ತಿದ್ದಂತೆಯೇ ಎದ್ದು ಸಕ್ರಮವೂ ಆಗಿಬಿಡುತ್ತಿತ್ತು. ಆದರೆ ಬಡವರ ಎರಡು ಸೆಂಟ್ಸ್ ನಿವೇಶನಕ್ಕೆ ಈ ಚೆಡ್ಡಿ ಪಾಲಿಕೆ ಕಲ್ಲು ಹಾಕುತ್ತಲೇ ಬಂತು. ನೀರು ಸರಬರಾಜು ಖಾಸಗೀಕರಣ ಮಾಡಿ ಬಿಲ್ ಏರಿಸುತ್ತ

ಬಿಜೆಪಿ ಸಂಪೂರ್ಣ ಭೂಗತವಾಗುವುದು ಗ್ಯಾರಂಟಿ!

ಸುಳ್ಯ ಮತ್ತು ಉಡುಪಿ ತಾಲ್ಲೂಕಿನ ಸಾಲಿಗ್ರಾಮದ ಎರಡು ಪಟ್ಟಣ ಪಂಚಾಯ್ತಿಗಳನ್ನು ಬಿಟ್ಟರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಬಿಜೆಪಿಗೆ ಮತ್ತೆಲ್ಲಿಯೂ ಆಡಳಿತಕ್ಕೆ ಬರಲು ಜನರು ಅವಕಾಶ ಕೊಟ್ಟಿಲ್ಲ. ಇದು ದಕ್ಷಿಣ ಕರಾವಳಿಯಲ್ಲಿ ಆ ಪಾರ್ಟಿಯ ಮೇಲೆ ಜನರಿಗೆ ಅದೆಂಥ ಸಿಟ್ಟು-ಬೇಸರ ಬಂದಿದೆ ಎಂಬುದಕ್ಕೆ ಸಾಕ್ಷಿಯಂತಿದೆ. ಮಾಜಿ ಸಿಎಂ ಸದಾನಂದ ಗೌಡರ ತವರೂರು ಪುತ್ತೂರಿನಲ್ಲಿ ಬಿಜೆಪಿ ಈ ಬಾರಿ ಹೀನಾಯವಾಗಿ ಸೋತಿದೆ. ಜನಪರ ಶಾಸಕಿಯಾಗಿದ್ದ ಶಕುಂತಲಾ ಶೆಟ್ಟಿಯನ್ನು ಡಿವಿ ಡಾನ್ ಕಲ್ಲಡ್ಕನ ಜತೆ ಸೇರಿ ಕಾಡಿದ್ದು, ಹುಸಿ ಹಿಂದೂತ್ವದ ಹೆಸರಲ್ಲಿ ಪುಂಡಾಟ ನಡೆಸಿದ್ದು ಪುತ್ತೂರಿನ ಜನರನ್ನು ಕೆರಳಿಸಿತ್ತು.

ಬಿಜೆಪಿಯ ಭಟ್ಟನನ್ನು ಕಾಂಗ್ರೆಸ್‌ನ ಪ್ರಮೋದ್ ಎಂಬ ಮೀನುಗಾರ ತರುಣ ಮಣಿಸುವ ಸಂಕೇತ ಎಂದೇ ಜನ ವ್ಯಾಖ್ಯಾನಿಸುತ್ತಿದ್ದಾರೆ. ಅತ್ತ ಬಿಜೆಪಿಯಲ್ಲಿ ಕಚ್ಚೆ ಹರು... ಭಟ್ಟನಿಗೆ ಟಿಕೆಟ್ ಕೊಡಬಾರದೆಂಬ ಕೂಗಿಗೂ ಉಡು... ನಗರಸಭೆ ಚುನಾವಣಾ ರಿಸಲ್ಟ್ ಕಾರಣವಾಗಿದೆ!

ಬಿಜೆಪಿಯಿಂದ ಹೊರಬಂದಿರುವ ಹಾಲಾಡಿ ಶ್ರೀನಿವಾಸ್ ಶೆಟ್ಟಿಯ ಎಡಬಿಡಂಗಿತನದಿಂದಾಗಿ ಕುಂದಾಪುರ ಪುರಸಭೆ ಸೆಣಸಾಟ ಕುತೂಹಲ ಕೆರಳಿಸಿತ್ತು. ಕಾಂಗ್ರೆಸ್ ಸೇರುವುದೋ? ಇಂಡಿಪೆಂಡೆಂಟ್ ಆಗಿ ಅಸೆಂಬ್ಲಿ ಎಲೆಕ್ಷನ್‌ಗೆ ಇಳಿಯುವುದೋ? ಎಂಬ ಗೊಂದಲದಲ್ಲಿರುವ ಹಾಲಾಡಿಗೆ ಬಿಜೆಪಿ ಸಹವಾಸ ಸಂಪೂರ್ಣ ಬಿಡಲಾಗದಿರುವುದು ಹಾಸ್ಯಾಸ್ಪದವಾಗಿದೆ. ಆತ ಪುರಸಭೆ ಚುನಾವಣಾ ಅಖಾಡದಲ್ಲಿ



ಪೂಜಾರಿ | ಸದಾನಂದ | ದೇಶಪಾಂಡೆ | ಅಸ್ನೋಟಿಕರ್ | ಸವದಿ | ಕಾಗೇರಿ | ಅನಂತ್‌ಕುಮಾರ್ | ಪ್ರಭಾಕರ್



ದಿನಕರ ಶೆಟ್ಟಿ | ಗೋಪಾಲ್ | ಶ್ರೀನಿವಾಸ್ | ಪ್ರಮೋದ್ | ರಘುಪತಿ | ರಮಾನಾಥ್ ರೈ | ಶಿವಾನಂದ್ | ಸುನೀಲ್

ಏಟಿನಿಂದಾದ ಗಾಯವನ್ನು ತಮ್ಮ ಅಡಗುದಾಣದಲ್ಲಿ ಕುಳಿತು ನೆಕ್ಕುತ್ತಿದ್ದಾರೆ.

ಅನೈತಿಕ ಪೊಲೀಸರ ಕೇಂದ್ರ ಸ್ಥಾನದಂತಾಗಿರುವ ಮಂಗಳೂರಿನ ಮಹಾನಗರ ಪಾಲಿಕೆಯನ್ನೇ ಉಳಿಸಿಕೊಳ್ಳಲಾಗದೆ ವಿಲಿವಿಲಿ ಒದ್ದಾಡಿದ ಹಿಂದೂತ್ವವಾದಿ ಭೂಪರು ಅಂತಿಮವಾಗಿ ಕಾಂಗ್ರೆಸ್‌ಗೆ ಶರಣಾಗಿದ್ದಾರೆ. 60 ಸ್ಥಾನಗಳ ಪಾಲಿಕೆಯಲ್ಲಿ ಕಾಂಗ್ರೆಸ್ 35 ಪಡೆದರೆ, ಎದುರಾಳಿ ಬಿಜೆಪಿ 20 ಸೀಟು ಪಡೆಯುವಷ್ಟರಲ್ಲೇ ಹೈರಾಣಾಗಿದೆ! ಇಲ್ಲಿ ಕಾಂಗ್ರೆಸ್ ನೆಪ ಮಾತ್ರ. ಮಂಗಳೂರು ಮಹಾನಗರದಲ್ಲಿ ಗೆದ್ದಿರುವುದು ಮನುಷ್ಯತ್ವ. ಮೊದಮೊದಲು ಮುಸ್ಲಿಮರು-ಕ್ರಿಶ್ಚಿಯನ್ನರನ್ನು ಟಾರ್ಗೆಟ್ ಮಾಡಿಕೊಂಡಿದ್ದ ಸಂಘಪರಿವಾರದ ಸೈತಾನರು ನಂತರ ಪೊಲಿಟಿಕಲ್ ಮೈಲೇಜು ಪಡೆಯಲು, ದುಡ್ಡು ಮಾಡಲು ಮತ್ತು ತೀಟೆ ತೀರಿಸಿಕೊಳ್ಳಲು ಹಿಂದೂ ಹುಡುಗಿಯರ ಮೇಲೇ ಮುಗಿಬೀಳಲಾರಂಭಿಸಿದರು. ನೈತಿಕತೆ ಹೆಸರಲ್ಲಿ ಅನಾಚಾರ-ಅವ್ಯವಹಾರ ಜೋರಾಯ್ತು. ಇದರಿಂದ ಮಂಗಳೂರು ನಗರ ನರಕದಂತಾಗಿ ಹೋಯಿತು. ರೋಸತ್ತ ಜನ ಸಂಘ ಪರಿವಾರದ ಪಾತಕಕ್ಕೆ ಕಡಿವಾಣ ಹಾಕಲು ದೃಢ ನಿರ್ಧಾರ ಮಾಡಿದ್ದರು. ತಮ್ಮ ಆಕ್ರೋಶ ಈಗ ಪಾಲಿಕೆ ಚುನಾವಣೆಯಲ್ಲಿ ತೋರಿಸಿದ್ದಾರೆ. ತನ್ಮೂಲಕ ಸಮಾಜದ ಶಾಂತಿ ಕೆಡಿಸುವ ಆರೆಸ್ಸೆಸ್‌ನ ರಿಂಗ್ ಮಾಸ್ಟರ್ ಕಲ್ಲಡ್ಕ ಪ್ರಭಾಕರ್ ಭಟ್‌ಗೆ ಎಚ್ಚರಿಕೆಯ ಸಂದೇಶವನ್ನು ಹೋಯ್ತು. ಪರ್ಸೆಂಟೇಜ್ ಹೊಡೆಯಲು ನಗರದಾದ್ಯಂತ ಭರ್ಜರಿ ರಸ್ತೆ ನಿರ್ಮಾಣ ಮಾಡಿದ ಬಿಜೆಪಿ ಕಾರ್ಪೋರೇಟರ್‌ಗಳು ಫುಟ್‌ಪಾತ್ ನಿರ್ಮಿಸದೆ ಜನರನ್ನು ಕಾಡಿದರು. ಪಾಲಿಕೆ ಆಡಳಿತಗಾರರ ಸ್ವಯಂಘೋಷಿತ ತೆರಿಗೆ ಪದ್ಧತಿಯಂತೂ ಘೋರವಾಗಿತ್ತು! ಇದೆಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಪುರಪಿತೃಗಳು ಜನರ ಯಾವ ಸಮಸ್ಯೆಗೂ ಸ್ಪಂದಿಸದೆ ದುರಹಂಕಾರದಿಂದ ಹಾರಾಡತೊಡಗಿದ್ದರು. ಕ್ಷೇತ್ರದ ಉದ್ಧಾರ ಮರೆತು ತಮ್ಮ ತಮ್ಮ 'ಜೀರ್ಣೋದ್ಧಾರ'ದಲ್ಲಿ ಮೈಮರೆತಿದ್ದರು! ಇದು ಬಿಜೆಪಿ ಸೋಲಿಗೆ ಮುಖ್ಯ ಕಾರಣ.

ಹಾಗೆಯೇ ಕಾಂಗ್ರೆಸ್‌ನಲ್ಲಿ ಈ ಬಾರಿ ಅಪರೂಪದ ಒಗ್ಗಟ್ಟು ಮೂಡಿತ್ತು. ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿ ಮಂಗಳೂರು ರಾಜಕಾರಣದಲ್ಲಿ ತಲೆ ತೂರಿಸದೇ 'ಮರ್ಯಾದೆ'ಯಿಂದ ವರ್ತಿಸಿದ್ದು ಜನಾರ್ದನ ಪೂಜಾರಿಗೆ ಗೆಲುವಿನ ತಂತ್ರಗಾರಿಕೆ ಹೆಣೆಯಲು ನಿರಾತಂಕ ವಾತಾವರಣ ಸೃಷ್ಟಿಸಿತ್ತು. ಹೆಸರು ಕೆಡಿಸಿಕೊಂಡಿದ್ದ ಜನಪೀಡಕ ಪಾಲೆಮಾರ್, ಯೋಗೇಶ್ ಭಟ್ಟ, ಶ್ರೀಕಂಠ ಪ್ರಭು, ಕಲ್ಲಡ್ಕ ಪ್ರಭಾಕರ್ ಭಟ್ ಎದುರು ನಿಂತು ಸೆಣಸಾಡಿದ ಪೂಜಾರಿ ಟೀಮ್‌ನ ಪ್ರಗತಿ ಪರ ಪ್ರಣಾಳಿಕೆ, ಸಮಾಜದ ಸ್ಥಿರತೆ-ಶಾಂತಿ ಕಾಪಾಡುವ ಮಾತುಗಾರಿಕೆ ಮಂಗಳೂರಿಗರನ್ನು ಆಕರ್ಷಿಸಿತು. ಇದೇ ಟ್ರೆಂಡ್ ಕಾಂಗ್ರೆಸ್ ಅಸೆಂಬ್ಲಿ ಎಲೆಕ್ಷನ್ ತನಕ ಬದ್ಧತೆ-ಪ್ರಾಮಾಣಿಕತೆ-ನಗರಾಭಿವೃದ್ಧಿ ನಿಲುವಿನಿಂದ ಕಾಯ್ದುಕೊಂಡರೆ

ಪುತ್ತೂರು ಜನರು ಡಿವಿ-ಕಲ್ಲಡ್ಕ-ಮಲ್ಲಿಕಾ-ಪ್ರಸಾದ್ ಕೋಳಿಗೆ ಮುಖ-ಮೂತಿ ನೋಡದೆ ಚಚ್ಚಿ ಓಡಿಸಿದ್ದಾರೆ.

ಮೂಡಬಿದರೆ, ಬಂಟ್ವಾಳ, ಉಳ್ಳಾಲ ಮತ್ತು ಬೆಳ್ತಂಗಡಿಯಲ್ಲಿರುವುದು ಕಾಂಗ್ರೆಸ್ ಶಾಸಕರು. ಅಭಯಚಂದ್ರ ಜೈನ್, ರಮಾನಾಥ ರೈ, ಯು.ಟಿ. ಖಾದರ್ ಮತ್ತು ವಸಂತ ಬಂಗೇರಾ ಬಿಜೆಪಿ ಭಂಡಾಟ ಎದುರಿಸುವ ವರ್ಚಸ್ಸಿನ ಶಾಸಕರಾಗಿ ಇವತ್ತಿಗೂ ಕ್ಷೇತ್ರದಲ್ಲಿ ಜನಜನಿತರು. ಹೀಗಾಗಿ ಇಲ್ಲಿ ಮತ್ತೆ ಕಾಂಗ್ರೆಸ್ ಗೆದ್ದಿದೆ. ಬಿಜೆಪಿಗೆ ತಲೆ ಎತ್ತಲು ಅವಕಾಶವಾಗಿಲ್ಲ. ಸುಳ್ಯದಲ್ಲಿ ಬಿಜೆಪಿ ಗೆದ್ದಿರುವುದು ಮುಸ್ಲಿಮರ ಕೆಎಫ್‌ಡಿ ಪ್ರಚೋದಿತ ಎಸ್‌ಡಿಪಿಐ ಪಕ್ಷ ಒಡೆದ ಮುಸ್ಲಿಮ್ ಮತದಿಂದಾಗಷ್ಟೇ. ಹಾಗೆಯೇ ಸುಳ್ಯ ಪೇಟೆಯಲ್ಲಿ ಲಾಗಾಯ್ತಿನಿಂದಲೂ ಬೇರು ಬಿಟ್ಟಿರುವ ಹಿಂದೂತ್ವದ ಕುತಂತ್ರಗಾರಿಕೆ ಕಾಂಗ್ರೆಸ್ ನಾಯಕರಿಂದ ಕೌಂಟರ್ ಮಾಡಲಾಗಿಲ್ಲ. ಸುಳ್ಯ ಕಾಂಗ್ರೆಸ್‌ನಲ್ಲಿ ಡಾ. ರಘುನಂತಹ ಜನಪರ ಲೀಡರ್ ಇದ್ದರೂ ಆತನ ಪ್ರಭಾವ ಹಳ್ಳಿಗಾಡಿನಲ್ಲಷ್ಟೇ ಸೀಮಿತ. ಸಾಲಿಗ್ರಾಮದಲ್ಲಿನ ಕಾಂಗ್ರೆಸ್‌ನ ಗುಂಪುಗಾರಿಕೆ ಬಿಜೆಪಿಗೆ ಎರಡೇ ಎರಡು ಸೀಟು ಹೆಚ್ಚು ಪಡೆಯಲು ನೆರವಾಗಿದೆ.

ಕರಾವಳಿಯ ಹಿಂದೂ ಸಂಸ್ಥಾನದ ರಾಜಪುರೋಹಿತ ಪೇಜಾವರ ಸ್ವಾಮೀಜಿಯ ಹೆಡ್‌ಕ್ವಾಟರ್ಸ್ ಉಡುಪಿಯಲ್ಲೇ ಈ ಬಾರಿ ಬಿಜೆಪಿ ಮಕಾಡೆ ಮಲಗಿ 'ಐತಿಹಾಸಿಕ ದಾಖಲೆ' ಮಾಡಿದೆ! ಹಿಂದೂ ಹರಾಮಿಗಳ ಆಡಂಬೋಲವಾದ ಉಡುಪಿಯ ನಗರಸಭೆಯಲ್ಲಿ 48 ವರ್ಷದಿಂದ ಚೆಡ್ಡಿ-ಕಾವಿ ಪರಿವಾರ ಪ್ರೇರಿತ ಬಿಜೆಪಿ ಗ್ಯಾಂಗ್ ಆಡಳಿತ ನಡೆಸುತ್ತ ಬಂದಿತ್ತು. ಜನಸಂಘದ ಕಾಲದಲ್ಲೂ ಸಂಘಪರಿವಾರ ಉಡುಪಿ ನಗರಸಭೆಯಲ್ಲಿ ಪ್ರಭುತ್ವ ಸ್ಥಾಪಿಸಿತ್ತು. ಸಾಕ್ಷಾತ್ ಅಡ್ವಾಣಿಯಂಥವರೇ ಉಡುಪಿಗೆ ಬಂದಾಗೆಲ್ಲ 'ಜನಸಂಘಕ್ಕೆ ಪ್ರಜಾಪ್ರತಿನಿಧಿಗಳ ಸಂಸ್ಥೆಯೊಂದರಲ್ಲಿ ಪ್ರಪ್ರಥಮವಾಗಿ ಆಡಳಿತ ಸಿಕ್ಕಿದಿದ್ದರೆ ಅದು ಉಡುಪಿಯಲ್ಲಿ' ಎಂದು ಗರ್ವದಿಂದ ಹೇಳುತ್ತಿದ್ದರು. ಈ ಬಾರಿ ಅಷ್ಟಮಠದ ಅಂಗಳದಲ್ಲಿ ಬಿಜೆಪಿ ಭೂಗತವಾಗಿದೆ!

ಇದಕ್ಕೆ ಕಾರಣ ಮೂರು. ಒಂದು, ಸಂಘ ಪರಿವಾರದ ಬರ್ಬರ ಪಾತಕದ ಹಿಂದೂತ್ವ; ಎರಡು, ಸ್ಥಳೀಯ ಶಾಸಕ ರಘುಪತಿ ಭಟ್ಟನೆಂಬ ಹೆಂಡತಿ ಹಂತಕನ ರೇವ್ ಪಾರ್ಟಿ, ಅಕ್ರಮ-ಅನ್ಯಾಯ-ಅವಾಂತರ-ಅಪಸವ್ಯ; ಮೂರನೇ ಕಾರಣ, ಉಡುಪಿ ಕಾಂಗ್ರೆಸ್ ಜನಪರ ತರುಣ ಪ್ರಮೋದ್ ಮಧ್ವರಾಜ್‌ನ ನಾಯಕತ್ವದಲ್ಲಿ ಒಂದಾಗಿ ಚೆಡ್ಡಿಗಳ ವಿರುದ್ಧ ಬದ್ಧತೆಯಿಂದ ಹೋರಾಡಿದ್ದು. ಹೀಗಾಗಿ 35 ಸ್ಥಾನದ ನಗರಸಭೆ ಗದ್ದುಗೆ ಹೋರಾಟದಲ್ಲಿ ಬಿಜೆಪಿ 12 ಸೀಟು ಗೆಲ್ಲುವಷ್ಟರಲ್ಲೇ ನೆಲ ಕಚ್ಚಿದರೆ, ಪ್ರಮೋದ್ ಮಧ್ವರಾಜ್ ನೇತೃತ್ವದ ಕಾಂಗ್ರೆಸ್ 22 ಸ್ಥಾನ ಪಡೆದು ದಿಗ್ವಿಜಯ ಸಾಧಿಸಿದೆ! ಈ ಫಲಿತಾಂಶ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ

ನೇರ ಕಾಣಿಸಿಕೊಂಡಿರಲಿಲ್ಲ. ಆದರೆ ನಾಲ್ಕು ಮಂದಿ ತನ್ನ ಹಿಂಬಾಲಕರಿಗೆ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸಲು ಬಿಟ್ಟಿದ್ದರು. ಅವರಿಗೆ ಫೈನಾನ್ಸೂ ಮಾಡಿದ್ದರು. ಇದು ಹಾಲಾಡಿಯ ಬಿಜೆಪಿ ಮೋಹವೋ ಅಥವಾ ಬಿಜೆಪಿ ಮುಗಿಸುವ ಸ್ಕೆಚ್ಚೋ ಎಂಬುದು ಯಾರಿಗೂ ಅರ್ಥವಾಗುತ್ತಿಲ್ಲ; ಸ್ವತಃ ಹಾಲಾಡಿಗೂ ಇಂಥ ಛಾಯಾ ಯುದ್ಧದಲ್ಲಿ ಬಿಜೆಪಿ 12 ಸ್ಥಾನ ಗೆದ್ದಿದೆ. ಕಾಂಗ್ರೆಸ್-ಸಿಪಿಐ(ಎಂ) ಮೈತ್ರಿ ಕೂಟ 11 ಕಡೆ ಜಯಿಸಿದೆ. ಅಂದರೆ, ಕುಂದಾಪುರದಲ್ಲೂ ಬಿಜೆಪಿ ಆಟಕ್ಕುಂಟು ಲೆಕ್ಕಕ್ಕೆ ಇಲ್ಲದಂಥ ದಯನೀಯ ಸ್ಥಿತಿ ತಲುಪಿದೆ!! ಅತ್ತ ಕಾರ್ಕಳದಲ್ಲಿ ಜನಾನುರಾಗಿ ಶಾಸಕ ಗೋಪಾಲ ಭಂಡಾರಿ ಭಜರಂಗಿ ಭೂತ ಸುನಿಲ್ ಕುಮಾರ್‌ನನ್ನು ನೆಲಕಚ್ಚಿಸಿದ್ದಾರೆ.

ಒಂದಂತೂ ಸ್ಪಷ್ಟ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪೌರಾಡಳಿತ ಸಂಸ್ಥೆಗಳ ಆಡಳಿತಕ್ಕಾಗಿ ನಡೆದ ಹಣಾಹಣಿಯಲ್ಲಿ ಹಿಂದೂತ್ವದ ಹರಾಮಿತನಕ್ಕೆ ಹೀನಾಯ ಸೋಲಾಗಿದೆ. ಮಾನವೀಯತೆಗೆ ಗೆಲುವಾಗಿದೆ. ಚೆಡ್ಡಿ ರಿಪಬ್ಲಿಕ್ ಪತನ ಪ್ರಾರಂಭವಾಗಿರುವ ಸಂಕೇತ ಬಿತ್ತರಿಸಿದೆ ಈ ಲೋಕಲ್ ಫೈಟಿಂಗ್!

ಉತ್ತರ ಕರಾವಳಿಯಲ್ಲಿ...

ದಕ್ಷಿಣ ಕರಾವಳಿಗೆ ಹೋಲಿಸಿದರೆ ಉತ್ತರ ಕರಾವಳಿ (ಉತ್ತರ ಕನ್ನಡ)ಯಲ್ಲಿ ಹಿಂದೂತ್ವದ ಹುಚ್ಚಾಟ ಅಷ್ಟು ದೊಡ್ಡ ಮಟ್ಟದಲ್ಲೇನೂ ಇಲ್ಲ. ಹಿಂದೂ ಜಾಗರಣಾ ವೇದಿಕೆಯ ಬೆಂಕಿನವಾಬ ಅನಂತಕುಮಾರ್ ಹೆಗಡೆ (ಸಂಸದ) ನಯವಂಚಕ -ಚೆಡ್ಡಿ ವಿಶ್ವೇಶ್ವರ ಹೆಗಡೆ ಕಾಗೇರಿ (ಮಂತ್ರಿ) ಪ್ರಭುತ್ವ ಉತ್ತರ ಕನ್ನಡದಲ್ಲಿದ್ದರೂ ಜನ ಇವರನ್ನು ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದಾರೆ. ಭಟ್ಕಳದಂಥ ಕಡೆ ಹಿಂದೂತ್ವದ ಪಿತ್ತ ಏರಿದಷ್ಟೇ ಜೋರಾಗಿ ಇಳಿದು ಹೋಗಿದೆ. ಭಟ್ಕಳದಲ್ಲಿ ಕೋಮು ಗಲಭೆ ಎಬ್ಬಿಸಿ ಅನಂತ್ಮಾಣಿ, ಚಿತ್ತರಂಜನ್‌ನಂಥವರು ಮಾಡಿಕೊಂಡ ಲಾಭ ಹಿಂದುಳಿದವರಿಗೆ ಅರ್ಥವಾಗಿದೆ. ಹೀಗಾಗಿ ಈಗ ಭಟ್ಕಳದಲ್ಲಿ ಅನಂತ್ಮಾಣಿಗೆ ಓಟು ಕೊಡುವಾಗ ಹಿಂದೆ-ಮುಂದೆ ಜನ ಯೋಚಿಸುತ್ತಾರೆ. ಚೆಡ್ಡಿಗಳ ಪುರೋಹಿತಶಾಹಿ ರಾಜಕಾರಣ ಧಿಕ್ಕರಿಸಿ ಮಾಜಿ ಸಚಿವ ಶಿವಾನಂದ ನಾಯ್ಕನಂಥವರು ಈಗ ಬಿಜೆಪಿಗೆ ಬೈ ಹೇಳಿ ಹೊರಬಿದ್ದಿದ್ದಾರೆ. ಎದುರಾಳಿ ತಂಡದಲ್ಲಿ ಹಿಂದೂವಾದಿಗಳ ತಂತ್ರಕ್ಕೆ ಪ್ರತಿತಂತ್ರ ಹೆಣೆವ ದೇಶಪಾಂಡೆ, ದಿನಕರ ಶೆಟ್ಟಿ, ಸುನೀಲ್ ಹೆಗಡೆ, ರವೀಂದ್ರ ನಾಯ್ಕನಂಥವರಿದ್ದಾರೆ.

ಇಂಥ ಉತ್ತರ ಕನ್ನಡದಲ್ಲಿ ಮೊನ್ನೆ ನಡೆದ ಪೌರಸಂಸ್ಥೆಗಳ ಗದ್ದುಗೆ ಗುದ್ದಾಟದಲ್ಲಿ ಬಿಜೆಪಿ ಹೇಳ ಹೆಸರಿಲ್ಲದಂತೆ ಸೋತು ಸುಣ್ಣವಾಗಿದೆ! 'ಪತ್ರಿಕೆ' ಮೂರು ವಾರದ ಮೊದಲೇ ಸಮೀಕ್ಷೆಯಲ್ಲಿ ಬರೆದಂತೆ ಪ್ರತಿಷ್ಠಿತ ಶಿರಸಿ ನಗರಸಭೆಯಲ್ಲಿ ಮಂತ್ರಿ ಕಾಗೇರಿಯ ಬಿಜೆಪಿ ಪಡೆ ಹೀನಾಯವಾಗಿ

ತಂಜೀಮ್ ಪಾರುಪತ್ಯ!!

ಭಟ್ಕಳ ನಗರದಲ್ಲಿ ಪಾರ್ಟಿ ಪಾಲಿಟಿಕ್ಸ್ ದಿವಾಳಿಯೆದ್ದಿದೆ. 'ತಂಜೀಮ್' ಎಂಬ ನವಾಯತ ಮುಸ್ಲಿಮರ ರಾಜಕೀಯ-ಸಾಮಾಜಿಕ-ಧಾರ್ಮಿಕ ಪರಮೋಚ್ಛ ಸಂಸ್ಥೆಯನ್ನು ಎದುರು ಹಾಕಿಕೊಂಡು ಪಕ್ಷ ರಾಜಕಾರಣ ಮಾಡುವ ಗಟ್ಸ್ ಇಲ್ಲಿ ಯಾವ ನೇತಾರನಿಗೂ ಇಲ್ಲ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ಮುಸ್ಲಿಮ್ ಧರ್ಮಕಾರಣ! ಭಟ್ಕಳ ಪುರಸಭಾ ಆಡಳಿತದ ಮೇಲೆ ಲಾಗಾಯ್ತಿನಿಂದಲೂ 'ತಂಜೀಮ್'ನದೇ ನಿಯಂತ್ರಣ!

ಮುಸ್ಲಿಮ್ ಬಾಹುಳ್ಯದ ಕ್ಷೇತ್ರಗಳಲ್ಲಿ ತಂಜೀಮ್ ಹೇಳಿದವರೇ ನಾಮಪತ್ರ ಕೊಡಬೇಕು. ಅದೂ ಒಬ್ಬರೇ. ಅಂದರೆ ಅವಿರೋಧ ಆಯ್ಕೆಯೇ ಆಗಬೇಕು. ಇದು ತಂಜೀಮ್‌ನ ರಾಜಕೀಯ ಸಿದ್ಧಾಂತ. ನವಾಯತರ ಓಟ್ ಬ್ಯಾಂಕ್ ಮೇಲೆ ಕಣ್ಣಿಡುವ ಅಷ್ಟೂ ಪಾರ್ಟಿಯವರು ತಂಜೀಮ್‌ಗೆ ತಲೆ ಬಾಗುತ್ತಾರೆ. ಬಿಜೆಪಿಗೆ ಎದುರಿಸುವ ಜನ ಬೆಂಬಲ ಇಲ್ಲ. ಈ ಬಾರಿ 23 ವಾರ್ಡ್‌ಗಳ ಪೈಕಿ 12 ಮಂದಿ ಅವಿರೋಧವಾಗಿ ಗೆದ್ದಿದ್ದರು. 11 ಸ್ಥಾನಕ್ಕೆ ಚುನಾವಣೆ ನಡೆದಿತ್ತು. ಇದರಲ್ಲಿ ತಂಜೀಮ್ ಬೆಂಬಲಿತರಾದ 8 ಜನರೇ ಪ್ರತಿರೋಧವಿಲ್ಲದೆ ಗೆದ್ದಿದ್ದಾರೆ. ಕಾಂಗ್ರೆಸ್ 2 ಸ್ಥಾನ ಪಡೆದರೆ, ಜೆಡಿಎಸ್ 1 ಸೀಟು ಗೆದ್ದಿದೆ. ಬಿಜೆಪಿಯದು ಶೂನ್ಯ ಸಂಪಾದನೆ. ಸ್ಥಳೀಯ ಕಾಂಗ್ರೆಸ್ ಶಾಸಕ ಜೆ.ಡಿ. ನಾಯ್ಕ ಹೇತ್ಲಾಂಡಿ ಪುಢಾರಿ. ಮಾಜಿ ಶಾಸಕ ಶಿವಾನಂದ ನಾಯ್ಕ ಕದಡಿದ ನೀರಲ್ಲಿ ಮೀನು ಹಿಡಿಯಲು ಹವಣಿಸುತ್ತಿದ್ದಾನೆ.

ಹಿಂದೆಲ್ಲ ತಂಜೀಮ್ ಗುಂಪು ಕಾಂಗ್ರೆಸ್‌ಗೆ ಬೆಂಬಲಿಸುತ್ತಿತ್ತು. ತನ್ಮೂಲಕ ತನ್ನ ಪ್ರತಿನಿಧಿಗಳನ್ನು ಪುರಸಭೆಗೆ ಕಳಿಸುತ್ತಿತ್ತು. ಈಗ ತಂಜೀಮ್ ಧೀರರು ಕಾಂಗ್ರೆಸ್-ಜೆಡಿಎಸ್-ಮಾಜಿ ಬಿಜೆಪಿ ಶಿವಾನಂದ ನಾಯ್ಕರನ್ನು ಸದೆಬಡಿಗಿಸಿಕೊಂಡು ಹೋಗುವ ರಕ್ಷಣಾತ್ಮಕ ಆಟಕ್ಕೆ ಇಳಿದಿದ್ದಾರೆ. ಪುರಸಭೆ ಮೇಲೆ ಪ್ರಭುತ್ವ ಸಾಧಿಸುವ ಸ್ಕೆಚ್ ಹಾಕಿರುವ ತಂಜೀಮ್ ತಾಲೀಬಾನ್ ಆಗುವ ಅಪಾಯದ ಸಂಕೇತ ಇದೆಂದು ಪ್ರಜಾಪ್ರಭುತ್ವವಾದಿಗಳು ಆತಂಕಿತರಾಗಿದ್ದಾರೆ. ಉಡುಪಿಯ ಅಷ್ಟಮಠದ ಧರ್ಮಕಾರಣಕ್ಕೂ, ಭಟ್ಕಳದ ತಂಜೀಮ್‌ನ ಅವಿರೋಧ ರಾಜಕಾರಣಕ್ಕೂ, ವ್ಯತ್ಯಾಸವೇನಾದರೂ ಇದೆಯಾ? ಇಂಥದೊಂದು ಜಿಜ್ಞಾಸೆ ಈಗ ಮೂಡಿದೆ.

ಟ್ಟಿದೆ. ಕಳೆದ ಬಾರಿ ಆಡಳಿತಕ್ಕೇರಿದ ಬಿಜೆಪಿ ಈ 31 ಕ್ಷೇತ್ರಗಳ ಪೈಕಿ 10 ರಲ್ಲಷ್ಟೇ ಮಾನ ಕೊಂಡಿದೆ. ಕಾಂಗ್ರೆಸ್ ನಿರೀಕ್ಷೆಗೂ ಮೀರಿ 20 ಲ್ಲಿ ಭರ್ಜರಿ ಜಯ ಸಾಧಿಸಿದೆ. ತವರಿನ ಪೌರ ನ್ನೇ ಗೆಲ್ಲಲಾಗದ ಕಾಗೇರಿ ಮಾಣಿ ಈ ಬಾರಿ ಳಿದವರನ್ನು ಯಾಮಾರಿಸಿ ಶಾಸಕನಾಗುವುದು ಲ್ಲ ಎಂಬ ಮುನ್ಸೂಚನೆ ಇದಾಗಿದೆ.

ರಸಿಯಲ್ಲಿ ಆಡಳಿತಾರೂಢ ಬಿಜೆಪಿ ಸೋಲಿಗೆ ಕಾಗೇರಿಯ ಣ ಬಳಗದ ಲೂಟಿ, ಜಾತೀಯತೆ, ದಲಿತರು- ಳಿದವರನ್ನು ಕಾಡುವ ಆಡಳಿತವೇ ಕಾರಣವೆಂದು ಸಲಾಗುತ್ತಿದೆ. ಈ ಕಾಗೇರಿ ಶಿರಸಿ-ಸಿದ್ದಾಪುರಕ್ಕಷ್ಟೇ ತವಾಗಿದ್ದ ಮಂತ್ರಿ ಎಂದೇ ಪ್ರಸಿದ್ಧ ಆದರೂ ಆತನಿಂದ ಕ್ಕೂ ಮೂರು ಬಿಲ್ಲಿಯ ಪ್ರಯೋಜನಕಾರಿ ಕೆಲಸ ಾಗಲಿಲ್ಲ, ಕೋಟಿ ಕೋಟಿಗಳ ಬೋಗಸ್ ಕಾಮಗಾರಿ ಪರ್ಸೆಂಟೇಜ್ ಹೊಡೆಯಲಾಗಿದೆಯೇ ಹೊರತು ಎಲ್ಲ ಗದ ಜನರಲ್ಲಿ ಧೈರ್ಯ-ನಂಬಿಕೆ ತುಂಬುವ ಯಾವ ್ರೂ ಈತನಿಂದ ಆಗಿಲ್ಲ, ಮಿಸ್ಟರ್ ಕ್ಲೀನ್ ಎಂಬ ಹುಸಿ ಜಿನ ಕಾಗೇರಿಯ ಬಣ್ಣ ಈ ಐದು ವರ್ಷದಲ್ಲಿ ಥಾಳಾಗಿ ಲಾಗಿದೆ. ಇದು ಬಿಜೆಪಿಯನ್ನು ಶಿರಸಿ ನಗರಸಭೆ ಸಿದ್ಧಾಪುರ ಪಟ್ಟಣ ಪಂಚಾಯತ್ ಎರಡರಲ್ಲೂ ಭೂಗತ ದೆ!

ಾರವಾರ ನಗರಸಭೆ ಎಲೆಕ್ಷನ್‌ನಲ್ಲಿ ಅಡ್ನಾಡಿ ಮಂತ್ರಿ ೋಟಿಕರ್‌ನ ಬಿಜೆಪಿ ಮತ್ತು ಕಾಂಗ್ರೆಸ್ ಸಮಬಲದಲ್ಲಿ ಡುತ್ತವೆ ಎಂದು ಪತ್ರಿಕೆ ಬರೆದಿತ್ತು. ಆದು ಅಕ್ಷರಶಃ ಾಗಿದೆ. 31 ಸದಸ್ಯ ಬಲದ ನಗರಸಭೆಯಲ್ಲಿ ಬಿಜೆಪಿ- ್ ತಲಾ 13 ಸ್ಥಾನ ಪಡೆದಿವೆ. ಐವರು ಪಕ್ಷೇತರರು ್ದಾರೆ. ಇವರಲ್ಲಿ ನಾಲ್ವರನ್ನು ಅಸ್ನೋಟಿಕರ್ ಫಲಿತಾಂಶ ಎರಡು ತಾಸಿನಲ್ಲೇ ಖರೀದಿಸಿಬಿಟ್ಟಿದ್ದಾನೆ. ಕಾರವಾರ ್ಲಿ ಕ್ಷೇತ್ರದಲ್ಲಿ ಸೇರಿಕೊಂಡಿರುವ ಅಂಕೋಲಾ ಪಟ್ಟಣ ಂಯತ್‌ನಲ್ಲೂ ಅಸ್ನೋಟಿಕರ್‌ನ ಬಿಜೆಪಿಗೆ ಸ್ಪಷ್ಟ ಮತ ಪಡೆಯಲಾಗಿಲ್ಲ. ಇದರ ಅರ್ಥ ಇಷ್ಟೇ; ರಿಯಂತೆ ಆನಂದ ಅಸ್ನೋಟಿಕರನೂ ಮತ್ತೆ ನಾಗಬೇಕೆಂದಿದ್ದರೆ ಏಳು ಕೆರೆಯ ನೀರು ಕುಡಿಯಬೇಕು; ಅಸ್ನೋಟಿಕರ್‌ನ ಅಧಿಕಪ್ರಸಂಗದಿಂದ ರೋಸತ್ತು ಗಿದ್ದಾರೆಂದೇ ಅರ್ಥ.


ಳಿಯಾಳ-ದಾಂಡೇಲಿ ಏರಿಯಾದಲ್ಲಿ ನೆಲೆ-ಬೆಲೆ ಕೊಂಡಿದ್ದ ಕಾಂಗ್ರೆಸ್‌ನ ಹಳೆಯ ಹುಲಿ ಆರ್.ವಿ. ಾಂಡೆ ಬೂದಿಯಿಂದ ಫಿನಿಕ್ಸ್‌ನಂತೆ ಎದ್ದು ನಿಂತಿದ್ದಾರೆ! ಸಾಕಿ ಬೆಳೆಸಿದ್ದ ಸ್ವ-ಜಾತಿ ಹುಡುಗ ಸುನೀಲ್ (ಜೆಡಿಎಸ್) ಎದುರು ಮಂಡಿಯೂರಿದ್ದ ದೇಶಪಾಂಡೆ ಮರು ಘಳಿಗೆಯಿಂದಲೇ ಹಳಿಯಾಳದಲ್ಲಿ ಗೆಲ್ಲುವ ಮಂತ್ರ ಶುರುಹಚ್ಚಿಕೊಂಡಿದ್ದರು. ಕಳೆದ ಜಿ.ಪಂ. ವಣೆಯಲ್ಲಿ ಶಾಸಕ ಸುನೀಲ್ ಹೆಗಡೆಯನ್ನು ಮಣಿಸಿದ್ದ ಾಂಡೆ ಈಗ ದಾಂಡೇಲಿ ನಗರಸಭೆ ಮತ್ತು ಹಳಿಯಾಳ ಪಂಚಾಯ್ತಿಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಲಕ ಸುನೀಲ್ ಹೆಗಡೆಗೆ ನಡುಕ ಮೂಡಿಸಿದ್ದಾರೆ. ನದಲ್ಲಿ ಜನಪರ ಶಾಸಕನಾಗುವ ಭರವಸೆ ಮೂಡಿಸಿದ್ದ ್ ನಂತರ ಹಣದ ಹಪಾಹಪಿ, ಗಿಮಿಕ್ ಪಾಲಿಟಿಕ್ಸ್‌ಗೆ ವರ್ಚಸ್ಸು ಕಳೆದುಕೊಂಡುಬಿಟ್ಟ. ಸುನೀಲ್ ಹೆಗಡೆ ಶಾಸಕನಾಗೋದು ಕಷ್ಟ ಎಂಬುದು ದಾಂಡೇಲಿ- ಯಾಳದ ಲೋಕಲ್ ಸೆಮಿಫೈಲ್‌ನ ಸಂದೇಶ!

ುಮಟಾ-ಹೊನ್ನಾವರದಲ್ಲೂ ಜೆಡಿಎಸ್ ಶಾಸಕನದೇ ಾರು. ಎಮ್ಮೆಲ್ಲೆ ದಿನಕರ ಶೆಟ್ಟಿಗೆ ಕುಮಟಾ ಮತ್ತು ್ನಾವರ ಎರಡೂ ನಗರಾಡಳಿತಕ್ಕೆ ಪೂರ್ಣ ಬಹುಮತ ುಲಾಗಿಲ್ಲ. ಹೊನ್ನಾವರದಲ್ಲಿ ಜೆಡಿಎಸ್‌ಗೆ ಅಂಥ ೆಲೆಯಿಲ್ಲ, ಆದರೆ ಶೆಟ್ಟರ ತವರು ಕುಮಟಾದಲ್ಲಿ 23ರಲ್ಲಿ ಬರೀ 10 ವಾರ್ಡ್‌ನಲ್ಲಷ್ಟೇ ಗೆದ್ದಿದ್ದಾರೆ. ಉಳಿದರೂ ಮತ್ತೆ ಶಾಸಕನಾಗುವ ಧೈರ್ಯವಂತೂ ಲ್ಲ ಶೆಟ್ಟರಿಗೆ. ಹೊನ್ನಾವರದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ದೆ. ಬಿಜೆಪಿ ಮತ್ತು ಕೆಜೆಪಿ ನಡುವೆ ಹೊಯ್ದಾಡುತ್ತಿರುವ ್ಲಾಪುರ-ಮುಂಡಗೋಡು ಶಾಸಕ ವಿ.ಎಸ್.ಪಾಟೀಲ್ ೂ ಪಟ್ಟಣದಲ್ಲಿ ಮುಖಭಂಗಿತರಾಗಿದ್ದಾರೆ! ್ಲಾಪುರದಲ್ಲಿ ಕಾಂಗ್ರೆಸ್‌ನ ಎಮ್ಮೆಲ್ಲೆ ಕ್ಯಾಂಡಿಡೇಟ್ ಆಗುವ ಟಿಯಲ್ಲಿರುವ ಶಿವರಾಮ ಹೆಬ್ಬಾರ್ ಕಾಂಗ್ರೆಸ್‌ನ್ನು ಂಡ ವಿಜಯಿಯನ್ನಾಗಿಸಿದ್ದಾರೆ. ಇಲ್ಲಿ ಬಿಜೆಪಿ ಣವಾಗಿದೆ. ಮುಂಡಗೋಡನಲ್ಲಿ ಜೆಡಿಎಸ್ ದೊಡ್ಡ ಗಿದೆ. ಜೆಡಿಎಸ್‌ನಿಂದ ಅಸೆಂಬ್ಲಿ ಚುನಾವಣೆಗೆ ನಿಲ್ಲುವ ರಿಯಲ್ಲಿರುವ ತರಹೇವಾರಿ ಬಿಸಿನೆಸ್ ಗೋಲ್‌ಮಾಲ್ ಅನಿಲ್‌ಕುಮಾರ್‌ನ ಹಣ ಮುಂಡಗೋಡಲ್ಲಿ ಸ್ ಮುಂಚೂಣಿಗೆ ಬರುವಂತೆ ಮಾಡಿದೆ. ಆದರೆ ್ಲಾಪುರದಲ್ಲಿ ಆತನ ಆಟ ನಡೆದಿಲ್ಲ, ಮುಂಡಗೋಡ- ್ಲಾಪುರದಲ್ಲಿ ಬಿಜೆಪಿ ಸೋಲಿಗೆ ಆ ಪಕ್ಷದ ಸಂಸದ ್ಡಾಣಿಯ ಹೊಟ್ಟೆಕಿಚ್ಚು ದೊಡ್ಡ ಕೊಡುಗೆ ಕೊಟ್ಟಿದೆ. ುತ್ತರ ಕನ್ನಡದ ಪೌರಸಂಸ್ಥೆ ಎಲೆಕ್ಷನ್ ಬಿಜೆಪಿಯ ಿ-ಅನಂತ್ಮಾಣಿ-ಅಸ್ನೋಟಿಕರ್ ಅಯೋಗ್ಯರು- ಜನ ಓಗಳೆಂದು ಶರಾ ಬರೆದಿದೆ. ನಿದ್ದೆ ಬಡುಕ ್ಗರಿಗೆ ನೆಗೆಟಿವ್ ಓಟುಗಳಿಂದ ಒಣ ಧಮ್ ದೆ!

● ನಹುಷ

ಶಶಿಕುಮಾರ್:

ನಾಯಕನೋ? ಕ್ಷತ್ರಿಯನೋ?



ಮತ್ತೊಮ್ಮೆ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಸಿನಿಮಾ ನಟ, ಮಾಜಿ ಎಂಪಿ, ಹಾಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿ ಶಶಿಕುಮಾರ್ ಒಂದು ಗಂಭೀರ ಆರೋಪವನ್ನು ಎದುರಿಸುತ್ತಿದ್ದಾರೆ. ಅದು ಮಾಮೂಲಿ ಆರೋಪವಲ್ಲ, ಸುಳ್ಳುಜಾತಿ ಪ್ರಮಾಣಪತ್ರ ಸೃಷ್ಟಿಸಿ ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸೌಲಭ್ಯವನ್ನು ದುರುಪಯೋಗ ಮಾಡಿಕೊಂಡ ಆರೋಪ. ಈ ವಿವಾದ ಈಗ ಮತ್ತೆ ಕೋರ್ಟ್ ಮೆಟ್ಟಿಲೇರಿದ್ದು ಶಶಿಕುಮಾರ್ ಸದ್ಯದಲ್ಲೇ ಕಟಕಟೆಯೇರುವ ಎಲ್ಲಾ ಲಕ್ಷಣಗಳು ಕಂಡುಬರುತ್ತಿವೆ.

ಈ ಪ್ರಕರಣದ ವಿವರಗಳನ್ನು ಗಮನಿಸಿದರೆ ಹಲವು ಕುತೂಹಲಕರ ಸಂಗತಿಗಳು ಹೊರಬೀಳುತ್ತವೆ.

2008ರ ವಿಧಾನಸಭಾ ಚುನಾವಣೆಯಲ್ಲಿ ಚಳ್ಳಕೆರೆ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಶಶಿಕುಮಾರ್ ಸ್ಪರ್ಧಿಸಿದ್ದರು. ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸುವಾಗ ಎಸ್‌ಟಿ ಕೆಟಗರಿಗೆ ಬರುವ ನಾಯಕ ಜನಾಂಗಕ್ಕೆ ಸೇರಿದವನೆಂದು ಘೋಷಿಸಿಕೊಂಡು ಸರ್ಟಿಫಿಕೇಟ್ ಕೂಡ ಲಗತ್ತಿಸಿದ್ದರು. ನಾವು ಗಮನಿಸಬೇಕಾದ ಅಂಶವೇನೆಂದರೆ ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾದ್ದರಿಂದ ಇತರರಿಗೆ ಇಲ್ಲಿ ಸ್ಪರ್ಧಿಸಲು ಅವಕಾಶವಿರಲಿಲ್ಲ.

ಹೀಗೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದ 'ನಾಯಕ'ನನ್ನು ಕಂಡು ಕ್ಷೇತ್ರದ ಜನರಿಗೆ ಆಶ್ಚರ್ಯವೋ ಆಶ್ಚರ್ಯ. ಈ ಮರ್ಮವನ್ನು ಬೇಧಿಸಲು ಹೊರಟ ಕೆಲವರು ಈತನ ಹಿನ್ನೆಲೆಯನ್ನು ಕೆದಕುತ್ತಾ ಹೋದರು. ಆಗ ಬೆಳಕಿಗೆ ಬಂದಿದ್ದೇ ಶಶಿಕುಮಾರ್ ವಿದ್ಯಾಭ್ಯಾಸ ಮಾಡಿದ್ದ ಸ್ಕೂಲ್ ರೆಕಾರ್ಡ್. ಅದೇ ಬೆಂಗಳೂರಿನ ಸೇಂಟ್ ಜೋಸೆಫ್ ಸ್ಕೂಲ್. ಇಲ್ಲಿ 1972ರಿಂದ 1975ರ ಮಧ್ಯೆ ಬಾಲಕ ಶಶಿ ವ್ಯಾಸಂಗ ಮಾಡಿದ್ದ. ಈ ಶಾಲೆಯ ಎಲ್ಲಾ ದಾಖಲಾತಿಗಳಲ್ಲಿ ಶಶಿಯ ಜಾತಿಯನ್ನು 'ಹಿಂದೂ-ಕ್ಷತ್ರಿಯ' ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

ಶಶಿಕುಮಾರ್ ಜಾತಿ ಪ್ರಮಾಣ ಪತ್ರ ಗಿಟ್ಟಿಸಿದ ರೀತಿಯೂ ಮತ್ತಷ್ಟು ಗುಮಾನಿ ಮೂಡಿಸುವಂತಿದೆ. ಶಶಿಕುಮಾರ್ ತಂದೆ ರಾಜಪ್ರಕಾಶ್ ಅವರು ದಿನಾಂಕ 01.04.2008ರಂದು ತಮ್ಮ ಮಗ ಶಶಿಕುಮಾರ್ ಮತ್ತು ಸೊಸೆ ಹಾಗೂ ಮೊಮ್ಮಕ್ಕಳಿಗೆ ಜಾತಿ ಪ್ರಮಾಣ ಪತ್ರಕ್ಕಾಗಿ ಬೆಂಗಳೂರು ಉತ್ತರ ತಾಲೂಕು ಕಚೇರಿಯಲ್ಲಿ ಅರ್ಜಿ ಸಲ್ಲಿಸಿದರು.

ಅದೇ ದಿನ ಅರ್ಜಿಯ ವಿಚಾರಣೆ ನಡೆಯಿತು, ರೆವಿನ್ಯೂ ಇನ್ಸ್‌ಪೆಕ್ಟರ್‌ರಿಂದ ವಾಸ ಸ್ಥಳದ ಮಹಜರು ನಡೆಯಿತು, ಅವರು ತಹಸೀಲ್ದಾರ್‌ಗೆ ತಾವು ಕಂಡುಕೊಂಡ 'ಸತ್ಯ'ದ ಬಗ್ಗೆ ವರದಿ ಸಲ್ಲಿಸಿದರು. ಸದರಿ ಕಡತವನ್ನು ಸ್ಕ್ರೂಟಿನಿ ಮಾಡಲಾಯಿತು. ನಂತರ ತಹಸೀಲ್ದಾರ್‌ರವರು ರಾಜಪ್ರಕಾಶ್ ಅವರ ಅರ್ಜಿಯ ಮೇರೆಗೆ ಶಶಿಕುಮಾರ್ ಹಾಗೂ ಹೆಂಡತಿ ಮಕ್ಕಳಿಗೆ 'ನಾಯಕ ಜಾತಿ'ಯ ಸರ್ಟಿಫಿಕೇಟ್ ಕೊಟ್ಟೇಬಿಟ್ಟರು. ಇದೆಲ್ಲಾ ನಡೆದದ್ದು ಕೇವಲ 5-6 ತಾಸುಗಳ ಅವಧಿಯಲ್ಲೇ ಎಂದರೆ ನಿಮಗೆ ಆಶ್ಚರ್ಯವೆನಿಸಬಹುದು.

ಕೇವಲ ಮೂರು ತಾಸಿನ ಸಿನಿಮಾದಲ್ಲಿ ಇಡೀ ಜೀವನ ಚರಿತ್ರೆಯನ್ನೇ ತೋರಿಸುವ ಮಂದಿಗೆ 6 ತಾಸುಗಳಲ್ಲಿ ಒಂದು ಸರ್ಟಿಫಿಕೇಟ್ ದಕ್ಕಿಸಿಕೊಳ್ಳುವುದು ಮಹಾ ಕಷ್ಟವೇನಲ್ಲ ಬಿಡಿ. ಅದು ಹಾಗಿರಲಿ.

ಇದೇ ಚಳ್ಳಕೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹುಣಸನಕಟ್ಟೆ ಗ್ರಾಮದ ವಾಸಿ ಪಿ.ಸಿ.ವೆಂಕಟೇಶ್ ಎಂಬುವವರು ಶಾಲಾ ದಾಖಲಾತಿಗಳನ್ನು ಆಧರಿಸಿ, 28.04.2008ರಂದು ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್‌ನಲ್ಲಿ ದೂರು ದಾಖಲಿಸಿದರು. ಸದರಿ ದೂರು ಅಲಸೂರು ಗೇಟ್ ಪೊಲೀಸ್ ಠಾಣೆಗೆ ವರ್ಗಾವಣೆಯಾಯ್ತು. ಐಪಿಸಿ ಸೆಕ್ಷನ್ 196, 198, 420 ಹಾಗೂ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ-1989ರ ಅಡಿಯಲ್ಲಿ ಎಫ್‌ಐಆರ್ ದಾಖಲಾಯಿತು.

ಕೇಸೇನೋ ದಾಖಲಾಯಿತು. ಆದರೆ ಆ ನಂತರದ ಬೆಳವಣಿಗೆಗಳು ಹಲವು ಅನುಮಾನಗಳನ್ನು ಹುಟ್ಟುಹಾಕುತ್ತಿವೆ. ಸಿವಿಲ್ ರೈಟ್ಸ್ ಸೆಲ್‌ನವರು ಈ ಕೇಸಿನ ತನಿಖೆಯನ್ನೇ ದಿಕ್ಕು ತಪ್ಪಿಸಿಬಿಟ್ಟರು. ಕನಿಷ್ಟ ಪಕ್ಷ ದೂರುದಾರರ ಅಭಿಪ್ರಾಯವನ್ನಾದರೂ ಕೇಳಲಿಲ್ಲ. ತನಿಖೆಯ ಪ್ರಗತಿಯ ಬಗ್ಗೆಯೂ ಯಾವುದೇ ಮಾಹಿತಿ ಕೊಡಲಿಲ್ಲ.

ಇದೇ ವೇಳೆಯಲ್ಲಿ ಹೀರೋ ಶಶಿಕುಮಾರ್ ತಮ್ಮ ಶಾಲಾ ದಾಖಲಾತಿಯಲ್ಲಿ ನಮೂದಾಗಿರುವ ಜಾತಿ ತಪ್ಪಾಗಿದೆಯೆಂದೂ, ಅದನ್ನು ತಿದ್ದುಪಡಿ ಮಾಡಬೇಕೆಂದೂ ಕೋರಿ ಕೋರ್ಟ್‌ನಲ್ಲಿ ದಾವೆ ಹೂಡಿದರು. ಅದರಲ್ಲಿ ಮತ್ತೊಂದು ಒಳಸುಳಿಯೇನೆಂದರೆ ಈ ದಾವೆಯಲ್ಲಿ ಶಾಲಾ ಆಡಳಿತ ಮಂಡಳಿಯನ್ನು ಪಾರ್ಟಿ ಮಾಡಲೇ ಇಲ್ಲ, ಬದಲಿಗೆ ಅನುಕೂಲ ಸಿಂಧು ತಂತ್ರ ಅಳವಡಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮಿಷನರ್‌ರನ್ನು ಮಾತ್ರ ಪಾರ್ಟಿ ಮಾಡಿ ದಾವೆ ಹೂಡಿದರು. ನಿರೀಕ್ಷೆಯಂತೆ ಕಮಿಷನರ್ ಈ ಕೇಸಿನಲ್ಲಿ ಎಕ್ಸ್‌ಪಾರ್ಟಿ ಆದರು. ಹೀಗೆ ನಾನಾ ತಂತ್ರ ಬಳಸಿ ಕೇವಲ ಒಂದೂವರೆ ತಿಂಗಳಿನಲ್ಲೇ ಶಾಲಾ ದಾಖಲಾತಿಯ ತಿದ್ದುಪಡಿಯ ಆದೇಶವನ್ನು ಪಡೆದುಕೊಳ್ಳುವಲ್ಲಿ ಶಶಿಕುಮಾರ್ ಯಶಸ್ವಿಯಾದರು.

ಈ ಕೋರ್ಟ್ ಆದೇಶವನ್ನಾಧರಿಸಿ ಶಾಲಾ ದಾಖಲಾತಿಯ ತಿದ್ದುಪಡಿಯೂ ನಡೆದು ಹೋಯಿತು. ಮತ್ತೊಂದು ವಿಶೇಷವೇನೆಂದರೆ ಹೀಗೆ ಜಾತಿ ತಿದ್ದುಪಡಿ ಮಾಡಲು ವಿಶೇಷವಾದ ಸರ್ಕಾರಿ ನಿಯಮಾವಳಿಗಳು ಜಾರಿಯಲ್ಲಿದ್ದು, ಆ ನಿಯಮಾವಳಿಗಳನ್ನು ಗಾಳಿಗೆ ತೂರಲಾಗಿದೆ. ಮತ್ತೊಂದು ಅಂಶವೇನೆಂದರೆ ಜಾತಿ ತಿದ್ದುಪಡಿ ವಿಷಯಗಳು ಈ ಆದೇಶ ನೀಡಿದ ಸಿವಿಲ್ ಕೋರ್ಟ್‌ನ ವ್ಯಾಪ್ತಿಗೆ ಬರುವುದಿಲ್ಲವೆಂದು ಆರೋಪಿಸಿ ಮತ್ತೊಂದು ಕೇಸು ಹಾಕಲಾಗಿದೆ.

ಶಶಿಕುಮಾರ್ ಜಾತಿಯ ಕತೆ ಹೀಗಾದರೆ ಆತನ ಸೋದರಿ ಶ್ರೀದೇವಿಯ ಜಾತಿಯದು ಇನ್ನೊಂದು ಕತೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಸೇಂಟ್ ತೆರೇಸಾ ಗರ್ಲ್ಸ್ ಸ್ಕೂಲ್‌ನ ವಿದ್ಯಾರ್ಥಿನಿಯಾಗಿದ್ದ ಸೋದರಿ ಶ್ರೀದೇವಿಯ ಜಾತಿಯನ್ನು ಎಸ್.ಸಿ ಕೆಟಗರಿಗೆ ಬರುವ ಭೋವಿ ಜಾತಿ ಎಂದು ನಮೂದಿಸಲಾಗಿತ್ತು. ನಂತರದ ದಿನಗಳಲ್ಲಿ ಏನೆಲ್ಲಾ ಮಾಡಿ ಅದನ್ನು ನಾಯಕ ಎಂದು ತಿದ್ದುಪಡಿ ಮಾಡಿಸಲಾಗಿದೆ. ಅಂದಹಾಗೆ ಶಶಿಕುಮಾರ್ ಕುಟುಂಬವನ್ನು ಒಂದು ಜಾತ್ಯಾತೀತ ಕುಟುಂಬ ಎಂದು ಕರೆಯಲು ಯಾವ ಅಡ್ಡಿಯೂ ಇಲ್ಲ.

ಈಗ ಕೇಸಿನ ವಿಷಯಕ್ಕೆ ಬರೋಣ. ಶಶಿಕುಮಾರ್ ಕೋರ್ಟ್ ಮೂಲಕ ದಾಖಲೆ ತಿದ್ದುಪಡಿ ಮಾಡಿಸಿದ ನಂತರ ಸಿವಿಲ್ ರೈಟ್ಸ್ ಸೆಲ್‌ನವರು "ಸೂಕ್ತ" ವಿಚಾರಣೆ ನಡೆಸಿ, ಶಶಿಕುಮಾರ್ ಯಾವುದೇ ಅಕ್ರಮ ಮಾಡಿಲ್ಲವೆಂತಲೂ, ಅರ್ಜಿದಾರರು ತಪ್ಪು ಮಾಹಿತಿಯಿಂದ ದೂರು ನೀಡಿದ್ದಾರೆಂತಲೂ ಅಭಿಪ್ರಾಯ ಪಟ್ಟು, ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದರು. ಅಲ್ಲಿಗೆ ಈ ಪ್ರಕರಣಕ್ಕೆ ಎಳ್ಳುನೀರು ಬಿಟ್ಟು ಕೇಸನ್ನು ಮುಕ್ತಾಯ ಮಾಡಲು ಯತ್ನಿಸಲಾಯಿತು.

ಈಗ ಚಿತ್ರದುರ್ಗದವರೇ ಆದ ವಕೀಲ ಲಕ್ಷ್ಮಿಕಾಂತ ಎಂಬುವವರು ಮೇಲಿನ ಕೋರ್ಟ್ ಆದೇಶವನ್ನು ಪ್ರಶ್ನಿಸಿ ಶಶಿಕುಮಾರ್ ಮತ್ತು ಶಿಕ್ಷಣ ಇಲಾಖೆಯ ಕಮಿಷನರ್ ವಿರುದ್ಧ ದಾವೆ ಹೂಡಿದ್ದಾರೆ. ಸದರಿ ಲಕ್ಷ್ಮಿಕಾಂತ್ ನಾಯಕ ಜಾತಿಯವರೇ ಆಗಿದ್ದು, ಎಸ್‌ಟಿಗಳಿಗೆ ಮೀಸಲಾಗಿರುವ ಸೌಲಭ್ಯವನ್ನು ಸುಳ್ಳು ದಾಖಲೆಗಳ ಮೂಲಕ ಅನ್ಯ ಜಾತಿಯವರು ಕಬಳಿಸುತ್ತಿದ್ದಾರೆಂದು ಆರೋಪಿಸಿದ್ದಾರೆ.

ಅಷ್ಟೇ ಅಲ್ಲ, ಶಶಿಕುಮಾರ್‌ಗೆ ವಿವಾದಾಸ್ಪದ ಪ್ರಮಾಣ ಪತ್ರ ನೀಡಿದ ತಹಸೀಲ್ದಾರರಿಗೆ ಈಗಾಗಲೇ ಹಲವಾರು ಲೀಗಲ್ ನೋಟೀಸ್‌ಗಳು ಜಾರಿಯಾಗಿವೆ. ಆದರೆ ಈ ಆಸಾಮಿ ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಬದಲಿಗೆ ಶಶಿಕುಮಾರ್ ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳಿದ್ದ ಕಡತವೇ ಕಚೇರಿಯಿಂದ ನಾಪತ್ತೆಯಾಗಿಬಿಟ್ಟಿದೆ. ಸಂಬಂಧಿಸಿದ ಕಡತ ಕಚೇರಿಯಲ್ಲಿ ಲಭ್ಯವಿಲ್ಲ ಎಂಬ ಹಿಂಬರಹ ಮಾತ್ರ ಈಗ ಲಭ್ಯ.

ಹೀಗೆ ವಿಚಿತ್ರ ತಿರುವು ಪಡೆದುಕೊಳ್ಳುತ್ತಿರುವ ಈ ಪ್ರಕರಣದಲ್ಲಿ ಅಕ್ರಮ ಸಾಬೀತಾದ ಪಕ್ಷದಲ್ಲಿ ಶಶಿಕುಮಾರ್ ಹಾಗೂ ಆತನಿಗೆ ಸರ್ಟಿಫಿಕೇಟ್ ನೀಡಿದ ತಹಶೀಲ್ದಾರ್ ಮುಂತಾದ ಅಧಿಕಾರಿಗಳು ಎಸ್‌ಸಿ-ಎಸ್‌ಟಿ (ಪ್ರಿವೆನ್ಷನ್ ಆಫ್ ಅಟ್ರಾಸಿಟೀಸ್) ಆಕ್ಟ್-1989ರ ಪ್ರಕಾರ 6 ತಿಂಗಳಿಂದ ಒಂದು ವರ್ಷದವರೆಗೆ ಜೈಲಿನಲ್ಲಿ ರೆಸ್ಟ್ ಮಾಡಬೇಕಾಗಿ ಬರುತ್ತದೆ.

ಒಂದು ತಮಾಷೆಯ ಸಂಗತಿಯೇನೆಂದರೆ ಶಶಿಕುಮಾರ್ ನಟನೆಯ ಇನ್ನೂ ತೆರೆ ಕಾಣದಿರುವ ಕೆಲವು ಸಿನಿಮಾಗಳ ಹೆಸರು ಈಗಿನ ಸನ್ನಿವೇಶಕ್ಕೆ ಪಕ್ಕಾ ಮ್ಯಾಚ್ ಆಗುತ್ತಿವೆ.

'ನಾ ಮಹಾಬುದ್ಧಿವಂತ, 'ವಿಷ್ಣು,' ಅಂದರ್ ಬಾಹರ್ (ಅಂದರ್ ಅಂದರೆ ಜೈಲಿಗೆ ಹೋಗುವುದು, ಬಾಹರ್ ಎಂದರೆ ಹೊರಗೆ ಬರುವುದು ಎಂಬ ಅನ್ವರ್ಥವೂ ಇದೆ), ' ಟೇಕ್ ಇಟ್ ಈಸಿ!!"

ಎಲ್ಲವನ್ನೂ ಟೇಕ್ ಇಟ್ ಈಸಿ ಎನ್ನುವ ಮಹಾ ಬುದ್ಧಿವಂತರಿಗೆ ಒಳ್ಳೇ ಬುದ್ಧಿ ಬರೋದು ಯಾವಾಗ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹೀರೋನ ಟ್ರಾಕ್ ರೆಕಾರ್ಡ್





ಶಶಿಕುಮಾರ್ ತಂದೆ ರಾಜಪ್ರಕಾಶ್ ಬೆಂಗಳೂರಿನ ಕಾಟನ್‌ಪೇಟೆಯಲ್ಲಿ ಟೆಲಿಫೋನ್ ಆಪರೇಟರ್ ಆಗಿದ್ದರು. ಸಿನಿಮಾ ಜಗತ್ತಿಗೆ ಇಳಿಯುವ ಮುನ್ನ ಶಶಿಕುಮಾರ್ ಕೂಡ ನಗರದ ಎನ್‌ಐಟಿಯಲ್ಲಿ ಒಂದು ಸಾಧಾರಣ ಉದ್ಯೋಗದಲ್ಲಿದ್ದರು. ಆತನ ಡ್ಯಾನ್ಸಿಂಗ್ ಪ್ರತಿಭೆ ಹಾಗೂ ಅದೃಷ್ಟಗಳು ಒಟ್ಟಾಗಿ ಈತನನ್ನು ಸಿನಿಮಾ ಜಗತ್ತಿಗೆ ತಂದು ನಿಲ್ಲಿಸಿತು. ಸುಮಾರು 100 ಸಿನಿಮಾಗಳಲ್ಲಿ ನಟಿಸಿರುವ ಶಶಿಕುಮಾರ್ 1990ರ ದಶಕದ ಕನ್ನಡದಲ್ಲಿ ಮೊದಲ ಸಾಲಿನ ಹೀರೋ ಆಗಿ ಮಿಂಚಿದ್ದರು.

ಆದರೆ ಶಶಿಕುಮಾರ್‌ಗೆ ಗ್ರಹಚಾರ ಕಾರ್ ಆಕ್ಸಿಡೆಂಟ್ ಮೂಲಕ ಕಾಯುತ್ತಿತ್ತು. ಈ ಆಕ್ಸಿಡೆಂಟ್‌ನಲ್ಲಿ ಮುಖದ ಭಾಗವೇ ಜಜ್ಜಿಹೋಗಿ, ಸರ್ಜರಿಯ ನಂತರ ಶೇಪ್ ಚೇಂಜ್ ಆಗೋಯ್ತು. ಈ ದುರ್ಘಟನೆಯ ನಂತರ ಸಿನಿಮಾ ಕ್ಷೇತ್ರದಲ್ಲಿ ಬೇಡಿಕೆ ಕುಸಿದಿದ್ದರಿಂದ ನಮ್ಮ ಹೀರೋ ರಾಜಕೀಯದ ಹಾದಿ ಹಿಡಿದರು.

1999ರ ಲೋಕಸಭಾ ಚುನಾವಣೆಯಲ್ಲಿ ಜೆಡಿಯು ಪಕ್ಷದಿಂದ ಸ್ಪರ್ಧಿಸಿ ಎಂಪಿಯೂ ಆಗಿಬಿಟ್ಟರು. ಮುಂದಿನ 5 ವರ್ಷಗಳ ಕಾಲ ದಂಡಪಿಂಡವಾಗಿ ಕಾಲಕಳೆದು, ನಾಲಾಯಕ್ ಎಂಪಿ ಎನಿಸಿಕೊಂಡಿದ್ದೇ ಇವರ ಸಾಧನೆ. 2004ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಹಾರಿ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ ಜಾಲಪ್ಪನ ವಿರುದ್ಧ ಸೋತರು. ದೇವೇಗೌಡರ ಜನತಾದಳದಲ್ಲಿ ಉಸಿರುಕಟ್ಟಿಸುವ ವಾತಾವರಣ ಇದೆಯೆಂದು ಆರೋಪಿಸಿ 2006ರಲ್ಲಿ ಕಾಂಗ್ರೆಸ್ "ತತ್ವವನ್ನು ಒಪ್ಪಿ" ಕಾಂಗ್ರೆಸ್ ಬಾವುಟ ಕೈಯಲ್ಲಿಡಿದರು. 2008ರ ಅಸೆಂಬ್ಲಿ ಚುನಾವಣೆಯಲ್ಲಿ ಎಸ್‌ಟಿ ಮೀಸಲು ಕ್ಷೇತ್ರವಾದ ಚಳ್ಳಕೆರೆಯಿಂದ ಶಶಿಕುಮಾರ್ 'ನಾಯಕ' ಆಗಿ ಸ್ಪರ್ಧಿಸಿ, ಬಿಜೆಪಿಯ ತಿಪ್ಪೇಸ್ವಾಮಿಯೆದುರು ಕೇವಲ 289 ಮತಗಳ ಅಂತರದಿಂದ ಸೋತರು. ಇಲ್ಲದೇ ಹೋಗಿದ್ದರೆ ಶಶಿಕುಮಾರ್ ಕರ್ನಾಟಕ ವಿಧಾನಸಭೆಯಲ್ಲಿ ಹಾಗೂಹೀಗೂ 5 ವರ್ಷಗಳು ಕಾಲಕ್ಷೇಪ ಮಾಡಿಬಿಡುತ್ತಿದ್ದರು.

ಇವರ ಅಪ್ರತಿಮ ಸಾಧನೆಯಿಂದ ರೋಸಿಹೋಗಿರುವ ಚಳ್ಳಕೆರೆಯ ಕೆಲವು ಕಾಂಗ್ರೆಸ್ ಕಾರ್ಯಕರ್ತರು ಬಳ್ಳಾರಿ ಪಾದಯಾತ್ರೆ ವೇಳೆಯಲ್ಲಿ ಮಾನ್ಯ ಶಶಿಕುಮಾರ್‌ಗೆ ಛೀಮಾರಿ ಹಾಕಿ ಅಟಕಾಯಿಸಿಕೊಂಡಿದ್ದರು: ಹೀಗಾಗಿ ಈ ಹೀರೋ ಪಾದಯಾತ್ರೆಯಿಂದಲೇ ಕಾಲ್ಕಿತ್ತಿದ್ದರು.

ಈಗ ಮತ್ತೆ ಅಸೆಂಬ್ಲಿ ಚುನಾವಣೆ ಬಂದಿರುವುದರಿಂದ ಎಲ್ಲಿಂದ ಕಾಲ್ಕಿತ್ತು ಎಲ್ಲಿ ಕಾಲೂರಲು ಬಯಸಿದ್ದಾರೆ ಎಂಬುದೇ ಕುತೂಹಲಕಾರಿ ಪ್ರಶ್ನೆ.

ಶೆಟ್ಟರ್ ದುರಾಡಳಿತ–ಬಿಡಿಎ ಹಗರಣ

● ಪಾರ್ವತೀಶ

ಕೆಂಪೇಗೌಡ ಬಡಾವಣೆ-1000 ಕೋಟಿ ಲೂಟಿ!

ಬಿಜೆಪಿ ಸರ್ಕಾರದ ಕೊನೆಯ ಗಳಿಗೆಗಳ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಾನ-ಮರ್ಯಾದೆ ಉಳಿಸಿಕೊಂಡು ಮನೆಗೆ ಹೋಗುವಂತೆ ಕಾಣುತ್ತಿಲ್ಲ.

ಮೇಲ್ನೋಟಕ್ಕೆ 'ಅಂದರಿಕಿ ಮಂಚಿವಾಡು ಅನಂತಯ್ಯ'ನಂತೆ ಕಾಣುವ ಶೆಟ್ಟರ್ ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳ ದೊಡ್ಡ ಹಗರಣವೊಂದನ್ನು ನಡೆಸಲು ಕೈಹಾಕಿದ್ದಾರೆ. ಇದೊಂತರ ಬೆಣ್ಣೇಲಿ ಕೂದಲು ತೆಗೆಯುವಂತಹ ಡೀಲ್.

ಹೊರನೋಟಕ್ಕೆ ಕಾನೂನುಬದ್ಧವಾಗಿರುವಂತೆ ಕಾಣಬೇಕು. ಆದರೆ ಒಳಗೆ ಡೀಲ್ ಕುದುರಿಸಿಕೊಳ್ಳಲು ಅವಕಾಶವೂ ಸಿಗುವಂತಿರಬೇಕು ಹಾಗಿದೆ. ಇವರ ಕಾರ್ಯವೈಖರಿ. ಈ ಡೀಲ್‌ನಲ್ಲಿ ಬಿಡಿಎ ಉನ್ನತಾಧಿಕಾರಿಗಳು, ನಗರಾಭಿವೃದ್ಧಿ ಇಲಾಖೆಯ ತಿಮಿಂಗಿಲಗಳು, ಆಂಧ್ರ ಪ್ರದೇಶದ ಮೂರು ದೊಡ್ಡ ಗುತ್ತಿಗೆದಾರರು, ಹಾಗೂ ಬಿಜೆಪಿ ನಾಯಕರ ಗ್ಯಾಂಗ್ ಇದೆ.

ಕೆಂಪೇಗೌಡ ಬಡಾವಣೆ ಗುತ್ತಿಗೆ ಗೋಲ್‌ಮಾಲ್

ಕಳೆದ ಐದು ವರ್ಷಗಳಿಂದಲೂ ಸುದ್ದಿಯಲ್ಲಿರುವ ಕೆಂಪೇಗೌಡ ಬಡಾವಣೆ ನಿರ್ಮಾಣ ಕಾರ್ಯವು ಇನ್ನು ಕೆಲವೇ ತಿಂಗಳಲ್ಲಿ ಸ್ಪಷ್ಟ ರೂಪ ತಳೆಯಲಿದೆ. ಯಾವುದೇ ಒಂದು ಲೇಔಟ್ ನಿರ್ಮಾಣ ಪಕ್ಕಾ ಆಗುವುದು ಭೂ ಸ್ವಾಧೀನ ಪ್ರಕ್ರಿಯೆ ಮುಗಿದ ನಂತರ. ಆಮೇಲೆ ರಸ್ತೆ ನಿರ್ಮಾಣ, ಚರಂಡಿ, ವಿದ್ಯುತ್ ಇತ್ಯಾದಿಗಳಾಗಿ ಸೈಟು ವಿಂಗಡಣೆ ಮಾಡಿದರೆ ಅಲ್ಲಿಗೆ ಆ ಬಡಾವಣೆಯ ಸೈಟುಗಳ ಸಾರ್ವಜನಿಕ ಹಂಚಿಕೆಗೆ ರೆಡಿಯಾದಂತೆ.

ಕೆಂಪೇಗೌಡ ಬಡಾವಣೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಈಗ ಕೊನೆಯ ಹಂತ ತಲುಪಿದೆ. ಆರಂಭದಲ್ಲಿ ನೋಟಿಫೈ ಆಗಿದ್ದ 4043 ಎಕರೆಯಷ್ಟು ಭೂಮಿ ಈಗ ಡಿನೋಟಿಫೈ ಆಗೀ ಆಗೀ ವಿವಾದವಾಗಿ ಕೊನೆಗೆ 1469 ಎಕರೆ 8 ಗುಂಟೆಗೆ ಬಂದು ನಿಂತಿದೆ.

ಈ 1469.8 ಎಕರೆಯ ಬಡಾವಣೆಯಲ್ಲಿ 25 ಮೀಟರ್, 30 ಮೀಟರ್ ಹಾಗೂ 45 ಮೀಟರ್ ರಸ್ತೆಗಳ ನಿರ್ಮಾಣಕ್ಕೆಂದು ಬಿಡಿಎ ಈಗ ಕೈ ಹಾಕಿದೆ.



ಮುನ್ನೂರು ಕೋಟಿ ರೂಪಾಯಿಗಳ ಡೀಲ್ ಕುದುರುತ್ತಿರುವುದು ಇಲ್ಲಿಯೆ. ಜೊತೆಗೆ ಬಿಡಿಎಗೆ 700 ಕೋಟಿ ನಷ್ಟವೂ ಆಗುತ್ತಿದೆ.

ಇಡೀ ಕೆಂಪೇಗೌಡ ಬಡಾವಣೆಯೊಳಗಿನ ರಸ್ತೆಗಳ ನಿರ್ಮಾಣವನ್ನು ಐದು ಪ್ಯಾಕೇಜ್‌ಗಳಾಗಿ ವಿಂಗಡಿಸಿದ ಬಿಡಿಎ ಈ ಕಾಮಗಾರಿಗಳನ್ನು ನಿರ್ವಹಿಸಲು ಒಟ್ಟು 1069 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿ ಟೆಂಡರ್ ಪ್ರಕಟಣೆ ನೀಡಿತ್ತು.

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿದ್ದೆಲ್ಲಾ ನೆರೆಯ ಆಂಧ್ರಪ್ರದೇಶದ ದೊಡ್ಡ ದೊಡ್ಡ ಖಾಸಗಿ ಗುತ್ತಿಗೆದಾರ ಸಂಸ್ಥೆಗಳಾಗಿದ್ದವು. ಮೆಸರ್ಸ್ ಮಧುಕಾನ್ ಕಂಪನಿ, ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಹಾಗೂ ಬಿ. ಸೀನಯ್ಯ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ. ಎನ್ನುವ ಈ ಗುತ್ತಿಗೆದಾರರು ಬಿಡ್ ಸಲ್ಲಿಸಿ ತಮ್ಮ ಅನುಭವ, ಆರ್ಥಿಕ ಸಾಮರ್ಥ್ಯ, ಯಂತ್ರೋಪಕರಣಗಳ ಪಟ್ಟಿಯನ್ನೆಲ್ಲಾ ನೀಡಿ ಟೆಂಡರ್ ಮಂಜೂರಾತಿಗೆ ಕೋರಿದ್ದವು. ಆದರೆ ಇವರೆಂತಾ ಕಿಲಾಡಿಗಳೆಂದರೆ ಬಿಡಿಎನ ಐದು ಪ್ಯಾಕೇಜ್‌ಗಳ ಪೈಕಿ ಒಂದೇ ಒಂದು ಪ್ಯಾಕೇಜ್‌ಗೂ ಬಿಡಿಎ ನಿಗದಿಪಡಿಸಿದ್ದ ಮೊತ್ತಕ್ಕೆ ಬದ್ಧರಾಗದೆ ಶೇ. 180 ರಷ್ಟು ಹೆಚ್ಚು ಮೊತ್ತ ನಮೂದಿಸಿದ್ದರು. ಅಂದರೆ ರಸ್ತೆಗಳ ನಿರ್ಮಾಣಕ್ಕೆ ಬಿಡಿಎ ಒಟ್ಟಾರೆ 1069 ಕೋಟಿ ರೂಪಾಯಿ ನಿಗದಿಮಾಡಿದ್ದರೆ ಈ ಖಾಸಗಿ ಗುತ್ತಿಗೆದಾರ ಕಂಪನಿಗಳು ತಮ್ಮ ಬಿಡ್‌ನಲ್ಲಿ ಐದು ಪ್ಯಾಕೇಜ್‌ಗೆ ಒಟ್ಟಾರೆ 2800 ಕೋಟಿ ರೂಪಾಯಿ

Sl No	Package No	Estimated Amount (In crores)	L1 Agency Name	Amount quoted by the lowest tenderer (In crores)	Excess	Percentage of Excess
1	Package - I	158.14	Madhucon	426.48	268.34	169.68
2	Package – II	243.72	NCC	625.96	382.24	156.83
3	Package – III	212.92	Madhucon	569.92	357.00	167.66
4	Package – IV	214.68	NCC	552.28	337.60	157.25
5	Package – V	240.13	BSCPL	639.30	399.17	166.23

ಐದು ಪ್ಯಾಕೇಜ್‌ಗಳಿಗೆ ಬಿಡಿಎ ನಿಗದಿ ಪಡಿಸಿದ ಟೆಂಡರ್ ಮೊತ್ತ ಹಾಗೂ ಗುತ್ತಿಗೆದಾರರು ಕೇಳಿದ ಮೊತ್ತ

	%	Original Cost of work	Updated cost of work in Crores	Payment during tender period Amount in crores	Balance payment 50% in crores	Adjustments for Notional Escalation in prices for the balance 50%	Maintainance cost for two years at 5% of the cost of project for each year	Interest on Balance payment in Crores for 54 months	Total Project cost including interest and maintenance cost in Crores	L1 Amount in crores	Agency	Lowest Negotiated Amount of Tender offered In Crore	Excess after Negotiations
1	I	158.14	163.52	81.76	81.76	26.16	8.176	94.04	265.74	426.48	Madhucon	324.98	59.24
2	II	243.72	251.86	125.93	125.93	40.30	12.593	144.84	409.30	625.96	NCC	500.70	91.40
3	III	212.92	219.14	109.57	109.57	35.06	10.958	126.03	356.13	569.92	Madhucon	437.55	81.42
4	IV	214.68	222.38	111.19	111.19	35.58	11.12	127.89	361.39	552.28	NCC	441.75	80.36
5	V	240.13	249.36	124.68	124.68	39.90	12.4775	143.41	405.25	639.3	BSCPL	494.80	89.55
Total		1069.6	1106.26	553.13	553.13	177.00	55.32	636.22	1797.80	2813.94		2199.78	401.98

ಸಂಧಾನದ ನಂತರ ಹೆಚ್ಚುವರಿಯಾಗಿರುವ ಟೆಂಡರ್ ಮೊತ್ತದ ವಿವರಗಳು

ಅರ್ಕಾವತಿ ಬಡಾವಣೆ 270 ಎಕರೆ ಡೀಲ್

'ನಾಯಿ ಬಾಲ ಯಾವತ್ತಿಗೂ ಡೊಂಕೇ' ಎನ್ನುವ ಮಾತು ನಮ್ಮ ರಾಜಕಾರಣಿಗಳಿಗೆ ಹೇಳಿ ಮಾಡಿಸಿದಂತಿದೆ.

ಡಿ ನೋಟಿಫಿಕೇಶನ್ ದಂಧೆಯಲ್ಲಿ ಇದು ಪದೇ ಪದೇ ಸಾಬೀತಾಗುತ್ತಲೇ ಇದೆ.

ಈಗಿನದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸರದಿ.

ಯಡಿಯೂರಪ್ಪ ಸೋಮಣ್ಣ ಕುಮಾರಸ್ವಾಮಿ, ಡಿಕೆಶಿ, ಕೃಷ್ಣಯ್ಯ ಶೆಟ್ಟಿ, ಜಿ.ಟಿ. ದೇವೇಗೌಡ ಇವರೆಲ್ಲಾ ಹಲವು ಡಿನೋಟಿಫಿಕೇಶನ್ ಪ್ರಕರಣಗಳಲ್ಲಿ ಅಕ್ರಮವೆಸಗಿ ಸಿಕ್ಕಿಬಿದ್ದು ಈಗ ಕೋರ್ಟ್ ವಿಚಾರಣೆ ಎದುರಿಸುತ್ತಿದ್ದಾರೆ. ಈ ಹಗರಣಗಳು ಒಂದರ ಹಿಂದೊಂದರಂತೆ ಹೊರ ಬೀಳುತ್ತಿದ್ದಾಗ ಇದಕ್ಕೆಲ್ಲಾ ಕೊನೆ ಹಾಡುವಂತೆ ಒಂದು ಹೊಸ ನಿಯಮವನ್ನೇ ರೂಪಿಸಲಾಗಿತ್ತು, 2012ರ ಡಿಸೆಂಬರ್ 12ರಂದು ವಿಧಾನಸಭಾ ಅಧಿವೇಶನದಲ್ಲೇ ಈ ಬಗ್ಗೆ ಚರ್ಚಿಸಿ ಐವರು ಸದಸ್ಯರುಳ್ಳ ಡಿನೋಟಿಫಿಕೇಶನ್ ಪ್ರಕರಣಗಳ ವಿಚಾರಣಾ ಸಮಿತಿಯೊಂದನ್ನು ಅಸ್ತಿತ್ವಕ್ಕೆ ತರಲಾಗಿತ್ತು, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಐವರು ಉನ್ನತಾಧಿಕಾರಿಗಳಿರುತ್ತಾರೆ ಈ ಸಮಿತಿಯಲ್ಲಿ, ಬಿಡಿಎ, ಹೌಸಿಂಗ್ ಬೋರ್ಡ್, ಕೆಐಎಡಿಬಿ ಸೇರಿದಂತೆ ಯಾವುದೇ ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳು ಒಮ್ಮೆ ಭೂ ಸ್ವಾಧೀನಕ್ಕಾಗಿ ನೋಟಿಫೈ ಮಾಡಿರುವ ಜಮೀನುಗಳನ್ನು ಪುನಃ ಡಿನೋಟಿಫೈ ಮಾಡಬೇಕೆಂದರೆ ಈ ಐವರ ಸಮಿತಿಯ ಒಪ್ಪಿಗೆ ಪಡೆಯಲೇಬೇಕೆಂಬ ನಿಯಮವಿದೆ. ಅಲ್ಲದೆ ಈ ಸಮಿತಿಯ ಸದಸ್ಯರಿಗೂ ನಿರ್ಧಾರ ಕೈಗೊಳ್ಳಲು ಕೆಲವು ಖಚಿತ ಹಾಗೂ ನಿರ್ದಿಷ್ಟ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ. ಒಮ್ಮೆ ಈ ಸಮಿತಿಯು ನಿರ್ಧಾರ ಕೈಗೊಂಡ ನಂತರ ಮುಖ್ಯಮಂತ್ರಿ, ಮಂತ್ರಿ ಅಥವಾ ಇನ್ನಿತರರು ಯಾವುದೇ ಕಾರಣಕ್ಕೂ ಅದರಲ್ಲಿ ತಲೆ ಹಾಕುವಂತಿಲ್ಲ ಎಂಬ ನಿಯಮವೂ ಇದೆ.

ಬಹುಶಃ ಜಗದೀಶ್ ಶೆಟ್ಟರ್ ಸರ್ಕಾರಕ್ಕೆ ತಾವೇ ಮಾಡಿರುವ ಈ ನಿಯಮ ಮರೆತು ಹೋಗಿರಬಹುದು. ಉದ್ದೇಶಿತ ಅರ್ಕಾವತಿ ಲೇಔಟ್‌ಗೆಂದು ನೋಟಿಫೈ ಆಗಿದ್ದ ಜಮೀನಿನ ಪೈಕಿ 270 ಎಕರೆಗಳನ್ನು ಡಿನೋಟಿಫೈ ಮಾಡಲು ಶೆಟ್ಟರ್ ಈಗ ಮುಂದಾಗಿದ್ದು ಈ ಐವರ ಸಮಿತಿಯ ಗಮನಕ್ಕೂ ತಾರದೆ, ಒಪ್ಪಿಗೆ ಪಡೆಯದೆ ಮುಂದಡಿ ಇಡುತ್ತಿದ್ದಾರೆ.

ವಿಚಾರ ಏನೆಂದರೆ,

ಅರ್ಕಾವತಿ ಲೇಔಟ್‌ಗೆಂದು ನೋಟಿಫೈ ಆಗಿದ್ದ 2750 ಎಕರೆಗಳಿಗೆ ಸಂಬಂಧಿಸಿದಂತೆ ಕೆಲವು ಭೂ ಮಾಲೀಕರು ಸುಪ್ರೀಂಕೋರ್ಟ್‌ನಲ್ಲಿ ಕೇಸ್ ದಾಖಲಿಸಿದ್ದರು. (ಬೊಂಡು ರಾಮಸ್ವಾಮಿ V/s ಬಿಡಿಎ 4097/2010) ವಿಚಾರಣೆ ನಡೆಸಿದ ಕೋರ್ಟ್ 400 ಎಕರೆಯಷ್ಟು ಜಮೀನನ್ನು ಡಿನೋಟಿಫೈ ಮಾಡಬಹುದೆಂದು ಆ ಸಂಬಂಧ ನಿಯಮಾನುಸಾರ ಕ್ರಮ ವಹಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು, ಈ ಆದೇಶವು ಭ್ರಷ್ಟ ಅಧಿಕಾರಿಗಳಿಗೆ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆನಿಸಿತ್ತು, ಕೋರ್ಟ್ ಆದೇಶವನ್ನೇ ಹಿಡಿದು ಭೂಮಾಲೀಕರೊಂದಿಗೆ ಡೀಲ್ ಕುದುರಿಸಿರುವ ಬಿಜೆಪಿ ನಾಯಕರು ಇದುವರೆವಿಗೂ ಒಟ್ಟು 270 ಎಕರೆ ಜಮೀನನ್ನು ಡಿನೋಟಿಫೈ ಮಾಡಲು ಗುರುತಿಸಿದ್ದಾರೆ. ಇವೆಲ್ಲಾ ದೊಡ್ಡ ರಿಯಲ್ ಎಸ್ಟೇಟ್ ಕುಳಗಳು, ರಾಜಕಾರಣಿಗಳಿಗೆ ಪರೋಕ್ಷವಾಗಿ ಸೇರಿರುವ ಜಮೀನುಗಳಾಗಿದ್ದು ಇವರಿಂದ ಸಾಕಷ್ಟು ಹಣ ಕಿತ್ತು ತಿಂದಿದ್ದಾರೆ. ನಂತರ ಡಿನೋಟಿಕೇಶನ್‌ಗೆ ಶಿಫಾರಸ್ಸು ಮಾಡುವಾಗ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನೇತೃತ್ವದ ಸಮಿತಿಗೆ ಫೈಲ್ ಕಳುಹಿಸುವ ಬದಲಾಗಿ ನೇರವಾಗಿ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿದ್ದಾರೆ ಬಿಡಿಎ ಅಧಿಕಾರಿಗಳು. ಯಾವಾಗ ಭ್ರಷ್ಟ ಬಿಡಿಎ ಅಧಿಕಾರಿಗಳಿಂದ ಈ ಕಡತ ಬಂತೋ ಆಗ ನಗರಾಭಿವೃದ್ಧಿ ಇಲಾಖಾ ಕಾರ್ಯದರ್ಶಿಯಾಗಿದ್ದ ಭರತ್ ಲಾಲ್ ಮೀನ ಡಿನೋಟಿಫಿಕೇಶನ್ ಪ್ರಸ್ತಾವನೆಗೆ ಒಪ್ಪಿಗೆ ಕೊಡಲು ನಿರಾಕರಿಸಿಬಿಟ್ಟರು.

ಕಡತವು ಐವರ ಸಮಿತಿಗೆ ಹೋಗಿ ಸಮ್ಮತಿ ಪಡೆದು ಬರಲೇಬೇಕೆಂದು ಪಟ್ಟು ಹಿಡಿದರು. ಕೋಟಿಗಟ್ಟಲೆ ಹಣ ತಿಂದು ಆದಾಗಲೇ ಕಮಿಟ್ ಆಗಿದ್ದ ಶೆಟ್ಟರ್ ಸರ್ಕಾರಕ್ಕೆ ಹಾಗೂ ಬಿಡಿಎ ಅಧಿಕಾರಿಗಳಿಗೆ ಭರತ್‌ಲಾಲ್ ಮೀನಾರ ನಿಲುವು ಅಡ್ಡಗೋಡೆಯಾಗಿಬಿಟ್ಟಿತು. ಹಾಗಾಗಿ ಅವರನ್ನು ರಾತ್ರೋರಾತ್ರಿ ವರ್ಗಾ ಮಾಡಿ ಆ ಸ್ಥಾನಕ್ಕೆ ಈಗ ಲಕ್ಷ್ಮೀನಾರಾಯಣರನ್ನು ತಂದು ಕೂರಿಸಲಾಗಿದೆ.

ಇನ್ನೇನು ಕೆಲವೇ ದಿನಗಳಲ್ಲಿ ಈ ಡೀಲ್ ಪೂರ್ಣಗೊಳ್ಳಲಿದೆ. ಈ ಡಿನೋಟಿಫಿಕೇಶನ್‌ಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆಯಾದರೂ ನಿಯಮಾನುಸಾರ ಆ ಪ್ರಕ್ರಿಯೆ ನಡೆಯಬೇಕೆಂದು ಸ್ಪಷ್ಟವಾಗಿ ಹೇಳಿದೆ. ಹಾಗಿದ್ದಾಗಲೂ ಶೆಟ್ಟರ್ ಸರ್ಕಾರಕ್ಕೆ ಆ ನಿಯಮ ಪಾಲನೆ ಬೇಕಾಗಿಲ್ಲ, ಈ ಡೀಲ್‌ನಲ್ಲಿ ಕೋಟಿಗಟ್ಟಲೆ ಹಣ ಈಗಾಗಲೇ ಕೈ ಬದಲಾಗಿದೆ. ಅಕಸ್ಮಾತ್ ಐವರ ಸಮಿತಿಯು ಕೆಲವರ ಭೂಮಿಯ ಡಿನೋಟಿಫಿಕೇಶನ್‌ಗೆ ಒಪ್ಪದಿದ್ದರೆ, ಪ್ರಸ್ತಾವನೆಯಲ್ಲೇನಾದರೂ ತಾಂತ್ರಿಕ ಲೋಪಗಳು ಸಿಕ್ಕಿಬಿದ್ದರೆ ತಾವು ಮಾಡಿಕೊಂಡಿರುವ ಡೀಲ್ ಫೇಲ್ ಆಗಿಬಿಡಬಹುದೆಂಬ ಭಯ ಶೆಟ್ಟರ್‌ಗಿರುವಂತಿದೆ. ಇದಲ್ಲದೆ



ಐವರ ಸಮಿತಿಯು ಈ ಡಿನೋಟಿಫಿಕೇಶನ್ ಪ್ರಸ್ತಾವನೆಗೆ ತಕ್ಷಣ ಒಪ್ಪಿಗೆ ನೀಡುವ ಬದಲಾಗಿ ತನ್ನದೇ ಕಾನೂನು ಬದ್ಧ ಪ್ರಕ್ರಿಯೆ ಪಾಲಿಸಲು ಹೊರಟರೂ ಆ ಕೆಲಸ ಪೂರ್ಣಗೊಳ್ಳಲು ಕನಿಷ್ಠ ಪಕ್ಷ ಐದಾರು ತಿಂಗಳೇ ಬೇಕಾಗುತ್ತದೆ. ಇದಾಗುವ ವೇಳೆಗೆ ತನ್ನ ಸರ್ಕಾರವೇ ಇರಲ್ಲಾ ಎಂದರಿತಿರುವ ಶೆಟ್ಟರ್ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ತಾವು ಡೀಲ್ ಕುದುರಿಸಿಕೊಂಡಿರುವ 270 ಎಕರೆಗೆ ಡಿನೋಟಿಫೈ ಆದೇಶ ಕೊಡಿಸಲು ತುದಿಗಾಲಲ್ಲಿ ನಿಂತಿದ್ದಾರೆ.

ಶೆಟ್ಟರ್ ಸಾಹೇಬರೇ....

ಕೊಂಚ ನಿಧಾನಿಸಿ, ಆತುರದಲ್ಲಿ ಏನೇ ತಿಂದರೂ ಜೀರ್ಣಿಸಿಕೊಳ್ಳುವುದು ಕಷ್ಟ, ಅಕಸ್ಮಾತ್ ನಾಳೆ ಯಾರಾದರೂ ಇದರ ಬಗ್ಗೆ ಮಾಹಿತಿ ಸಂಗ್ರಹಿಸಿ ಕೇಸ್ ಹಾಕಿದರೆ ನಿಮ್ಮನ್ನು ಆ ಜಗದೀಶ್ವರನೂ ಕಾಪಾಡಲಾರ.

...ಡೀಲ್ ಕಾರಣದಿಂದ ಸೈಟ್ ಬೆಲೆ ಏರಿಕೆಯಾಗಲಿದೆ

...ಎ ಅಂಜನಾಪುರ ಲೇಔಟ್ ರಚಿಸಿದಾಗ ಚದರಡಿ ಸೈಟಿನ ಬೆಲೆ ಕೇವಲ 200 ರೂ. ಇತ್ತು, ನಂತರ ... 6ನೇ ಹಂತ, ವಿಶ್ವೇಶ್ವರಯ್ಯ ಲೇಔಟ್ ನಿರ್ಮಾಣವಾದಾಗ ಚದರಡಿ ರೇಟ್ 400 ಕ್ಕೇರಿತ್ತು, ಈಗ ...ಕೆಂಪೇಗೌಡ ಬಡಾವಣೆಯಲ್ಲಿ ಚದರಡಿ ಸೈಟಿನ ಬೆಲೆ ರೂ. 600 ಆಗಬಹುದೆಂದು ಸಾರ್ವಜನಿಕರು ... ಮಾಡಿಕೊಂಡಿದ್ದರು.

...ೆ ಇದು ಖಂಡಿತಾ ಸಾಧ್ಯವಿಲ್ಲ, ಬಿಡಿಎ ಮೂಲಗಳ ಪ್ರಕಾರ ಜನ ಚದರಡಿಗೆ ಈಗ 1500 ರೂಪಾಯಿ ...ಾಗುತ್ತದೆ.

... ಈ ರಸ್ತೆ ನಿರ್ಮಾಣದ ಡೀಲೇ ನೇರ ಕಾರಣವಾಗಿದೆ.

...ಗೌಡ ಬಡಾವಣೆಯ ರಸ್ತೆ ನಿರ್ಮಾಣಕ್ಕೆಂದು ನಿಗದಿತ ಮೊತ್ತಕ್ಕಿಂತ ಒಂದು ಸಾವಿರ ಕೋಟಿ ರೂಪಾಯಿಗಳನ್ನು ...ತ್ತಿಗೆದಾರರಿಗೆ ಕೊಡಲು ಒಪ್ಪಿಕೊಂಡರೆ ಆ ಖರ್ಚು ಸಹಜವಾಗಿಯೇ ಸೈಟು ಖರೀದಿಸುವ ಸಾರ್ವಜನಿಕರ ಮೇಲೆಯೇ ಬೀಳುತ್ತದೆ. ಜೊತೆಗೆ ಇನ್ನು ಮುಂದೆ ಲೇಔಟ್‌ಗಾಗಿ ಬಿಡಿಎ ರೈತರಿಂದ ಭೂಸ್ವಾಧೀನ ...ಳ್ಳುವಾಗ ಶೇ. 40ರಷ್ಟು ಜಾಗವನ್ನು ಆಯಾ ರೈತರಿಗೇ ನೀಡುವ ಪಾಲಿಸಿಯೂ ಇರುವುದರಿಂದ ...ಹಂಚಲು ಬಿಡಿಎ ಬಳಿ ಹೆಚ್ಚು ಸೈಟುಗಳು ಇರುವುದಿಲ್ಲ, ಅಲ್ಲದೆ ಲಭ್ಯ ಭೂಮಿಯನ್ನೇ ಸೈಟುಗಳಾಗಿ ...ೂ ಲೇಔಟ್ ನಿರ್ಮಾಣಕ್ಕೆಂದು ಖರ್ಚಾದ ಹಣವೂ ಹುಟ್ಟುವುದಿಲ್ಲ. ಹಾಗಾಗಿ ಸೈಟಿನ ಬೆಲೆ ಏರಿಸಿ ...ಸುಲಿಯುವ ದಾರಿ ಬಿಟ್ಟರೆ ಶೆಟ್ಟರ್ ಸರ್ಕಾರಕ್ಕೆ ಬೇರೆ ಆಯ್ಕೆ ಎಲ್ಲಿದೆ? ಬಿಜೆಪಿಗಳು ನ್ಯಾಯವಂತರಾಗದಿದ್ದರೆ ...ರ್ಮಾಣದಲ್ಲಿ ಒಂದು ಸಾವಿರ ಕೋಟಿಯ ಡೀಲ್ ನಡೆಸದೆ ಇದ್ದಿದ್ದರೆ ಬಡಾವಣೆ ನಿರ್ಮಾಣದ ಖರ್ಚು ...ಾಗಿರುತ್ತಿತ್ತು. ಜೊತೆಗೆ ಜನರಿಗೆ ಚದರಡಿಗೆ 600 ರಿಂದ 800 ರೂಪಾಯಿಯೊಳಗೆ ಸೈಟು ಸಿಗುತ್ತಿತ್ತು.

...ೂದಿಸಿದ್ದವು. ಈ ವ್ಯತ್ಯಾಸದ ಮೊತ್ತವೇ 1731 ...ೂಪಾಯಿಗಳಷ್ಟಿದೆ.


...ಂತದಲ್ಲಿ ದಿನಾಂಕ 5-1-2013ರಂದು ಟೆಂಡರ್ ...ಎಯು ಗುತ್ತಿಗೆದಾರರು ನಿಗದಿತ ಮೊತ್ತಕ್ಕಿಂತ ...ಣ ಕೇಳುತ್ತಿರುವುದನ್ನು ಗಮನಿಸಿ ಅದೇ ...ಂದಿಗೆ ಸಂಧಾನಕ್ಕೆ ಮುಂದಾಯಿತು.

...ಐದು ಪ್ಯಾಕೇಜ್‌ಗಳಿಗೆ ಬಿಡಿಎ ನಿಗದಿ ಮಾಡಿದ್ದ ...ಾಗೂ ಗುತ್ತಿಗೆದಾರರು ಕೇಳಿದ್ದ ಮೊತ್ತದ ...ನ್ನು ಇಲ್ಲಿ ನೀಡಿದೆ. (ಟೇಬಲ್ ಗಮನಿಸಿ)

...ತ ಮೊತ್ತಕ್ಕಿಂತ ಸಾವಿರಾರು ಕೋಟಿ ರೂಪಾಯಿ ...ತ್ತಕ್ಕೆ ಖಾಸಗಿ ಗುತ್ತಿಗೆದಾರರು ಬಿಡ್ ಮಾಡುವ ...ಉದ್ದೇಶವೇ ಸಾರ್ವಜನಿಕ ಹಣವನ್ನು ಲೂಟಿ ... ದುರುದ್ದೇಶ. ಅಂತಹ ಸನ್ನಿವೇಶ ಬಂದಾಗ

ಬಡಾವಣೆಯ ರಸ್ತೆಗಳ ನಿರ್ಮಾಣ ಮಾಡುವ ಕಾಮಗಾರಿಯ ಮೊತ್ತವನ್ನು ಬಿಡಿಎ ನಿರ್ಧರಿಸುವಾಗ ಇವತ್ತಿನ ಕೂಲಿ, ಕಬ್ಬಿಣ-ಸಿಮೆಂಟ್ ಬೆಲೆ, ಯಂತ್ರೋಪಕರಣಗಳ ಸವಕಳಿ, ಕಾಮಗಾರಿ ಮುಗಿಸುವಷ್ಟರಲ್ಲಿ ಏರಬಹುದಾದ ಬೆಲೆಗಳ ಅಂದಾಜನ್ನೂ ಲೆಕ್ಕ ಹಾಕಿಯೇ ಒಟ್ಟಾರೆ ಟೆಂಡರ್ ಮೊತ್ತವನ್ನು ನಿಗದಿ ಮಾಡಿತ್ತು. ಹಾಗಾಗಿ ಈ ಐದು ಪ್ಯಾಕೇಜ್‌ಗಳ ಒಟ್ಟು ಮೊತ್ತ 1069 ಕೋಟಿ ರೂ. ಎಂದಾಗಿತ್ತು. ಆದರೆ ಮಧುಕಾನ್, ನಾಗಾರ್ಜುನ ಹಾಗೂ ಸೀನಯ್ಯ ಕಂಪನಿಗಳು 2800 ಕೋಟಿ ರೂ. ಕೊಟ್ಟರೆ ಈ ಕೆಲಸ ಮಾಡುವುದಾಗಿ ಹೇಳಿದವು. ನಿಯಮಾನುಸಾರ ಟೆಂಡರ್ ಮೊತ್ತಕ್ಕಿಂತ ಶೇ.10ರ ಹೆಚ್ಚಳ ಎಂದರೆ ಆ ಮೊತ್ತವು 1069+106=1175 ಕೋಟಿ ರೂ. ಆಗಬೇಕಿತ್ತಲ್ಲವೆ?

ಆದರೆ ಬಿಡಿಎ ಉನ್ನತಾಧಿಕಾರಿಗಳು ಖಾಸಗಿ


...ನರ್ ಶಾಂ ಭಟ್


ಛೇರ್ಮನ್ ಸುಬೀರ್ ಹರಿಸಿಂಗ್


ಗುತ್ತಿಗೆದಾರ ಸೀನಯ್ಯ

...ಇಡೀ ಟೆಂಡರ್ ಪ್ರಕ್ರಿಯೆಯನ್ನೇ ರದ್ದುಗೊಳಿಸಿ ...ಡರ್ ಕರೆಯಬೇಕೆಂಬ ನಿಯಮವಿದೆ. ಇದು ...ರಿ, ಅರೆ ಸರ್ಕಾರಿ ಸಂಸ್ಥೆಗಳಿಗೂ ಅನ್ವಯಿಸುವ ...ಈ ಬಗ್ಗೆ ಹಣಕಾಸು ಇಲಾಖೆಯು 2002ರ ...3 ರಲ್ಲೇ ಒಂದು ಸುತ್ತೋಲೆ (ಸಂಖ್ಯೆ ಪಿಡಬ್ಲ್ಯೂಡಿ: ...ಓ/ಎಫ್‌ಸಿ/2001(ಪಿ-2) ಹೊರಡಿಸಿದೆ. ಆ ...ಯ ಪ್ರಕಾರ ಒಂದು ನಿರ್ದಿಷ್ಟ ಕಾಮಗಾರಿ ...ೕರೆ ಬಿಡ್‌ದಾರರು ಸಿಗುವುದೇ ಇಲ್ಲ ಅಂತಾದಲ್ಲಿ ...ರ್ಕಾರಿ ಗುತ್ತಿಗೆದಾರ ಸಂಸ್ಥೆಗಳು (ಲ್ಯಾಂಡ್ ಆರ್ಮಿ ...ಆಸಕ್ತಿ ತೋರದಿದ್ದಲ್ಲಿ, ಸಾಮರ್ಥ್ಯ ಇರದಿದ್ದಲ್ಲಿ, ...ತುರ್ತಿನ ಸಂದರ್ಭದಲ್ಲಿ ಮಾತ್ರ ಹಾಲಿ ...ರೊಂದಿಗೆ ಬಿಡ್ ಮೊತ್ತಕ್ಕೆ ಸಂಬಂಧಿಸಿದಂತೆ ...ನಡೆಸಬಹುದೆಂದು ಹೇಳಿದೆ. ಅದರಲ್ಲೂ ಮತ್ತೆ ... ಸ್ಪರ್ಧೆ ನೀಡುತ್ತಾ ಹೆಚ್ಚುವರಿ ಬಿಡ್ ಮೊತ್ತವನ್ನು ...ಖಾಸಗಿ ಸಂಸ್ಥೆಗಳೊಂದಿಗೆ ಸಂಧಾನ ನಡೆಸುವುದೇ ...ಯಾವ ಯಾವ ಮೊತ್ತಕ್ಕೆ ಎಷ್ಟೆಷ್ಟು ಶೇಕಡಾ ... ಮೊತ್ತಕ್ಕೆ ಸಮ್ಮತಿಸಬಹುದೆಂತಲೂ ಹೇಳಿದೆ. ...ವಾಗಿ ರೂ. 20 ಲಕ್ಷದಿಂದ 50 ಲಕ್ಷಗಳವರೆಗಿನ ...ದಕ್ಕೂ ಹೆಚ್ಚಿನ ಕಾಮಗಾರಿಗಳಿಗೆ ಅನಿವಾರ್ಯ ...ಲ್ಲಿ ಶೇ. 10 ರಷ್ಟು ಹೆಚ್ಚು ...ಪಾವತಿಸಲು ಸಂಧಾನ ...ದು ಎಂದು ಸೂಚಿಸಲಾಗಿದೆ.

...ರೆ ಬಿಡಿಎ ಈ ...ಮನ್ನು ಸಂಪೂರ್ಣ ನಿರ್ಲಕ್ಷಿಸಿ ...ತ್ತಿಗೆದಾರರೊಂದಿಗೆ ಒಂದು ...ಡೆಸಿದೆ. ಬಿಡಿಎ ಕಮೀಶನರ್ ..., ಚೇರ್‌ಮನ್ ಸಂಬೀರ್ ..., ಸಿಎಂರವರ ಪ್ರಧಾನ ...ಶಿ ಲಕ್ಷ್ಮೀನಾರಾಯಣ್, ...ಬರ್ ಮೆಂಬರ್ ...ಯಣ್ ಇವರೆಲ್ಲರೂ ಶಾಮೀಲಾಗಿ ಒಟ್ಟು ...ಟಿ ರೂಗಳಿಗೆ ಕಾಮಗಾರಿ ನಿರ್ವಹಿಸುವಂತೆ ...ರೊಂದಿಗೆ ಸಂಧಾನ ಮಾಡಿಕೊಂಡಿದ್ದಾರೆ.

... ವಿಷಯಗಳ ಗಮನಿಸಿ, ಕೆಂಪೇಗೌಡ

ಗುತ್ತಿಗೆದಾರರೊಂದಿಗೆ ಸಂಧಾನ ನಡೆಸುವುದಾಗಿ ಹೇಳಿಕೊಂಡು ಈಗ 2200 ಕೋಟಿ ರೂಪಾಯಿಗೆ ರಸ್ತೆ ಕಾಮಗಾರಿ ನಿರ್ವಹಿಸುವಂತೆ ಈ ಕಂಪನಿಗಳನ್ನು ಒಪ್ಪಿಸಿದ್ದಾರೆ. ಅಂದರೆ ನಿಗದಿತ ಮೊತ್ತಕ್ಕಿಂತ ರೂ. 1131 ಕೋಟಿ ಹೆಚ್ಚುವರಿ ಮೊತ್ತದ ಡೀಲ್ ಇದು.

ಮುಖ್ಯಮಂತ್ರಿ ಶೆಟ್ಟರರ ಗಮನಕ್ಕೆ ಬರದಂತೆ, ಅವರ ಸಮ್ಮತಿ ಇರದೆ ಈ ಡೀಲ್ ಅಖೈರಾಗಲು ಕಾನೂನಿನಲ್ಲೇ ಅವಕಾಶವಿಲ್ಲ. ಜೊತೆಗೆ ಇದು ಹಣಕಾಸು ಇಲಾಖೆಯ ಸುತ್ತೋಲೆಯ ನೇರ ಉಲ್ಲಂಘನೆಯೂ ಆಗಿದೆ.

ಬಿಡಿಎ ಅಧಿಕಾರಿಗಳು ಈಗ ನಡೆಸಿರುವ ಸಂಧಾನದ ಅಂತಿಮ ಮೊತ್ತದ ವಿವರಗಳನ್ನೂ 2ನೇ ಟೇಬಲ್‌ನಲ್ಲಿ ನೀಡಿದೆ.

ಭ್ರಷ್ಟಾಚಾರದ ಗಂಗೋತ್ರಿಯಂತಿರುವ ಬಿಡಿಎ ನಾನಾ ರೀತಿಯ ಭೂಹಗರಣ, ಡಿನೋಟಿಫಿಕೇಶನ್ ದಂಧೆ, ಅಕ್ರಮ ಸೈಟು ವಿಲೇವಾರಿ ಕೇಸ್‌ಗಳಲ್ಲಿ ಚಾಂಪಿಯನ್ ಎನಿಸಿಕೊಂಡಿದೆ.

ಈಗ ನೋಡಿದರೆ ಲೇಔಟ್ ನಿರ್ಮಾಣದ ಹಂತದಲ್ಲೇ ಖಾಸಗಿ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಒಂದು ಸಾವಿರ ಕೋಟಿ ರೂಪಾಯಿಗಳ ಹಗರಣ ಮಾಡಲು ಹೊರಟಿದೆ.



ಈ ಪೈಕಿ 300 ಕೋಟಿ ರೂಪಾಯಿ ಲಂಚದ ಬಾಬ್ತು, ಉಳಿದ 700 ಕೋಟಿ ರೂ. ಬಿಡಿಎಗೆ ನೇರವಾಗಿ ನಷ್ಟವಾಗಲಿರುವ ಮೊತ್ತವಾಗಿದೆ.

ಈ ಹಗಲು ದರೋಡೆಗೆ ಬಿಡಿಎ ಅಧಿಕಾರಿಗಳ ಲಂಚಗುಳಿತನ ಮಾತ್ರ ಕಾರಣವಾಗಿಲ್ಲ. ಜೊತೆಗೆ ಬಿಜೆಪಿ ನಾಯಕರ ಧನದಾಹ ಹಾಗೂ ಮುಂದಿನ ಚುನಾವಣಾ ಖರ್ಚಿಗಾಗಿ ದುಡ್ಡು ಸಂಗ್ರಹಿಸುವ ಹಾತಕ ಉದ್ದೇಶವೂ ಇರುವಂತಿದೆ.

ಈ ಹಗರಣದ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಸ್ತಾಪಿಸಿದ್ದಾರೆ. ಆದರೆ ಬಿಡಿಎ ತಿಮಿಂಗಿಲಗಳಾಗಲಿ ಅಥವಾ ಶೆಟ್ಟರ್ ಸರ್ಕಾರಕ್ಕಾಗಲಿ ಬಿಸಿ ಮುಟ್ಟಿಸಲು ಇದೆಲ್ಲಿ ಸಾಕಾಗುತ್ತದೆ?



266 ಕೋಟಿ TA-DA ನುಂಗಿದ ಬಿಜೆಪಿಗಳು

'ಅಲ್ಪನಿಗೆ ಐಶ್ವರ್ಯ ಬಂದ್ರೆ ಅರ್ಧ ರಾತ್ರೀಲಿ ಕೊಡೆ ಹಿಡಿದನಂತೆ' ಎನ್ನುವ ಗಾದೆ ಮಾತು ಬಿಜೆಪಿ ಸರ್ಕಾರಕ್ಕೆ ಹೇಳಿ ಮಾಡಿಸಿದಂತಿದೆ. ಯಾಕೆಂದರೆ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಅಭಿವೃದ್ಧಿ ಕಾರ್ಯಗಳಿಗಿಂತ ಈ ಸರ್ಕಾರ ಹೆಚ್ಚು ಒತ್ತು ನೀಡಿರುವುದು ಹೆಲಿಕಾಪ್ಟರ್ ಪ್ರವಾಸ, ವಾಸ್ತು ಪ್ರಕಾರ ಸಚಿವರ ಮನೆ ರಿಪೇರಿ, ಕಲರ್‌ಫುಲ್ ಜಾಹಿರಾತು, ಐಷಾರಾಮಿ ಕಾರು ಖರೀದಿ ಕಮ್ ರಿಪೇರಿ, ತಮ್ಮ ವೇತನ ಹೆಚ್ಚಿಸಿಕೊಳ್ಳುವಂತಹ ಟೋಟಲಿ ಬಕ್ವಾಸ್ ಕೆಲಸಗಳಿಗೆ. ಹಣ, ಗಣಿ, ಹಗರಣಗಳ ಮಾತು ಒತ್ತಟ್ಟಿಗಿರಲಿ ಪರಮ ದ್ರೋಹಿ ಬಿಜೆಪಿಗಳ ದುಂದುವೆಚ್ಚಕ್ಕಾಗಿ ಸಾರ್ವಜನಿಕರ ತೆರಿಗೆ ಹಣದಲ್ಲಿ ಒಟ್ಟು ಪೋಲಾಗಿರುವುದು 266,13,24,315 ರೂಪಾಯಿಗಳು ಎಂದರೆ ನೀವು ನಂಬಲೇಬೇಕು!

ಮೊದಲೆಲ್ಲ ನೆಲದಲ್ಲಿ ನಡೆದಾಡುತ್ತಿದ್ದ ಸರ್ಕಾರ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಆಗಸಕ್ಕೆ ಶಿಫ್ಟ್ ಆಗಿತ್ತು. ಅಂದರೆ ಮುಖ್ಯಮಂತ್ರಿಯಿಂದ ಹಿಡಿದು ಸಚಿವರವರೆಗೆ ಎಲ್ಲರೂ ಹೆಲಿಕಾಪ್ಟರ್, ವಿಮಾನ ಹಾರಾಟಕ್ಕೆ ಜೋತುಬಿದ್ದರು. ಅದರಲ್ಲೂ ಮೊದಲ ಮೂರು ವರ್ಷ ಅಧಿಕಾರದಲ್ಲಿದ್ದ ಯಡಿಯೂರಪ್ಪನಿಗೆ ದೂರದ ವೈಷ್ಣೋದೇವಿ ಮಂದಿರದಿಂದ ಪಕ್ಕದ ರಾಮನಗರಕ್ಕೆ ಹೋಗಲೂ ಹೆಲಿಕಾಪ್ಟರೇ ಬೇಕಿತ್ತು. ಯಡ್ಡಿಯ ಅವಧಿಯಲ್ಲೇ ಸರ್ಕಾರದ ವಿಮಾನ ಪ್ರಯಾಣಕ್ಕೆ ಖರ್ಚಾಗಿರೋದು ಬರೋಬ್ಬರಿ 43 ಕೋಟಿ 16 ಲಕ್ಷ ರೂಪಾಯಿ. ಇನ್ನು ಒನ್ ಡೌನ್ ಬ್ಯಾಟ್ಸ್‌ಮನ್ ಆಗಿ ಬಂದ ಸದಾನಂದ ಗೌಡರ ಹಾರಾಟಕ್ಕೆ ಕೈ ಬಿಟ್ಟದ್ದು 13 ಕೋಟಿ ರೂಪಾಯಿ. ಸದ್ಯ ಅಧಿಕಾರದಲ್ಲಿರುವ ಜಗದೀಶ್ ಶೆಟ್ಟರ್ ಯಾರಿಗೇನು ಕಮ್ಮಿ ಎನ್ನುವಂತೆ ಗದ್ದುಗೆ ಏರಿದ ಆರೇ ತಿಂಗಳಲ್ಲಿ 7 ಕೋಟಿ 98 ಲಕ್ಷ ರೂಪಾಯಿಯನ್ನು ಹೆಲಿಕಾಪ್ಟರ್‌ಗೆಂದು ಖರ್ಚು ಮಾಡಿದ್ದಾರೆ. ಈ ಬಹುಪಾಲು ಹಾರಾಟಗಳು ಘಟಿಸಿರೋದು ದಿಲ್ಲಿಯ ಹೈಕಮಾಂಡ್ ಎಡತಾಕಲು. ಅದೂ ತಮ್ಮ ಆಂತರಿಕ ಕಚ್ಚಾಟದ ಶಮನಕ್ಕಾಗಿ!

ಇನ್ನು ಬಿಜೆಪಿಗಳ ರಸ್ತೆ ಮೇಲಿನ ಓಡಾಟವೂ ದುಬಾರಿ ಯಡ್ಡಿ ಸರ್ಕಾರದ ಮೊದಲ ಮೂರೂವರೆ ವರ್ಷ ಅವಧಿಯಲ್ಲಿ ಮಂತ್ರಿಗಾರುಗಳು ಪ್ರಯಾಣ ಭತ್ಯೆಯ ನೆಪದಲ್ಲಿ ಬೊಕ್ಕಸದಿಂದ ಸುಲಿದಿರೋದು 9,05,26,429 ರೂಪಾಯಿ! ಇಲ್ಲೂ ಸಹಾ ಟೇಪ್ ಕಟಿಂಗ್, ಫೋಟೋ ಫೋಸ್, ಜೈ ಘೋಷಗಳಂತಹ ಸಭೆ ಸಮಾರಂಭಗಳ ಓಡಾಟಗಳು ಕಾಣಿಸುತ್ತವೆಯೇ ಹೊರತು ಅರ್ಥಪೂರ್ಣ ಪ್ರಯಾಣಗಳು ಬೆರಳೆಣಿಕೆಯಷ್ಟು ಮಾತ್ರ. ಮೊದಲು 72 ಅಂಬಾಸಿಡರ್ ಕಾರುಗಳಿದ್ದೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೆಚ್ಚುವರಿಯಾಗಿ 59 ಐಷಾರಾಮಿ ಕಾರುಗಳನ್ನು ಖರೀದಿಸಲಾಗಿದೆ. ಇದಕ್ಕಾಗಿ ಖರ್ಚಾಗಿರೋದು 7 ಕೋಟಿ 62 ಲಕ್ಷ ರೂಪಾಯಿ. Once again ಇದೂ ಸಹಾ ಜನರ ದುಡ್ಡು. ಇದಕ್ಕಿಂತಲೂ ವಿಪರ್ಯಾಸವೆಂದರೆ ಈ ನೂತನ ಕಾರುಗಳ ರಿಪೇರಿಗಾಗಿ ಇಲ್ಲಿಯವರೆಗೆ ಸರ್ಕಾರ ಖರ್ಚು ಮಾಡಿರೋದು 2 ಕೋಟಿ 66 ಲಕ್ಷ ರೂಪಾಯಿ.

'ಭಾಗ್ಯಲಕ್ಷ್ಮಿ'ಯರನ್ನು ಬೀದಿಗೆ ತಂದು ಬೀಗುವ ಬಿಜೆಪಿಯ ಸಂಭ್ರಮಕ್ಕೂ ಬೊಕ್ಕಸದ ಹಣ ನೀರಿನಂತೆ ಖರ್ಚಾಗಿದೆ. ಫಲಾನುಭವಿಗಳಿಗೆ ಸೀರೆ ಹಂಚುವ ಈ ಯೋಜನೆಯ ಹಂತವನ್ನು ಪೊಲಿಟಿಕಲಿ ಎನ್‌ಕ್ಯಾಶ್ ಮಾಡಿಕೊಳ್ಳುವ ಸಲುವಾಗಿ 35 ಕೋಟಿ 71 ಲಕ್ಷ ಖರ್ಚು ಮಾಡಿದ್ದಾರೆ. ಅಸಲಿಗೆ ಈ ಯೋಜನೆಯಡಿಯಲ್ಲಿ ಇದುವರೆವಿಗೆ ವಿತರಿಸಿರೋದು 10,68,296 ಸೀರೆಗಳನ್ನು. 195 ರಿಂದ 225 ರೂಪಾಯಿ ದರದ ಇವುಗಳ ಖರೀದಿಗೆ ಖರ್ಚಾಗಿರೋದು 23 ಕೋಟಿ ರೂಪಾಯಿ. ಆದರೆ ಆ ಸಮಾರಂಭಗಳಿಗೆ ಜನರನ್ನು ಕರೆತರಲು, ಬಂದವರಿಗೆ ಊಟದ ವ್ಯವಸ್ಥೆ ಮಾಡಿಸಿ ಶಹಬ್ಬಾಷ್ ಗಿಟ್ಟಿಸಿಕೊಳ್ಳಲು 12 ಕೋಟಿ 71 ಲಕ್ಷವನ್ನು ಸುಖಾಸುಮ್ಮನೆ ವ್ಯರ್ಥವಾಗಿ ವ್ಯಯಿಸಿದ್ದಾರೆ. ಜನರನ್ನು ಸೇರಿಸಲು 6093 ಬಸ್ಸುಗಳು ಬಳಕೆಯಾಗಿದ್ದು ಇದರ ಬಾಬ್ತು 4 ಕೋಟಿ 56 ಲಕ್ಷ ರೂಪಾಯಿ. ಇನ್ನು ಅಧ್ವಾನದ ಊಟದ ವ್ಯವಸ್ಥೆಗೆಂದು ವ್ಯಯವಾಗಿರೋದು 2 ಕೋಟಿ 46 ಲಕ್ಷ! ಇಂತಹ ಸಭೆ ಸಮಾರಂಭಗಳಿಗೆ ಹೋಗಿ ಬರಲು ಮುಖ್ಯಮಂತ್ರಿ, ಸಚಿವರುಗಳ ಖರ್ಚಿಗೆಂದು ಸರ್ಕಾರಿ ಲೆಕ್ಕ ಪುಸ್ತಕದಲ್ಲಿ ನಮೂದಾಗಿರೋದು 34,49,633 ರೂಪಾಯಿ. ಅಲ್ಲಿಗೆ ಯೋಜನೆಯೊಂದರ ಮರೆಯಲ್ಲಿ ಬಿಜೆಪಿ ಸರ್ಕಾರ ಹೇಗೆಲ್ಲ ಮೆರೆದಾಡಿದೆ ಎನ್ನುವುದು ಖಾತ್ರಿಯಾದಂತಾಯ್ತು.

ನೆರೆಯಲ್ಲಿ ಮನೆ ಕಳೆದುಕೊಂಡವರಿಗೆ ಮನೆ ನೀಡುವ ಸರ್ಕಾರದ ಘೋಷಣೆ ಇದುವರೆವಿಗೂ ಈಡೇರಿಲ್ಲ, ಆದರೆ ಗಟ್ಟಿ ಮುಟ್ಟಾಗಿರುವ ಸಚಿವರುಗಳ ಮನೆ ರಿಪೇರಿಗೆಂದು ಬೊಕ್ಕಸದಿಂದ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅಂದರೆ ಅನಾಯಾಸವಾಗಿ 600 ಮನೆ ಕಟ್ಟಬಹುದಾದ ದುಡ್ಡನ್ನು ಇವರ ಮನೆಯ ಸುಣ್ಣ ಬಣ್ಣಕ್ಕೆ ಬಳಸಿಕೊಂಡಿದ್ದಾರೆ. ಅಂದಹಾಗೆ ಬಿಜೆಪಿ ಅಧಿಕಾರಕ್ಕೆ ಬರುವ ಮುಂಚೆ ಇದ್ದ ಕೋ-ಜಾ ಮೈತ್ರಿ ಸರ್ಕಾರದ ಕಾಲದಲ್ಲೇ ಈ ಮನೆಗಳನ್ನು 7 ಕೋಟಿ 13 ಲಕ್ಷದಲ್ಲಿ ನವೀಕರಿಸಲಾಗಿತ್ತು. ಆಗ ತಾನೆ ದುರಸ್ಥಿಗೊಂಡು ನಿಂತಿದ್ದ ಮನೆಗಳಿಗೆ ತಮ್ಮ ಮೇಕಪ್ ತೆವಲನ್ನು ಮೆತ್ತಿಸಲು, ಈ ಹಾಳು ಬಿಜೆಪಿಗಳು ಬೊಕ್ಕಸವನ್ನು ಬರಿದು ಮಾಡಿದ್ದಾರೆ.

ಬಂಡೆದ್ದು ಕೂತ ಶಾಸಕರನ್ನು ಸಮಾಧಾನ ಪಡಿಸಲು ಹುಟ್ಟಿಕೊಂಡ ನಿಗಮ ಮಂಡಳಿ ಅಧ್ಯಕ್ಷ ಪಟ್ಟದ ಬಿಜೆಪಿ ದಂಧೆಯೂ ಬೊಕ್ಕಸದ ರೊಕ್ಕವನ್ನು ಭರ್ಜರಿಯಾಗೆ ತಿಂದಿದೆ. ಹಾಲಿ, ಮಾಜಿಗಳನ್ನೆಲ್ಲ 49 ನಿಗಮ ಮಂಡಳಿಗಳಿಗೆ ತುಂಬಿ ಅವರ ಮನಸ್ಸು ಖುಷಿಯಾಗುವಂತೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಿದ್ದಲ್ಲದೆ ಭರಪೂರ ವೇತನವನ್ನೂ ನೀಡಲಾಗಿತ್ತು. ಈ ಅಧ್ಯಕ್ಷರುಗಳ ವೇತನ ಭತ್ಯೆಗೆಂದೇ ಬೊಕ್ಕಸದ 8 ಕೋಟಿ 56 ಲಕ್ಷ ರೂಪಾಯಿ ಖರ್ಚಾಗಿದೆಯೆಂದರೆ ಇನ್ನವರ ಕಾರು, ಪ್ರವಾಸ, ಬಂಗಲೆಗಳ ವೆಚ್ಚ ಹೇಗಿರಬೇಡ?

ಮಾತು ಮಾತಿಗೂ ಸಮಿತಿ ರಚಿಸೋದು ಬಿಜೆಪಿಯ ಮತ್ತೊಂದು ರೋಗ. ಹೀಗೆ ರಚಿಸಲ್ಪಟ್ಟ ಸಮಿತಿಗೆ ತಮ್ಮ ಆಪ್ತರನ್ನು ಅಧ್ಯಕ್ಷರನ್ನಾಗಿ ಮಾಡಿ, ಅವರ ಓಡಾಟ, ಪ್ರವಾಸಕ್ಕೆ ಸರ್ಕಾರದ ಅಕೌಂಟ್ ಖಾಲಿ ಮಾಡಿರೋದೂ ಬೆಳಕಿಗೆ ಬಂದಿದೆ. ಹೆಸರಿಗೆ ಅಧ್ಯಯನಕ್ಕೆಂದು ರಚಿತವಾಗಿರುವ ಈ ಸಮಿತಿಯ ಸದಸ್ಯರ ಎ-ಟು ಝಡ್ ವ್ಯವಹಾರಕ್ಕೆಂದು ಬಿಜೆಪಿ ಸರ್ಕಾರದಲ್ಲಿ ಖರ್ಚಾಗಿರೋದು 20 ಲಕ್ಷ ರೂಪಾಯಿ. ಸರ್ಕಾರಕ್ಕಾಗಲಿ ಜನತೆಗಾಗಲಿ ಈ ಸಮಿತಿಗಳಿಂದ ಕಿಂಚಿತ್ತೂ ಉಪಯೋಗವಾಗಿಲ್ಲ ಎನ್ನುವುದೇ ಇವುಗಳ ಹೈಲೈಟ್.

ಇನ್ನು ಬಿಜೆಪಿ ಸರ್ಕಾರದ ಬಂಡವಾಳ ನಿಂತಿರೋದೆ ಜಾಹಿರಾತುಗಳ ಮೇಲೆ. ಗೇಣುದ್ದದ ಸಾಧನೆಗೆ ಕಿಲೋಮೀಟರ್ ಉದ್ದದ ಬ್ಯಾನರ್ ಕಟ್ಟಿಸಿ ಮಿಂಚುವ ಬಿಜೆಪಿಗಳು ತಮ್ಮ ಪ್ರಚಾರಕ್ಕಾಗಿ ಬೊಕ್ಕಸದ 79 ಕೋಟಿ 43 ಲಕ್ಷವನ್ನು ಖರ್ಚು ಮಾಡಿದ್ದಾರೆಂದರೆ ಆಶ್ಚರ್ಯ ಪಡಬೇಕಿಲ್ಲ. ಸರ್ಕಾರಿ ಬ್ಯಾನರ್‌ಗಳ ಮುಖ್ಯಮಂತ್ರಿ ಪಟ್ಟದಲ್ಲಿ ರಾರಾಜಿಸುತ್ತಿದ್ದ ಯಡ್ಡಿಯ ಮುಖದ ಮೇಲೆ ಸದಾನಂದ ಗೌಡರ ಮುಖ ಅಂಟಿಸಲು, ಆನಂತರ ಸದಾ ಮುಖದ ಮೇಲೆ ಶೆಟ್ಟರ್ ಮೋರೆ ಮೆತ್ತಿಸಲೇ ಏನಿಲ್ಲವೆಂದರೂ ಒಂದು ಕೋಟಿ ಕೈಬಿಟ್ಟಿರುವ ಅಂದಾಜಿದೆ. ಅಲ್ಲದೆ ಪತ್ರಿಕೆಗಳಿಗೆ ಜಾಹಿರಾತು ನೀಡುವಲ್ಲೂ ಹಿಂದೆ ಬಿದ್ದಿಲ್ಲ. ಬಿಜೆಪಿಗಳ ಪ್ರಚಾರ ಪ್ರಿಯತೆ ಎಂತಹದ್ದೆಂದರೆ ಕನ್ನಡ ಪತ್ರಿಕೆಗಳಲ್ಲದೆ ಇಂಗ್ಲಿಷ್ ಪತ್ರಿಕೆಯ 'ಆಲ್ ಎಡಿಷನ್' (ಬೇರೆ ರಾಜ್ಯಗಳಲ್ಲಿ ಮುದ್ರಿತವಾಗಿ ಮಾರಾಟವಾಗುವ)ಗೂ ಬೇಕಾಬಿಟ್ಟಿಯಾಗಿ ಜಾಹಿರಾತು ನೀಡಿ ಬೀಗಿದ್ದಾರೆ. 2010-11ನೇ ಸಾಲಿನ ಬಜೆಟ್‌ನಲ್ಲಿ ಜಾಹಿರಾತಿಗೆಂದು 17 ಕೋಟಿ 50 ಐವತ್ತು ಲಕ್ಷ ರೂಪಾಯಿ ಕಾಯ್ದಿರಿಸಿದ್ದರೂ ಬಿಜೆಪಿ ಸರ್ಕಾರ ಅದೊಂದೇ ವರ್ಷದಲ್ಲಿ ಜಾಹಿರಾತಿಗೆ ಖರ್ಚು ಮಾಡಿರೋದು 20 ಕೋಟಿ ರೂಪಾಯಿ! ಈ ವರ್ಷ ಚುನಾವಣೆ ಎದುರಾಗುವುದರಿಂದ ಬಣ್ಣ ಬಣ್ಣದ ಜಾಹಿರಾತಿನ ಮೂಲಕ ಜನರ ಗಮನ ಸೆಳೆಯಲು ಬಜೆಟ್‌ನಲ್ಲಿ 16 ಕೋಟಿ 46 ಲಕ್ಷವನ್ನು ಮೀಸಲಿಡಲಾಗಿದೆ. ಅದರಲ್ಲಿ ಆಗಲೇ 14 ಕೋಟಿ 16 ಲಕ್ಷವನ್ನು ಖಾಲಿ ಮಾಡಿರುವ ಶೆಟ್ಟರ್ ಸರ್ಕಾರಕ್ಕೆ ಇನ್ನು ಉಳಿದಿರೋದು 2 ಕೋಟಿ ಮಾತ್ರ. ಆದರೆ ಬಿಜೆಪಿಯ ಹಿಸ್ಟರಿಯನ್ನು ಗಮನಿಸಿದರೆ ಅಷ್ಟು ಮಾತ್ರದಲ್ಲೇ ಅದು ಚುನಾವಣೆಗೆ ಸಜ್ಜಾಗೋದು ಡೌಟು. ಹಾಗಾಗಿ ಬೊಕ್ಕಸದ ಮತ್ತೊಂದು ಬೃಹತ್ ಮೊತ್ತ ನಾಪತ್ತೆಯಾಗುವುದು ಖಚಿತ.

ಅಂತೂ ಇಂತೂ ಯಾರದೋ ದುಡ್ಡಲ್ಲಿ ಯಲ್ಲಮ್ಮನ ಜಾತ್ರೆ ಮಾಡುತ್ತಿರುವ ಬಿಜೆಪಿ ಸರ್ಕಾರದ ದುಂದುವೆಚ್ಚಕ್ಕೆ ಖಜಾನೆ ಬರಿದಾಗುತ್ತಲೇ ಬರುತ್ತಿದೆ. ಹೇಗೂ ಮುಂದಿನ ಬಾರಿ ತಾವಂತು ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಬಿಜೆಪಿಗಳಿಗೆ ಖಾತ್ರಿಯಾಗಿರುವುದರಿಂದ ಬೊಕ್ಕಸವನ್ನೆಲ್ಲ ಬರಿದು ಮಾಡಲು ತುದಿಗಾಲಲ್ಲಿ ನಿಂತಂತಿದೆ. ಒಟ್ಟಿನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಜನರಿಗೆ ಈ ಸರ್ಕಾರ ಸರಿಯಾದ ಪಾಠವನ್ನೇ ಕಲಿಸುತ್ತಿದೆ. ಪಾಠ ಕಲಿಸುವ ಮುಂದಿನ ಸರದಿ ಜನರದ್ದು!

● ಗಿರೀಶ್ ತಾಳಿಕಟ್ಟೆ







ಬಜರಂಗಿಗಳ ಗುಂಪು ದಾಳಿ: ಕಟ್ಟಿಂಗೇರಿಯಲ್ಲಿ ಮತಾಂತರ ನಡೆಯುತ್ತಿದೆಯೆ?

ಉಡುಪಿಗೆ ಪೂರ್ವ ದಿಕ್ಕಿನಲ್ಲಿ ಸುಮಾರು 15 ಕಿ.ಮೀ. ದೂರದಲ್ಲಿರುವ ಕಟ್ಟಿಂಗೇರಿ ಎಂಬ ಹಳ್ಳಿ ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ದಿ|| ಕೆ.ಕೆ.ಹೆಬ್ಬಾರರ ಹುಟ್ಟೂರು. ಅದು ಬಿಟ್ಟರೆ ಕಟ್ಟಿಂಗೇರಿ ಈವರೆಗೆ ತಾಲೂಕು ಮಟ್ಟದಲ್ಲಿ ಕೂಡ ಹೆಸರು ಮಾಡಿದ್ದಿಲ್ಲ. ಆದರೆ ಈಗ ಬಜರಂಗಿಗಳಿಂದಾಗಿ ಆ ಹಳ್ಳಿ ಸುದ್ದಿಯಲ್ಲಿದೆ. ಕರಾವಳಿಯ ಹಲವು ಊರುಗಳಿಗೆ ಬಜರಂಗಿಗಳಿಂದ ಆ ಬಗೆಯ 'ಉಪಕಾರ'ವಾಗಿದೆ. ಮೊನ್ನೆ ಅಂದರೆ ಇದೇ ಮಾರ್ಚ್ 8ರ ಶುಕ್ರವಾರ ರಾತ್ರಿ 10ರ ಸುಮಾರಿಗೆ ಕಟ್ಟಿಂಗೇರಿಯ ಶ್ರೀಮತಿ ಎಮಿಲಿ ಲೋಬೊ ಎಂಬವರ ಮನೆಯಲ್ಲಿ ಮತಾಂತರ ನಡೆಯುತ್ತಿದೆ ಎಂದು ಆರೋಪಿಸಿ ಬಜರಂಗಿಗಳು ಗುಂಪುದಾಳಿ ನಡೆಸಿದ್ದಾರೆ. ಕಟ್ಟಿಂಗೇರಿಯ ಗುಡ್ಡಕಾಡುಗಳ ನಡುವೆ ನಿರ್ಜನ ಪ್ರದೇಶದಲ್ಲಿರುವ ಆ ಮನೆಯಲ್ಲಿ 80ರ ಹರೆಯದ ಎಮಿಲಿ ತಮ್ಮ ಮಗ ರೋಶನ್(35)ರ ಜೊತೆ ವಾಸವಾಗಿದ್ದಾರೆ. ಲೋಬೋರ ಮನೆಯಲ್ಲಿ ಪ್ರತಿ ಭಾನುವಾರ ಮತ್ತು ಪ್ರತಿ ತಿಂಗಳ ಮೂರನೆಯ ಶುಕ್ರವಾರ ಅಹೋರಾತ್ರಿ ಪ್ರಾರ್ಥನೆ, ಭಜನೆ ನಡೆಯುತ್ತದೆ. ಅವರ ಮನೆಮಾತು ಕ್ಯಾಥೊಲಿಕ್ಕರ ಕೊಂಕಣಿ. ಆದರೆ ರೋಶನ್ ಲೋಬೊ ಪ್ರಕೃತ 'ವರ್ಡ್ ಆಫ್ ವಿಕ್ಟರಿ' ಎಂಬ ಪ್ರಾಟೆಸ್ಟಂಟ್ ಪ್ರಾರ್ಥನಾ ಕೂಟವೊಂದರ ಬೋಧಕ. ಅವರ ಮನೆಯಲ್ಲಿ ನಡೆಯುವ ಪ್ರಾರ್ಥನೆಗೆ ಸಾಮಾನ್ಯವಾಗಿ 100-150 ಜನ ಸೇರುತ್ತಾರೆ. ಆದರೆ ಆವತ್ತು, ರಾತ್ರಿ 10ರ ವೇಳೆಗೆ, ಅಲ್ಲಿ 7-8 ಜನ ಮಾತ್ರ ಪ್ರಾರ್ಥನೆ ಮಾಡುತ್ತಿದ್ದರು. ಆಗ ಹಠಾತ್ತನೆ ಮನೆಯೊಳಗೆ ನುಗ್ಗಿದ ಬಜರಂಗಿಗಳ ಗುಂಪು ಮರದ ದೊಣ್ಣೆ ಮತ್ತು ರಾಡುಗಳಿಂದ ಅವರ ಮೇಲೆ ಹಲ್ಲೆ ನಡೆಸಿದೆ.

ಅವರನ್ನು ತಮ್ಮ ಮಾಮೂಲಿ ಭಾಷೆಯಲ್ಲಿ ಬೈಯುತ್ತ ಹೊಡೆಯುತ್ತ, ಬಜರಂಗಿಗಳು "ನಾವು ಪೋಲಿಸರಿಗೆ ಹೇಳಿಯೇ ಬಂದ್ದೇವೆ; ಇನ್ನು ಅವರೂ ಬಂದು ನಿಮಗೆ ಬಾರಿಸಲಿಕ್ಕುಂಟು" ಎಂದು ಹೇಳಿದರಂತೆ. ಪೆಟ್ಟು ತಿಂದವರಲ್ಲಿ ಒಬ್ಬರಾದ ರಮೇಶ ಎಂಬುವರಿಗೆ ಕುಡಿದ ನೀರು ವಾಂತಿಯಾಗುವ ಹಾಗೆ ಏಟು ಬಿದ್ದಿದ್ದು ಅವರನ್ನು ಮಣಿಪಾಲ ಆಸ್ಪತ್ರೆಗೆ ಸೇರಿಸಬೇಕಾಯಿತು. ಉಳಿದ ಐವರು ಗಾಯಾಳುಗಳನ್ನು ಉಡುಪಿಯ ಸರಕಾರಿ ಆಸ್ಪತ್ರೆಗೆ ಕೊಂಡೊಯ್ದರು. ರೋಶನ್ ಲೋಬೊ ಹೇಳುವ ಪ್ರಕಾರ ಕಟ್ಟಿಂಗೇರಿಯ ನೆರೆಯ ಮಟ್ಟಾರು ಎಂಬ ಹಳ್ಳಿಯಲ್ಲಿ ಕೆಲವು ತಿಂಗಳ ಕೆಳಗೆ ಬಜರಂಗದಳದ ಒಂದು ಶಾಖೆ ಪ್ರಾರಂಭವಾಗಿದ್ದು, ತಮ್ಮ ಮನೆಯ ಮೇಲೆ ದಾಳಿ ನಡೆಸಿದ ಸುಮಾರು 50 ಜನರಲ್ಲಿ ಹೆಚ್ಚಿನವರು ಅಲ್ಲಿನವರು. ಲೋಬೊ ಆ ಕುರಿತು ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ಕೆಲವರನ್ನು ಹೆಸರಿಸಿದ್ದಾರೆ. ದಾಳಿ ನಡೆಸಿದ ಗುಂಪಿನಲ್ಲಿದ್ದ ಎಲ್ಲರೂ ಯುವಕರು; ಹೆಚ್ಚು ಎಂದರೆ ಹೈಸ್ಕೂಲುವರೆಗೆ ಓದಿದವರು ಮತ್ತು ಸಣ್ಣ ಪುಟ್ಟ ಉದ್ಯೋಗ ಮಾಡುವವರು. ಆವತ್ತು ಸ್ಥಳದಲ್ಲಿ ಹಾಜರಿದ್ದವರು ಹೇಳುವ ಪ್ರಕಾರ ಆ ಗುಂಪಿನಲ್ಲಿ ಯಾರೂ ಬ್ರಾಹ್ಮಣರು ಇರಲಿಲ್ಲ; ಬಿಲ್ಲವ, ಮೊಗವೀರ, ವಿಶ್ವಕರ್ಮ ಹಾಗೂ ಬಂಟ ಸಮುದಾಯಗಳವರೇ ಅದರಲ್ಲಿ ಹೆಚ್ಚಿಗೆ ಇದ್ದವರು.

ವಿಪರ್ಯಾಸವೆಂದರೆ ಇವರಿಂದ ಹೊಡೆತ ತಿಂದವರು ಸಹ ಈ ಜಾತಿವರ್ಗಗಳಿಗೆ ಸೇರಿದ ಹಿಂದೂಗಳೇ ಆಗಿರುವುದು. ಉದಾಹರಣೆಗೆ, ಆವತ್ತು ಬಜರಂಗಿಗಳ ದಾಳಿಯಿಂದ ಗಾಯಗೊಂಡ ಜನಾರ್ದನ ಆಚಾರ್ಯ ವಿಶ್ವಕರ್ಮ ಸಮುದಾಯದವರು. ನಡುಹರೆಯದ ಅವರು



ಈಗ ಪೈಂಟಿಂಗ್ ವೃತ್ತಿಯನ್ನು ಮಣಿಪಾಲದಲ್ಲಿ ಮಾಡುತ್ತಾರೆ. ಹಿಂದೆ ಅವರು ಸಮೀಪದ ಬೆಳ್ಳೆಯಲ್ಲಿ ರಿಕ್ಷಾ ನಡೆಸುತ್ತಿದ್ದರಂತೆ. ಸ್ಥಳೀಕರಾದ ಜನಾರ್ದನ ಆಚಾರ್ಯ ಕೆಲವು ವರ್ಷಗಳ ಕಾಲ ಪೂನಾದಲ್ಲಿದ್ದರು. ಆಗ ಅವರಿಗೆ ನಿರಂತರ ತಲೆ ನೋವು ಮತ್ತು ಮೂಗಿನಲ್ಲಿ ರಕ್ತಸ್ರಾವ ಶುರುವಾಗಿ ಏನು ಮಾಡಿದರೂ ಅದು ಗುಣವಾಗಲಿಲ್ಲವಂತೆ. "ನಾನು ಕಳೆದ ಎಂಟು ವರ್ಷಗಳಿಂದ ಈ ಪ್ರಾರ್ಥನಾ ಸಭೆಗೆ ಬರುತ್ತಿದ್ದು ಈಗ ಆರೋಗ್ಯವಾಗಿದ್ದೇನೆ. ನನ್ನ ಮನೆಯಲ್ಲಿ ನನ್ನ ತಾಯಿಯವರು ಸೇರಿದಂತೆ ಇದಕ್ಕೆ ಯಾರ ವಿರೋಧವೂ ಇಲ್ಲ" ಎಂದು ಜನಾರ್ದನ ಆಚಾರ್ಯ ಹೇಳಿದರು. ಘಟನೆಯಲ್ಲಿ ಇನ್ನೊಬ್ಬ ಗಾಯಾಳುವಾದ ಶಾಂತರಾಮ ಶೆಟ್ಟಿ (38) ಬಂಟ ಸಮುದಾಯದವರು. ಅವರು ಒಂಬತ್ತನೆಯ ಕ್ಲಾಸಿನವರೆಗೆ ಓದಿದ್ದು ಕೆಲವು ವರ್ಷ ಮುಂಬೈಯಲ್ಲಿ ಇದ್ದರು. ಆಗ ಅವರು ದಿನಕ್ಕೆ ಐದಾರು ಪ್ಯಾಕ್ ಸಿಗರೇಟು ಸೇದುತ್ತಿದ್ದರಂತೆ. ಶೆಟ್ಟರಿಗೆ ಎದೆ ನೋವು, ಕೈ ನಡುಕ ಎಲ್ಲ ಶುರುವಾಗಿ ಯಾವ ಮದ್ದಿನಿಂದಲೂ ಗುಣವಾಗಲಿಲ್ಲವಂತೆ. "ನಾನು ಈ ಪ್ರಾರ್ಥನೆ ಶುರುಮಾಡಿದ ಮೇಲೆ ಸಿಗರೇಟು ನಿಲ್ಲಿಸಿದೆ. ನನಗೆ ಈಗ ಯಾವ ಕೆಟ್ಟ ಚಟವೂ ಇಲ್ಲ, ನನ್ನ ಕಾಯಿಲೆಯೂ ವಾಸಿ ಆಗಿದೆ" ಎಂದು ಅವರು ಹೇಳಿದರು. ವೃತ್ತಿಯಲ್ಲಿ ಅವರು ಸಹ ಪೈಂಟರ್. ಶೆಟ್ಟರು ಈ ರೀತಿ ಪ್ರಾರ್ಥನಾ ಸಭೆಗಳಿಗೆ ಬರುವುದರ ಬಗ್ಗೆ ಅವರ ಮನೆಯವರಿಗೆ ಸಮಾಧಾನವಿಲ್ಲವಂತೆ. "ನಾನು ಯಾರಿಗೂ ಅನ್ಯಾಯ ಮಾಡಿಲ್ಲ, ಅವರು ಯಾಕೆ ನನ್ನ ಬಗ್ಗೆ ಬೇಸರ ಪಟ್ಟುಕೊಳ್ಳಬೇಕು. ನಾನು ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ, ಈಗಲೂ ನಮ್ಮ ಮನೆಗೆ ಹೋಗಿ ನನ್ನ ತಾಯಿಯನ್ನು ಮಾತನಾಡಿಸಿಕೊಂಡು ಬರುತ್ತೇನೆ" ಎಂದು ಶೆಟ್ಟರು ಹೇಳಿದರು. ಅವರ ಪತ್ನಿ ಸಹ ಈ ಪ್ರಾರ್ಥನಾ ಕೂಟಗಳಲ್ಲಿ ಭಾಗವಹಿಸುತ್ತಾರೆ.

ಕಟ್ಟಿಂಗೇರಿಯಲ್ಲಿ ಲೋಬೋರ ಮನೆ ತಲುಪಲು ಡಾಂಬರು ರಸ್ತೆಯಿಂದ ಮಡ್ ರೋಡಿಗೆ ಹೊರಳಿಕೊಂಡು ಅಲ್ಲಿಂದ ಕಾಲ್ದಾರಿಯಲ್ಲೂ ತುಂಬ ದೂರ ನಡೆಯಬೇಕು. ಅವರ ಮನೆಯ ಸುತ್ತಮುತ್ತ ಹತ್ತಿರದಲ್ಲಿ ಬೇರೆ ಯಾವ ಮನೆಯೂ ಇಲ್ಲ. ಅಂತಹದ್ದರಲ್ಲಿಯೂ ಈ ದಾಳಿ ನಡೆದ ಸುದ್ದಿ ತಲುಪಿದ ತಕ್ಷಣ, ಉಡುಪಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬೋರಲಿಂಗಯ್ಯ ಅಲ್ಲಿಗೆ ಧಾವಿಸಿ ಬಂದಿದ್ದಾರೆ. ಸ್ಥಳಕ್ಕೆ ಅವರ ಅನಿರೀಕ್ಷಿತ ಆಗಮನದಿಂದಾಗಿಯೇ ಪೊಲೀಸರು ದಾಳಿಕೋರರಲ್ಲಿ 19 ಜನರನ್ನು ಕೂಡಲೇ ಬಂಧಿಸಿದ್ದಾರೆ; ಅದೂ ಅಲ್ಲದೇ ಇಂತಹ ಪ್ರಸಂಗಗಳಲ್ಲಿ ಅವರು ಸಾಮಾನ್ಯವಾಗಿ ಮಾಡುವಂತೆ ಪೆಟ್ಟು ತಿಂದವರ ಮೇಲೆಯೇ ಕೇಸು ದಾಖಲಿಸಿಕೊಂಡಿಲ್ಲ. ಆದರೆ ಎಲ್ಲ ಪ್ರಸಂಗಗಳಲ್ಲೂ ಎಸ್.ಪಿ.ಯವರೇ ಸ್ಥಳಕ್ಕೆ ಬರಲು ಸಾಧ್ಯವೂ ಇಲ್ಲ; ಅದನ್ನು ನಿರೀಕ್ಷಿಸುವಂತೆಯೂ ಇಲ್ಲ. ಆದರೆ ಅವರ ಗೈರು ಹಾಜರಿಯಲ್ಲಿ ಕೆಳಹಂತದ ಪೊಲೀಸು ಸಿಬ್ಬಂದಿ ಕಾನೂನನ್ನು ಪಾಲಿಸುವುದೂ ಇಲ್ಲ. ಕಟ್ಟಿಂಗೇರಿ ಪ್ರಕರಣದಲ್ಲಿ ಕೂಡ ಸಂಬಂಧಪಟ್ಟ ಪೊಲೀಸ್ ಠಾಣೆಯವರು (ಶಿರ್ವ) ಆರೋಪಿಗಳನ್ನು ತಕ್ಷಣ ಬಂಧಿಸಿದರೂ ಅವ[...] ಸುಲಭದಲ್ಲಿ ಜಾಮೀನು ಪಡೆಯಬಹುದಾದ ಐ.ಪಿ.ಸಿ [...] ಕಲಮುಗಳ ಅಡಿಯಲ್ಲಿಯೇ ದೂರ[...] ದಾಖಲಿಸಿಕೊಂಡಿದ್ದಾರೆ. ಹಾಗಾಗಿ ಬಂಧಿತರಲ್ಲಿ ಎಲ್ಲರು ಈಗ ಬಿಡುಗಡೆಗೊಂಡಿದ್ದಾರೆ. ಈ ಕುರಿತು ಕರ್ನಾಟ[...] ಕೋಮು ಸೌಹಾರ್ದ ವೇದಿಕೆ ಸೇರಿದಂತೆ ಹಲ[...] ಸಂಘಟನೆಗಳು ಎಸ್.ಪಿ.ಯವರಿಗೆ ಅಹವಾಲು ಸಲ್ಲಿಸಿ[...]

ಲೋಬೊ ಅವರ ಮನೆಯ ಮೇಲೆ ನಡೆದ ದಾಳಿಯ[...] ಸ್ವತಃ ಮನೆಯ ಒಡತಿ ಎಮಿಲಿ ಲೋಬೊ ಅವರು ಸ[...] ಪೆಟ್ಟು ತಿಂದಿದ್ದಾರೆ. ದಾಳಿಕೋರರು ಆರೋಪಿಸುವ[...] ಅವರ ಮನೆಯಲ್ಲಿ ಮತಾಂತರ ನಡೆಯುತ್ತಿತ್ತೆ? ಮತಾಂತ[...] ಎಂದರೆ ಏನು ಎಂಬುದು ಸ್ಪಷ್ಟವಾಗದೆ ಆ ಪ್ರಶ್ನೆ[...] ಉತ್ತರಿಸಲಾಗುವುದಿಲ್ಲ. ತನಗೆ ಇಷ್ಟಕಂಡ ದೇವರಿಗೆ ಪ್ರಾರ್ಥ[...] ಸಲ್ಲಿಸುವುದು ಮತಾಂತರವೋ? ಅದು ಮತಾಂತರ[...] ಆದರೆ ಭಾರತದ ಕ್ರಿಮಿನಲ್ ಕಾಯ್ದೆಯ ಯಾವ ಸೆಕ್ಷ[...] ಪ್ರಕಾರ ಅದು ಒಂದು ಅಪರಾಧ? ಲೋಬೋರ ಮನೆಯ[...] ಮೊನ್ನೆ ರಾತ್ರಿ ದಾಳಿ ನಡೆದಾಗ ಪ್ರಾರ್ಥನೆ ಮಾಡುತ್ತಿದ್ದ[...] ಪೈಕಿ ನಾವು ಮಾತನಾಡಿಸಿದ ಎಲ್ಲರೂ ತಾವು ಸ್ವಇಚ್ಛೆಯಿ[...] ಅಲ್ಲಿ ಪ್ರಾರ್ಥನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ರೋಶನ್ ಲೋಬೊ ನಡೆಸುವ ಪ್ರಾರ್ಥನಾ ಕೂ[...] ಹಿಂದೂಗಳಲ್ಲಿ ಬಹುತೇಕ ಎಲ್ಲ ಜಾತಿಗಳವರೂ ಬರುತ್ತ[...] ಕ್ರೈಸ್ತರಲ್ಲಿ ಕ್ಯಾಥೊಲಿಕ್ಕರು ಮತ್ತು ಪ್ರಾಟೆಸ್ಟಂಟ್ ಪಂಥ[...] ಹಲವು ಪಂಗಡಗಳವರು ಸಹ ಈ ಪ್ರಾರ್ಥನಾ ಕೂಟಗಳ[...] ಭಾಗವಹಿಸುತ್ತಾರೆ. ಇವರೆಲ್ಲರೂ ಮತಾಂತರಗೊಂಡವರೋ[...] ಅಥವಾ ಮತಾಂತರದ ಆರೋಪ ಈ ಪ್ರಾರ್ಥ[...] ಕೂಟಗಳಿಗೆ ಬರುವ ಹಿಂದೂಗಳ ಮೇಲೆ ಮಾತ್ರವೂ[...] ಆ ಆರೋಪ ನಿಜವೇ ಆಗಿದ್ದರೆ ಆ ಬಗ್ಗೆ ಕ್ರ[...] ತೆಗೆದುಕೊಳ್ಳಬೇಕಾದವರು ಅವರ ಕುಟುಂಬದವರೋ[...] ಪೊಲೀಸರೋ? ಅಥವಾ ಬಜರಂಗಿಗಳೋ[...] ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಸ್ವಾತಂತ್ರ್ಯದ ಬಗ್ಗೆ ಕಾ[...] ಇರುವವರು ಕೇಳಲೇಬೇಕಾದ ಪ್ರಶ್ನೆಗಳು ಇವು.

ಮೊನ್ನೆಯ ಈ ದಾಳಿಯಂತಹ ವಿದ್ಯಮಾನ ಬರಲಿರು[...] ಚುನಾವಣೆಗಾಗಿ ಹಿಂದೂತ್ವವಾದಿಗಳು ಮಾಡುತ್ತಿರು[...] ತಯಾರಿಯೋ? ಈಚೆಗೆ ಇಂತಹ ಯಾವ ಘಟನೆ ನಡೆದರ[...] ಅದನ್ನು ಚುನಾವಣೆಗೆ ತಳಕು ಹಾಕುವುದು ಸರ[...] ಸಾಮಾನ್ಯವಾಗಿದೆ. ಆದರೆ ಕರ್ನಾಟಕದಲ್ಲಿ ಕಳೆದ 15-[...] ವರ್ಷಗಳಲ್ಲಿ ನಾಗರಿಕರ ಸಂವಿಧಾನಾತ್ಮಕ ಹಕ್ಕುಗಳ ಮ[...] ಈ ಬಗೆಯ ದಾಳಿಗಳು ನಿರಂತರವಾಗಿ ನಡೆಯುತ್ತ[...] ಇವೆ. ಇತ್ತೀಚೆಗಿನ ಒಂದು ಉದಾಹರಣೆಯು[...] ನೋಡುವುದಾದರೆ ಕರ್ನಾಟಕದ ಹಾಲಿ ವಿಧಾನಸಭ[...] 2008ರ ಮೇ ತಿಂಗಳಲ್ಲಿ ಚುನಾವಣೆ ನಡೆದರೆ 200[...] ಸೆಪ್ಟೆಂಬರ್ ತಿಂಗಳಲ್ಲಿ ಚರ್ಚ್ ದಾಳಿ ನಡೆಯಿತು. ಅ[...] ಯಾವ ಚುನಾವಣೆಗೆ ನಡೆಸಿದ ತಯಾರಿ? ವಾಸ್ತವವ[...] ಈ ದಾಳಿಯ ಹಿಂದೆ ಇದ್ದದ್ದು ಸಂಘ ಪರಿವಾರದ ಫ್ಯಾಸಿ[...] ಅಜೆಂಡಾ. ಕರ್ನಾಟಕದಲ್ಲಿ ಇತ್ತೀಚೆಗೆ ಹಿಂದೂತ್ವವಾದಿಗ[...] ನಡೆಸಿದ ಹಲವು ಚಟುವಟಿಕೆಗಳಿಗೆ ಚುನಾವಣೆಯ ಜೊ[...] ನೇರ ಸಂಬಂಧವಿಲ್ಲ. ಶಾಲೆಗಳಲ್ಲಿ ಭಗವದ್ಗೀತೆಯ ಕ[...] ಕಡ್ಡಾಯಗೊಳಿಸುವುದು, ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾ[...] ಟಿಪ್ಪು ವಿಶ್ವವಿದ್ಯಾಲಯಕ್ಕೆ ವಿರೋಧ, ಪಬ್ ದಾಳಿ, ಹೋ[...] ಸ್ಟೇ ಪ್ರಕರಣ ಮುಂತಾದವು ಚುನಾವಣೆಗಳನ್ನು ಗೆಲ್ಲ[...] ಅವರು ನಡೆಸಿದ ಕಾರ್ಯಕ್ರಮಗಳಲ್ಲ. ಹಿಂದೂ ಧರ್ಮ[...] ಅರ್ಥೈಸುವಿಕೆಯನ್ನು ಸಂಸ್ಕೃತ, ವೈದಿಕ, ಬ್ರಾಹ್[...] ಯಜಮಾನಿಕೆಗೆ ಒಳಪಡಿಸುವುದು ಆ ಕಾರ್ಯಕ್ರಮ[...] ಪ್ರಮುಖ ಉದ್ದೇಶವಾಗಿತ್ತು. ಮುಸ್ಲಿಮ್ ಮತ್ತು ಕ್ರೈ[...] ಸಮುದಾಯಗಳು ಮಾತ್ರವಲ್ಲ ಹಿಂದೂಗಳಲ್ಲಿ ಕೂಡ ತ[...] ಸಾಂಸ್ಕೃತಿಕ ಯಜಮಾನಿಕೆಯನ್ನು ಒಲ್ಲದವರ[...] 'ಮತಾಂತರ'ಗೊಂಡವರು ಮತ್ತು ಈ ಸಮಾಜದ ಶತ್ರುಗ[...] ಎಂದು ಚಿತ್ರಿಸುವುದು ಆ ಕಾರ್ಯಕ್ರಮಗಳ ಇನ್ನೊಂ[...] ಪ್ರಮುಖ ಉದ್ದೇಶ. ಇದೊಂದು ದೀರ್ಘಕಾಲೀನ ಫ್ಯಾಸಿ[...] ಯೋಜನೆ. ಕಟ್ಟಿಂಗೇರಿಯ ಮೊನ್ನೆಯ ಘಟನೆ ಕೂ[...] ಅದರ ಭಾಗವಾಗಿಯೇ ನಡೆದಿರುವಂತಹದ್ದು.

● ಜಿ.ರಾಜಶೇಖ[...]

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

FORM - IV

(See Rule 8)

1. Place of Publication	:	Bangalore
2. Periodicity of Publication	:	Weekly
3. Printer's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
4. Publisher's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
5. Editor's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.

Date : 14.3.2013

Sd/-
GAURI LANKESH

...ರೇಕಳ ಹಾಜಬ್ಬರ ಶಾಲೆ ಕಟ್ಟಿ ಬೆಳೆಸುವ ತೀರದ ದಾಹ

ಪುಸ್ತಕ ವಿಮರ್ಶೆ

● ಹಯವದನ



...ಬವರಿಗೆ ಕಾಮ-ಪ್ರೇಮಗಳನ್ನು ಮೀರಿದ, ಸುಲಭದಲ್ಲಿ ...ಂದ 'ದಾಹ' ಉಂಟಾಗುತ್ತದೆ. ಆ ದಾಹ ...ಕೊಳ್ಳಲು ಅವರು ತಮ್ಮ ಇಡೀ ಜೀವನವನ್ನೇ ...ಪಾಗಿಡುತ್ತಾರೆ. ಇಟಲಿಯ ಗೆಲಿಲಿಯೊನನ್ನು ...ಕಾಯಗಳ ಚಲನೆಯ ಗುಟ್ಟು ತಿಳಿಯುವ ದಾಹ ...ತ್ತು, ಇಂಗ್ಲೆಂಡಿನ ಜೇನ್ ಗುಡಾಲ್‌ಗೆ ಆಫ್ರಿಕಾದ ...ಜಿಗಳ ಬದುಕು ಅರಿಯುವ ದಾಹ ಉಂಟಾಗಿತ್ತು, ...ದ ಸಲೀಮ್ ಅಲಿಗೆ ಹಕ್ಕಿಗಳ ಜೀವನ ಕ್ರಮವನ್ನು ...ವ ತೀರದ ದಾಹ ಇತ್ತು, ಉಡುಪಿಯ ಪಿ. ...ಜ ಭಟ್ಟರಿಗೆ ತುಳುನಾಡಿನ ಇತಿಹಾಸದ ಸತ್ಯಗಳನ್ನು ... ತೆಗೆಯುವ 'ದಾಹ' ಇತ್ತು, ಇಂತಹ ತೀರದ ...ಗಳನ್ನು ತಣಿಸಿಕೊಳ್ಳಲು ಅವರೆಲ್ಲಾ-ತಮ್ಮ ತನು, ... ಧನಗಳನ್ನು ಅಡವಿಟ್ಟು, ಖಾಸಗೀ ಜೀವನದಲ್ಲಿ ..., ಸಾಮುದಾಯದ ಬದುಕಲ್ಲಿ ಅಳಿಸಲಾಗದ ಹೆಸರು ...ರು. ಸಹ ಜೀವಿಗಳಿಗೆ ಅಮೂಲ್ಯ ಅರಿವಿನ ಕೊಡುಗೆ ...ರೆ.

...ಮ್ಮ ದಕ್ಷಿಣ ಕನ್ನಡದ ಹರೇಕಳ ಹಾಜಬ್ಬನವರದ್ದೂ ...ವದ್ದೇ ವಿಚಿತ್ರ ಮತ್ತು ವಿಶೇಷ ದಾಹ. ಹರೇಕಳ ...ತ್ತು ನಿವಾಸಿ ಹಾಜಬ್ಬ 1976ರಿಂದ ಮಂಗಳೂರು ...ನಿಲ್ದಾಣದಲ್ಲಿ ಕೈಯಲ್ಲಿ ಬುಟ್ಟಿ ಹಿಡಿದುಕೊಂಡು ಕಿತ್ತಳೆ, ಮೋಸಂಬಿ ವ್ಯಾಪಾರ ಮಾಡುತ್ತಿದ್ದಾರೆ. ಈ ಬಡಪಾಯಿ ಹಾಜಬ್ಬರು ಶಾಲೆ ಬಾಗಿಲು ನೋಡಿದವರಲ್ಲ, ಅವರ ಪತ್ನಿಗೂ ಓದು ಬರಹ ತಿಳಿದಿಲ್ಲ, ಅವರಿಗೆ ಮೂರು ಮಂದಿ ಮಕ್ಕಳು. ಇಂತಹಾ ಹಾಜಬ್ಬನಿಗೆ ಒಮ್ಮೆ ಶಾಲೆ ಕಟ್ಟುವ ಹುಚ್ಚು ಹಿಡಿಯಿತು. ದೂರದ ಹರೇಕಳ, ಫಜೀರುಗಳಲ್ಲಿ ಶಾಲೆಗಳಿದ್ದವು. ಅವೆರಡೂ ಖಾಸಗಿ ಶಾಲೆಗಳು. ನ್ಯೂಪಡ್ಪು ಪ್ರದೇಶದ ಬಡಮಕ್ಕಳಿಗಾಗಿ ಸರಕಾರೀ ಶಾಲೆಯೊಂದನ್ನು ಕಟ್ಟಿ ಬೆಳೆಸಬೇಕೆಂದು ಈ ಕಿತ್ತಳೆ ವ್ಯಾಪಾರದ ಬ್ಯಾರಿ ನಿರ್ಧರಿಸಿದರು. ಮೊದಲು ಮದರಸ ಶಿಕ್ಷಣಕ್ಕಾಗಿ ಹೋರಾಟ ನಡೆಸಿ ಯಶಸ್ವಿಯಾದ ಹಾಜಬ್ಬ 1995ರಲ್ಲಿ ಸರಕಾರಿ ಶಾಲೆಗಾಗಿ ಓಡಾಟ ಆರಂಭಿಸಿದರು. ಕೌಟುಂಬಿಕ ಸಮಸ್ಯೆಗಳ ಮಧ್ಯೆಯೇ ಕಿತ್ತಲೆ ವ್ಯಾಪಾರದ ಸ್ವಲ್ಪ ಸಮಯವನ್ನು ಊರಿಗೆ ಶಾಲೆ ಬರಬೇಕೆಂಬ ಗುರಿಗೆ ಮೀಸಲಿಟ್ಟರು. ಹಾಜಬ್ಬನವರ ಪ್ರಯತ್ನಕ್ಕೆ ಫಲ ದೊರೆಯಿತು. 1999-2000 ನೇ ಶೈಕ್ಷಣಿಕ ವರ್ಷದಲ್ಲಿ



ಹಾಜಬ್ಬ ಸಾಧ್ಯವಾಗಿಸಿದ ಶಾಲೆ

ಶಾಲೆ ಮಂಜೂರಾಯಿತು. 2001 ಜುಲೈ 7ರ ತನಕ ಪಕ್ಕದ ಮಸೀದಿಯಲ್ಲಿ ತರಗತಿಗಳು ನಡೆದವು. ಈ ಮಧ್ಯೆ ಹಾಜಬ್ಬ ಶಾಲೆಗೆ ಜಮೀನಿಗಾಗಿ ಓಡಾಡಿದರು. ಅದೇ ಪರಿಸರದಲ್ಲಿ ಖಾಸಗೀ ವ್ಯಕ್ತಿಗಳಿಂದ ಆಕ್ರಮಿಸಲ್ಪಟ್ಟ ಸರಕಾರೀ ಜಾಗ (ಗುಡ್ಡೆ) ಇತ್ತು. ಅಕ್ರಮಗಳನ್ನು ತೆರವು ಮಾಡಿ 40 ಸೆಂಟ್ಸ್ ಜಾಗವನ್ನು ಜಿಲ್ಲಾಧಿಕಾರಿಗಳು ಶಾಲೆಗೆ ಮಂಜೂರು ಮಾಡಿದರು. ಹಾಜಬ್ಬ ದಾನಿಗಳಿಂದ ಜೆ.ಸಿ.ಬಿ. ಪಡೆದು ಜಮೀನನ್ನು ಸಮತಟ್ಟು ಮಾಡಿಸಿದರು. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಹಾಯದಿಂದ ಎರಡು ಕೊಠಡಿಗಳು ಮಂಜೂರಾದವು. 8-7-2001ರಂದು ಸ್ವಂತ ಕಟ್ಟಡಕ್ಕೆ ಶಾಲೆ ಸ್ಥಳಾಂತರಗೊಂಡಿತು.

ಹರೇಕಳ ಹಾಜಬ್ಬರ ಈ ಸಾಹಸಗಾಥೆಯ ಆಕರ್ಷಕ ವಿವರಗಳು ಈ ಏಕವ್ಯಕ್ತಿ ಚಿತ್ರಣ (Monograph)ದ ತುಂಬಾ ಹರಡಿಕೊಂಡಿದೆ. ಲೇಖಕ ಇಸ್ಮತ್ ಫಜೀರ್ ಅವರು ತುಂಬಾ ಶ್ರದ್ಧೆ ಮತ್ತು ಶಿಸ್ತುಗಳಿಂದ ಈ ಪುಟ್ಟ ಪುಸ್ತಕವನ್ನು ತಯಾರು ಮಾಡಿದ್ದಾರೆ. ಈ ಪುಸ್ತಕ ಮೊದಲು ಪ್ರಕಟವಾದದ್ದು 2011ರಲ್ಲಿ, ಕಳೆದ ಎರಡು ವರ್ಷಗಳಲ್ಲಿ ಹರೇಕಳ ಹಾಜಬ್ಬರ ಶಾಲೆ ಕಟ್ಟಿ ಬೆಳೆಸುವ ತೀರದ ದಾಹ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಅವರು ರಾಷ್ಟ್ರೀಯ ಖ್ಯಾತಿ ಗಳಿಸಿದ್ದಾರೆ. ಹಲವು ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಈ ಬ್ಯಾರಿ ಎಂತಹಾ ಹುಚ್ಚನೆಂದರೆ ಪ್ರಶಸ್ತಿಯೊಂದಿಗೆ ಬಂದ ಲಕ್ಷಾಂತರ ರೂಪಾಯಿಗಳನ್ನು ತನ್ನ ಕನಸಿನ ಕೂಸು 'ಶಾಲೆ'ಗೆ ಹಾಕಿ, ಅದರ ಸರ್ವತೋಮುಖ ಬೆಳವಣಿಗೆಗಾಗಿ ಹಗಲು, ರಾತ್ರಿ ದುಡಿಯುತ್ತಿದ್ದಾರೆ. ಖಾಸಗಿ ಬದುಕಲ್ಲಿ ಹಾಜಬ್ಬರದು ಅದೇ ಬಿಸಿಲಿನಿಂದ ಕಂದು ಬಣ್ಣಕ್ಕೆ ತಿರುಗಿದ ಕೋಲುಮುಖ, ಕೃಶ ಶರೀರ, ಬಿಳಿಯ ಅಂಗಿ ಮತ್ತು ಬಿಳಿಯ ಮುಂಡು. ಅಕ್ಷರ ಸಂತನಾದ ಈ ಬ್ಯಾರಿ ಮಧ್ಯಾಹ್ನದ ಊಟ ಕೂಡಾ



ಮಾಡದೆ ಈಗಲೂ ಮಂಗಳೂರಿನ ದಂಡಿನ ಕಟ್ಟಾ ಪ್ರದೇಶದಲ್ಲಿ ಬುಟ್ಟಿಯಲ್ಲಿ ಕಿತ್ತಳೆ, ಮುಸುಂಬಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಪ್ರಾಥಮಿಕ ಶಾಲೆಯಾಗಿ ಪ್ರಾರಂಭವಾದದ್ದು ಈಗ ಪ್ರೌಢಶಾಲೆಯಾಗಿದೆ. ಇನ್ನು ಅದೇ ಜಾಗದಲ್ಲಿ ಒಂದು ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಕನಸು ಹಾಜಬ್ಬರದು.

ಈ ಪುಟ್ಟ ಪುಸ್ತಕ ತಯಾರಿಸಿದವರು ನನ್ನ ಗೆಳೆಯ ಇಸ್ಮತ್ ಫಜೀರ್. ಲಂಕೇಶ್ ಪತ್ರಿಕೆ, ವಾರ್ತಾಭಾರತಿ ಓದುವವರಿಗೆ ಇವರ ಬರಹಗಳು ಪರಿಚಿತ. ಶಾಪದ ಕಣ್ಣೀರು, ಆರೋಗ್ಯ ಸಿಂಚನ, ವಿಕೃತ ಇತಿಹಾಸದ ಬಲಿಪಶುಗಳು, ದುರಂತನಾಯಕ ಮಅದನಿ ಮುಂತಾದ ಪುಸ್ತಕಗಳನ್ನು ಬರೆದಿರುವ ಇಸ್ಮತ್ ಪ್ರಗತಿಪರ ಚಿಂತನೆ ಮತ್ತು ಚಳವಳಿಗಳಲ್ಲಿ ತನ್ನನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ಯುವಕ. ಅವರು ನನ್ನ ಹತ್ತಿರ ಮುಗ್ಧವಾಗಿ ಕೇಳಿದರು- 'ಹರೇಗಳ ಹಾಜಬ್ಬರನ್ನು ಸೂಫಿ ಸಂತ ಎಂದು ಕರೆದರೆ ತಪ್ಪೇನು?'

"ಖಂಡಿತಾ ತಪ್ಪಲ್ಲ ಇಸ್ಮತ್! ಹರೇಕಳ ಹಾಜಬ್ಬರೇ ನಿಜವಾದ ಸೂಫೀ ಸಂತ!! ಅವರು ಮಾಡಿರುವುದೇ ನಿಜವಾದ ಕರಾಮತ್- ಪವಾಡ!!!" ಅಂದೆ.

ಪುಸ್ತಕದ ಹೆಸರು: [illegible]
[illegible]
ಪ್ರಕಾಶಕರು: [illegible]
ಕಾರ್ಕಳ, ಉಡುಪಿ ಜಿಲ್ಲೆ 2011
ಬೆಲೆ : ರೂಪಾಯಿ 33

...ನಾವು ಸ್ಮಶಾನಕ್ಕೆ ಹೋಗಿ ಬಂದೆವು!



...ನಡಲ್ಲಿ ನಡೆದ ಕಾರ್ಯಕ್ರಮ

'ಲಂಕೇಶ್ 78' ಕಾರ್ಯಕ್ರಮ ಅದ್ಭುತವಾಗಿ ನಡೆದ ...ಯಲ್ಲಿ ಜೆನ್ನಿ ತಂಡ ಇನ್ನೂ ಹಾಡುತ್ತಿರುವಾಗಲೇ ...ಸ್ಸಿಲ್ಲದ ಮನಸ್ಸಿನಿಂದ ಅಲ್ಲಿಂದ ನಾವು ಸ್ಮಶಾನಕ್ಕೆ ...ರ್ಯವಾಗಿ ಹೊರಡಲೇಬೇಕಾಯಿತು. "ಲಂಕೇಶ್ ...ಕ್ರಮಕ್ಕೆ ಬಂದ ಒಂದಷ್ಟು ಜನರನ್ನಾದರೂ ನಮ್ಮ ...ಕ್ಕೆ ಕರೆದುಕೊಂಡು ಬನ್ನಿ" ಎಂದು ಸ್ಮಶಾನದಿಂದ ...ನ ಮೇಲೆ ಫೋನು ಬರುತ್ತಿದ್ದಾಗ ಈ ನಿಟ್ಟಿನಲ್ಲಿ ...ನಿಸಿದ ನಮಗೆ ಕನಿಷ್ಠ ವಯಸ್ಸಾದವರೂ ಬರಲು ...ದ್ದಾಗ ನಿರಾಶೆಯೇ ಆಯಿತು.

...ಯಾವ ಹೆಂಡತಿ ತನ್ನ ಗಂಡನನ್ನು ಸ್ಮಶಾನಕ್ಕೆ ಕಳಿಸಲು ...ತ್ತಾಳೆ? ಪ್ರತಿಮಾ ಕೂಡ ನಾನು ಸ್ಮಶಾನಕ್ಕೆ ...ಗುವುದರ ಬಗ್ಗೆ ಸಿಟ್ಟುಗೊಂಡು ಕೂತಿದ್ದಳು. ಅಂತೂ ...ವದ ನಿರರ್ಥಕತೆಯ ಬಗ್ಗೆ ಇವರಿಗೆಲ್ಲ ಉಪದೇಶಿಸಿ ...ವಾಮದೇವಗೌಡರ ಕಾರಿನಲ್ಲಿ ಸ್ಮಶಾನದತ್ತ ಹೊರಟೆವು. ...ಲೋ ಏನೋ ವಾಮದೇವಗೌಡರ ಹಳೆಯ ಕಾರಿನಲ್ಲಿ ...ಗಲೆಲ್ಲಾ ನನಗೆ ಬೇಡವೆಂದರೂ ಸ್ಮಶಾನದ ನೆನಪು ... ಮತ್ತೆ ಕಾಡುತ್ತದೆ. ಆದರೆ ಗೌಡರಿಗೆ ಮಾತ್ರ ತಮ್ಮ ... ಮೇಲಿನ ವಿಶ್ವಾಸ ಅಖಂಡವಾದುದು.

...ರಿನಲ್ಲಿ ಕುಳಿತ ನಮಗೆ ಯಾರ್‍ಯಾರದೋ ಫೋನು. ... ಹೋಗುತ್ತಿದ್ದೀರಿ ಎಂಬ ಆತಂಕಭರಿತ ಪ್ರಶ್ನೆ. ...ನಕ್ಕೆ' ಎಂದಾಗ ಪಾಪ ಅವರಿಗೆಲ್ಲ ಇನ್ನಷ್ಟು ಗಾಬರಿ. ...ಗೇ ಹೋಗುತ್ತಿದ್ದೇವೆ. ನಾಲ್ಕು ಜನ ನಮ್ಮನ್ನು ...ಕೊಂಡು ಹೋಗುತ್ತಿಲ್ಲ, ಮತ್ತೆ ಬರುತ್ತೇವೆ. ಆತಂಕ ...ಕ" ಎಂದು ಅವರಿಗೆಲ್ಲ ಮನವರಿಕೆ ಮಾಡಿಕೊಡಲಾಯಿತು.

ನಾವು ಹೊರಟಿದ್ದು ರಿಪ್ಪನ್ ಪೇಟೆಯ ಸ್ಮಶಾನಕ್ಕೆ. ಅಲ್ಲಿನ ಯುವಕರಾದ ಪ್ರಜಾವಾಣಿ ವರದಿಗಾರ ರವಿಶಂಕರ್ ಹಾಗೂ ಪ್ರಿಂಟಿಂಗ್ ಪ್ರೆಸ್‌ನ ಬಾಳಿಗರಿಗೆ ಯಾಕೋ ಕೆಲವು ವರ್ಷಗಳಿಂದ ಸ್ಮಶಾನ ಪ್ರೀತಿ ಹುಟ್ಟಿಕೊಂಡುಬಿಟ್ಟಿದೆ. ಇವರೊಂದಿಗೆ ಇನ್ನಷ್ಟು ಯುವಕರು ಸೇರಿಕೊಂಡಿದ್ದಾರೆ. ಇವರ ಪ್ರಯತ್ನದ ಫಲವಾಗಿ ಅಲ್ಲಿನ ಸ್ಮಶಾನ ವ್ಯವಸ್ಥಿತವಾಗಿ ಸಜ್ಜುಗೊಂಡಿದ್ದು ಒಳಹೋಗಲು ಅಗಲವಾದ ರಸ್ತೆ ಕೊನೆಯ ಸಂಸ್ಕಾರಗಳನ್ನು ನೆರವೇರಿಸಲು ಮಂಟಪ ನಿರ್ಮಿಸಲಾಗಿದೆ. ಈ ಬಾರಿ ಸ್ಮಶಾನದ ಒಳಗೆ ನೀರಿನ ಟ್ಯಾಂಕ್ ಕಟ್ಟಿಸಲಾಗಿದ್ದು ಸ್ಮಶಾನವಾಸಿಗಳಿಗೆ ಇಪ್ಪತ್ತನಾಲ್ಕು ಗಂಟೆಯೂ ನೀರು ಸಿಗುತ್ತಿದೆ. ಒಟ್ಟಿನಲ್ಲಿ ಯಾರಿಗಾದರೂ ಸ್ಮಶಾನಕ್ಕೆ ಹೋಗಲು ಮನಸ್ಸು ಬರುವಂತಿದೆ.

ರಿಪ್ಪನ್‌ಪೇಟೆಯ ಗೆಳೆಯರು ಎರಡು ವರ್ಷಗಳಿಂದ ಶಿವರಾತ್ರಿಯಂದು ಸ್ಮಶಾನದಲ್ಲಿ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಜನರಲ್ಲಿನ ಮೌಢ್ಯವನ್ನು ಹೊಡೆದು ಹಾಕಿ ಅವರಲ್ಲಿ ವೈಚಾರಿಕ ಮನೋಭಾವವನ್ನು ಬಿತ್ತುವುದು ಈ ಕಾರ್ಯಕ್ರಮದ ಉದ್ದೇಶ. ಅದಕ್ಕಾಗಿ ಭೂತ ಪ್ರೇತಗಳ ವಾಸಸ್ಥಾನವೆಂದು ನಂಬಿಸಲಾಗಿರುವ ಸ್ಮಶಾನದಲ್ಲಿಯೇ ಅವರು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದಾರೆ.

ಸ್ಥಳೀಯರಲ್ಲದೆ ಸುತ್ತಮುತ್ತಲ ಊರುಗಳಿಂದಲೂ ವೈಚಾರಿಕವಾಗಿ ಯೋಚಿಸುವ ಜನ ಇದರಲ್ಲಿ ಭಾಗವಹಿಸುತ್ತಾರೆ. ಇಡೀ ರಾತ್ರಿ ಜಾತಿ, ಧರ್ಮ, ದೇವರು, ಸಂಪ್ರದಾಯ ಇವುಗಳ ಹೆಸರಲ್ಲಿ ಜನಸಮುದಾಯದೊಳಗೆ ಬೇರುಬಿಟ್ಟಿರುವ ಕಂದಾಚಾರ, ಮೌಢ್ಯಗಳು ಇಲ್ಲಿ ಚರ್ಚೆಗೆ ಬರುತ್ತದೆ. ಉನ್ನತ ವಿದ್ಯೆ ಮತ್ತು ಆಧುನಿಕತೆಯಿಂದ ಕ್ರಮೇಣ ಮರೆಯಾಗಬೇಕಾಗಿದ್ದ ಕಂದಾಚಾರ-ಮೌಢ್ಯಗಳು ಹೇಗೆ ಉನ್ನತ ವಿದ್ಯೆ ಮತ್ತು ಆಧುನಿಕತೆಗಳನ್ನೇ ಏಣಿ ಮಾಡಿಕೊಂಡು ರಕ್ತಬೀಜಾಸುರನಂತೆ ಬೆಳೆಯುತ್ತಿರುವುದನ್ನು ವಿಶ್ಲೇಷಿಸಲಾಗುತ್ತದೆ. ಜ್ಯೋತಿಷ್ಯ ಪುನರ್ಜನ್ಮ ಇತ್ಯಾದಿ ಮೌಢ್ಯಗಳನ್ನು ವ್ಯಾಪಕವಾಗಿ ಹಬ್ಬಿಸುತ್ತಿರುವ ವಿದ್ಯುನ್ಮಾನ ಮಾಧ್ಯಮಗಳೂ ಇಲ್ಲಿ ತರಾಟೆಗೆ ಒಳಗಾಗುತ್ತವೆ. ಪ್ರಾಣಿ ಪಕ್ಷಿಗಳಿಗಿಲ್ಲದ ವಾಸ್ತು, ಜ್ಯೋತಿಷ್ಯದ ಕಟ್ಟುಪಾಡುಗಳು 'ಬುದ್ಧಿವಂತ' ಎನಿಸಿಕೊಂಡ ಮನುಷ್ಯರನ್ನು ಕಾಡುವ, ನಿಯಂತ್ರಿಸುವ ವಿಪರ್ಯಾಸವನ್ನು ವಿವರಿಸಲಾಗುತ್ತದೆ.

ಈ ಬಾರಿ ಬಾಳಿಗರು ದೂರವಾಣಿ ಮಾಡಿ ಶಿವಮೊಗ್ಗದಿಂದ ಆದಷ್ಟು ಜನ ಭಾಷಣಕಾರರನ್ನು ತಮ್ಮ ಸ್ಮಶಾನಕ್ಕೆ ಕರೆದುಕೊಂಡು ಬರಬೇಕೆಂದು ನನಗೆ ತಿಳಿಸಿದ್ದರು. ಭಾಸ್ಕರ ಮತ್ತವರ ಐದು ಮಂದಿ ಗೆಳೆಯರು ಬರುತ್ತೀವಿ ಎಂದು ಒಪ್ಪಿಕೊಂಡವರು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಪ್ಪಿಸಿಕೊಂಡರು. ಸ್ಮಶಾನಕ್ಕೆ ಬರುವುದು ಸರಳ ಸಂಗತಿಯಲ್ಲ ಎಂದು ನಮ್ಮ ಧೈರ್ಯದ ಬಗ್ಗೆ ನಮಗೆ ಹೆಮ್ಮೆಯಾಯಿತು.


ಲಂಕೇಶ್ ಕಾರ್ಯಕ್ರಮದಲ್ಲಿ ಅದ್ಭುತವಾದ ಉದ್ಘಾಟನಾ ಭಾಷಣ ಮಾಡಿದ ರಹಮತ್ ತರೀಕೆರೆ ಅವರ ಮಾತುಗಳನ್ನಿಟ್ಟುಕೊಂಡೇ ಮಾತು ಅಶ್ಲೀಲವಾಗುವ ಬಗೆಯನ್ನು ಪ್ರಕಾಶ್ ವಿವರಿಸಿದರು. ತಾನು ಚಿಕ್ಕಂದಿನಲ್ಲಿ ಆಸ್ತಿಕನಾಗಿದ್ದುದು, ನಂತರ ಓದಿನ ಪ್ರಭಾವಕ್ಕೊಳಗಾಗಿ ಕಟ್ಟಾ ನಾಸ್ತಿಕನಾದದ್ದು, ಈಗ ನಾಸ್ತಿಕನಾದರೂ ಆಸ್ತಿಕರಾದ ಕುಟುಂಬದವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ವಿವರವಾಗಿ ತಿಳಿಸಿದರು.

ಮನುಷ್ಯನ ಅಪಾರ ಭೀತಿತನವನ್ನು ಅರ್ಥಮಾಡಿಕೊಳ್ಳುವ, ಸಭ್ಯನಂತೆ ಫೋನು ಕೊಡುವ ಜನರನ್ನು ಅನುಮಾನಿಸುವ ಲಂಕೇಶರು ಕಲಿಸಿದ ಗುಣಗಳನ್ನು ಪ್ರಸ್ತಾಪಿಸಿದ ನಾನು ಲಂಕೇಶರ ಪ್ರತಿಯೊಂದನ್ನು ಪ್ರಶ್ನಿಸುವ ಮನೋಭಾವವನ್ನು ಕೈಬಿಟ್ಟಿರುವುದೇ ವ್ಯವಸ್ಥೆ ಈ ಮಟ್ಟಿಗೆ ಹದಗೆಡಲು ಕಾರಣವೆಂದು ಹೇಳಿದೆ. ಗಣೇಶ ಬೆಳ್ಳಿ ದೇವರು ಧರ್ಮದ ಬಗ್ಗೆ ಮಾತನಾಡಿದ್ದು ನಗೆಯ ಹೊನಲನ್ನೇ ಹರಿಸಿತು. ದಲಿತ ಸಂಘರ್ಷ ಸಮಿತಿಯಿಂದ ಬಂದ ನಾಗಪ್ಪ ಮೇಸ್ತ್ರಿ ಹೋರಾಟದ ಹಾಡುಗಳನ್ನು ಹೇಳಿ ರೋಮಾಂಚನಗೊಳಿಸಿದರು. ಸುರೇಶ್, ಮಾರ್ಷಲ್ ಶರಾಂ ವೈಯಕ್ತಿಕ ನೆಲೆಯಲ್ಲಿ ಬದಲಾಗಬೇಕಾದ ಅಗತ್ಯವನ್ನು ತಿಳಿಸಿದರು. ಹೋರಾಟಗಾರ ಟಿ.ಆರ್.ಕೃಷ್ಣಪ್ಪ ಸಮಾಜದ ಕೆಲವು ವೃತ್ತಿಗಳನ್ನು ಕೀಳಾಗಿ ನೋಡುವ ಮನೋಭಾವವನ್ನು ಖಂಡಿಸುತ್ತ ಪ್ರತಿಯೊಂದು ವೃತ್ತಿಯೂ ಪವಿತ್ರವೆಂದು ಪ್ರತಿಪಾದಿಸಿದರು. ಕಲ್ಲುಗಳಿಗೆ ಹಾಲೆರೆಯುವ ನಮ್ಮ ಮೂಢ ಆಚರಣೆಗಳನ್ನು ವಿಮರ್ಶೆಗೊಳಪಡಿಸುವ ಅಗತ್ಯವನ್ನು ಪ್ರತಿಪಾದಿಸಿದ ಕವಲೇದುರ್ಗದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಹಾಲು ಸಿಗದೆ ನಮ್ಮ ನಾಡಿನ ಲಕ್ಷಾಂತರ ಬಡಮಕ್ಕಳು ಅಶಕ್ತತೆಯಿಂದ ನರಳುವುದರತ್ತ ಎಲ್ಲರ ಗಮನ ಸೆಳೆದರು.

ಕಳೆದ ವರ್ಷ ಸ್ಮಶಾನದಲ್ಲಿ ದೊಡ್ಡ ಸಂಖ್ಯೆಯ ಜನ ಸೇರಿದ್ದರು. ಅವರಲ್ಲಿ ಸ್ಮಶಾನಕ್ಕೆ ಪ್ರವೇಶ ನಿಷಿದ್ಧವಿರುವ ಮಹಿಳೆಯರಿದ್ದರು, ಮಕ್ಕಳಿದ್ದರು. ಶಿವರಾತ್ರಿಗೂ 'ಇವರಿಗೂ' ಎಂಥ ಸಂಬಂಧವೆಂದು 'ನಾಗರಿಕ' ಸಮಾಜ ವ್ಯಂಗ್ಯನೋಟ ಬೀರುವ ಮುಸಲ್ಮಾನರಿದ್ದರು, ಕ್ರಿಶ್ಚಿಯನ್ನರಿದ್ದರು. ಒಂದಷ್ಟು ಜನ ಸ್ವೆಟರು, ಶಾಲು, ಉಣ್ಣೆಯ ಟೊಪ್ಪಿಗಳನ್ನು ಧರಿಸಿ ಕುರ್ಚಿಗಳಲ್ಲಿ ಕುಳಿತಿದ್ದರೆ, ಸ್ವೆಟರು, ಶಾಲುಗಳನ್ನು ತಾರದೆ ಬಂದವರು ಥರಗುಟ್ಟಿಸುವ ಚಳಿ ತಡೆಯಲಾರದೆ ಸ್ಮಶಾನದಲ್ಲಿ ಹೆಣ ಸುಟ್ಟು ಉಳಿದ ಮರದ ಕುಂಟೆ, ಹೆಣವನ್ನು ಹೊತ್ತು ತರಲು ಬಳಸಿ ಅಲ್ಲೇ ಎಸೆಯಲಾಗಿದ್ದ ಚಟ್ಟದ ಬೊಂಬು, ದಬ್ಬೆಗಳನ್ನು ತಂದು ರಾಶಿ ಹಾಕಿ ಅದಕ್ಕೆ ಬೆಂಕಿ ಕೊಟ್ಟು ಅದರ ಧಗೆಯಲ್ಲಿ ಮೈಕಾಯಿಸಿಕೊಳ್ಳುವ ಸುಖದಲ್ಲಿ ಮಗ್ನರಾಗಿದ್ದರು. ಈ ಸುಖದಲ್ಲಿಯೇ ಅವರೆಲ್ಲರ ಕಿವಿಗಳೂ ಅಲ್ಲಿ 'ಯಾರ್‍ಯಾರೋ' ಆಡುತ್ತಿದ್ದ ಮಾತುಗಳಿಗೆ ಸ್ಪಂದಿಸುತ್ತ ಆಗಾಗ ಸಣ್ಣದಾಗಿ ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದರು. ಕೆಲವೊಮ್ಮೆ ಜೋರಾಗಿ ಗಹಗಹಿಸಿ ನಗುತ್ತಿದ್ದರು. ಒಟ್ಟಾರೆ ಸ್ಮಶಾನದಲ್ಲಿನ ನೀರವತೆ ಓಟಕಿತ್ತು ಅಲ್ಲಿ ಜೀವಂತಿಕೆ ನೆಲೆಸಿತ್ತು ಇದು ಕಳೆದ ವರ್ಷದ ಸ್ಮಶಾನದ ಚಿತ್ರಣವಾಗಿದ್ದರೆ ಈ ಬಾರಿ ಕೊಂಚ ಬದಲಾವಣೆಯಿತ್ತು. ಸ್ಮಶಾನ ಹೆಚ್ಚು ವ್ಯವಸ್ಥಿತವಾಗಿತ್ತು, ನೀರಿನ ವ್ಯವಸ್ಥೆ ಬಂದಿತ್ತು. ಆದರೆ ಈ ಬಾರಿ ಯಾರೂ ಸಾಯದೇ ಇದ್ದುದರಿಂದ ಚಳಿ ಕಾಯಿಸಲು ಬೆಂಕಿಯೇ ಇರಲಿಲ್ಲ. ಗಿರಾಕಿಗಳೇ ಇಲ್ಲದ ಅಂಗಡಿ ಸೊರಗುವಂತೆ ಯಾರೂ ಸಾಯದೇ ಇದ್ದರೆ ಈ ಸುಂದರ ಸ್ಮಶಾನದ ಭವಿಷ್ಯವೇನು ಎಂಬ ಚಿಂತೆ ನನ್ನನ್ನು ಕಾಡತೊಡಗಿತು. ನಾನು ಹೀಗೆ ಚಿಂತಿಸುತ್ತಿರುವಾಗಲೇ "ಮುಂದಿನ ವರ್ಷವೂ ನೀವು ನಮ್ಮ ಸ್ಮಶಾನಕ್ಕೆ ಬರಬೇಕು" ಎಂದು ಬಾಳಿಗರು ಹೇಳಿದಾಗ ಚಿಂತಾಕ್ರಾಂತರಾದ ನಾನು ಮತ್ತು ಪ್ರಕಾಶ್ ಮುಖ ಮುಖ ನೋಡಿಕೊಂಡೆವು.

● ಸರ್ಜಾಶಂಕರ್ ಹರಳಿಮಠ

ರಾಮಾಯಣದೊಳಗಿನ ಬೆಂಕಿ ಹಾಗೂ ಬೆಳಕು



ಭಾಗ 1

ಬಂಜಗೆರೆ ಜಯಪ್ರಕಾಶ್

ಭಾರತೀಯ ಭಾಷೆಗಳಲ್ಲಿ ಇರುವ ರಾಮಾಯಣಗಳ ಸಂಖ್ಯೆ ಬೃಹತ್ತಾಗಿದೆ. ಬೌದ್ಧ ಜಾತಕ ಕತೆಗಳಲ್ಲಿ, ಜೈನ ಪರಂಪರೆಯ ರಾಮಾಯಣಗಳಲ್ಲಿ, ಬೇರೆ ಬೇರೆ ಭಾಷೆಗಳ ಲಿಖಿತ ರಾಮಾಯಣಗಳಲ್ಲಿ ಹಾಗೂ ಮೌಖಿಕ ಪರಂಪರೆಯ ರಾಮಾಯಣಗಳಲ್ಲಿ ಕಂಡು ಬರುವ ರಾಮಕಥೆಯ ಸಾಮಾನ್ಯ ಹಂದರದಲ್ಲಿ ಸಾಮ್ಯತೆಗಳು ಕಂಡುಬರುತ್ತವೆ. ಆದರೆ ವಿವರಗಳಲ್ಲಿ, ನೀತಿ ಹಾಗೂ ಮೌಲ್ಯ ನಿರೂಪಣೆಯಲ್ಲಿ ಪ್ರತಿಯೊಂದು ರಾಮಾಯಣವೂ ಹಲವಾರು ವ್ಯತ್ಯಾಸಗಳನ್ನು ಒಳಗೊಂಡಿದೆ. ಮೊದಲಿದು ರಾಮ ಕಥೆಯಾಗಿತ್ತು ಎನ್ನುತ್ತಾರೆ ರೋಮಿಲಾ ಥಾಪರ್. ಬೌದ್ಧ ಜಾತಕ ಕಥೆಗಳಲ್ಲಿ ಕಂಡು ಬರುವಂತೆ ಇದು ಎರಡು ಮೂರು ಭಾಗಗಳಲ್ಲಿ ಪ್ರಚಲಿತವಿತ್ತು ಅಂತ ಕಾಣುತ್ತದೆ. ದಶರಥ ಜಾತಕದಲ್ಲಿ ಅಯೋಧ್ಯೆಗೆ ಸಂಬಂಧಪಟ್ಟ ಕಥೆಯ ಮೂಲ ಹಂದರವಿದೆ. ಮಲತಾಯಿಯ ಪಿತೂರಿಯಿಂದ ವನವಾಸಕ್ಕೆ ಹೋಗಬೇಕಾಗಿ ಬಂದ ಅಣ್ಣ ತಮ್ಮ ಹಾಗೂ ತಂಗಿಯ ವೃತ್ತಾಂತ ಇದರಲ್ಲಿದೆ.


ವೇಸ್ಸಂತರ ಜಾತಕದಲ್ಲಿ ವನವಾಸದಲ್ಲಿ ಸಂಭವಿಸುವ ಕೆಲವು ಘಟನಾವಳಿಗಳ ಕಥಾ ಹಂದರವಿದ್ದು ಅಪಹರಣಕ್ಕೊಳಗಾಗಿದ್ದ ರಾಜಕುಮಾರಿಯನ್ನು ಬಿಡಿಸಿಕೊಂಡು ಬಂದು ರಾಜ್ಯಭಾರ ವಹಿಸಿಕೊಳ್ಳುವವರೆಗಿನ ಕಥನ ಅದರಲ್ಲಿದೆ. ಈ ಬಗೆಯ ಘಟನಾವಳಿಗಳು ಬುದ್ಧನ ಕಾಲಕ್ಕಿಂತ ಸ್ವಲ್ಪ ಮೊದಲಿನ ಬುಡಕಟ್ಟು ಸಮುದಾಯಗಳ ಜೀವನಾನುಭವದಲ್ಲಿ ಇದ್ದವುಗಳಾಗಿದ್ದು ವೈಶಾಲಿಯ ಆರಂಭಿಕ ಚರಿತ್ರೆಯಲ್ಲಿ ಹೀಗೆ ಅಪಹರಣಕ್ಕೊಳಗಾದ ರಾಜಕುಮಾರಿಯರನ್ನು ಬಿಡಿಸಿ ತರುವ ಹಲವಾರು ಪ್ರಸಂಗಗಳ ಉಲ್ಲೇಖವಿದೆ ಎನ್ನುತ್ತಾರೆ ರೋಮಿಲಾ ಥಾಪರ್. ಚೀನೀ ಭಾಷೆಯ ಅನಾಮಕ ಜಾತಕದಲ್ಲಿ ಅಯೋಧ್ಯಾ ಮತ್ತು ವನವಾಸದ ಘಟನಾವಳಿಗಳೆರಡೂ ಸೇರಿದ ಕಥನವಿದ್ದು ಇದು ವಾಲ್ಮೀಕಿ ರಾಮಾಯಣದ ಕಥಾವಸ್ತುವನ್ನು ಅನುಸರಿಸಿರುವಂತೆ ಕಾಣುತ್ತದೆ. ಬಹುಶಃ ರಾಮಕಥೆ ವಾಲ್ಮೀಕಿಯ ಕೈಯಲ್ಲಿ ರಾಮಕಾವ್ಯವಾಗಿ ನಿರೂಪಿತವಾಗಿರಬೇಕು. ನಂತರ ಭೃಗುಗಳೆಂದು ಕರೆಯಲ್ಪಡುವ ರಾಮಾಯಣ ಸಂಕಲನಕಾರರ ಕಾಲದಲ್ಲಿ ಇದಕ್ಕೆ ಬಾಲಕಾಂಡ ಮತ್ತು ಉತ್ತರಕಾಂಡಗಳು ಸೇರಿಸಲ್ಪಟ್ಟು ರಾಮಾಯಣದ ಕಥನ ರೂಪುಗೊಂಡಿರಬೇಕು ಎನ್ನುತ್ತಾರೆ ಚರಿತ್ರೆಕಾರರು.

ಒಂದು ಯುಗದ ಸಾಮಾನ್ಯ ಅನುಭವಗಳ ಪ್ರತೀಕವಾಗಿ ರಾಮಾಯಣ ರೂಪುಗೊಂಡಿದ್ದು, ಆ ಕಾಲಘಟ್ಟದ ಪ್ರಸಿದ್ಧ ಪಾತ್ರಗಳ ಕಥೆಯಲ್ಲಿ ಈ ಯುಗಾನುಭವವನ್ನು ಅಳವಡಿಸಿ ಮಹಾಕಾವ್ಯಗಳನ್ನು ರೂಪಿಸಲಾಗಿದ್ದು ಅವು ಕಾಲಕಾಲಕ್ಕೆ ಬೇರೆ ಬೇರೆ ಕಾಲಘಟ್ಟಗಳ ಸನ್ನಿವೇಶಗಳನ್ನು ಪ್ರತಿಫಲಿಸುತ್ತಾ ಮರುನಿರೂಪಣೆಗೊಂಡಿರುವುದರಿಂದ, ಬೇರೆ ಬೇರೆ ರಾಮಾಯಣಗಳ ಕಥಾ ಹಂದರದಲ್ಲಿ ಇರುವ ಸಾಮ್ಯತೆಗಳಿಗಿಂತ ಅವುಗಳ ವಿವರಣೆಯಲ್ಲಿ, ನೀತಿ ನಿರೂಪಣೆಯಲ್ಲಿ, ಪಾತ್ರ ಸ್ವಭಾವಗಳ ವರ್ಣನೆಯಲ್ಲಿ ಇರುವ ವ್ಯತ್ಯಾಸಗಳ ಅಧ್ಯಯನ ನಮಗೆ ಮಹತ್ವದ ಒಳನೋಟಗಳನ್ನು ಒದಗಿಸಬಲ್ಲುದಾಗಿದೆ. ಯಾಕೆಂದರೆ ಮಹಾಕಾವ್ಯವೊಂದು ಪುರಾಣವಾಗಿ ನಿರೂಪಿತವಾಗುವ ಪ್ರಕ್ರಿಯೆಯಲ್ಲಿ, ಅವತಾರಪುರುಷರ ಕಥನವಾಗಿ ಪವಿತ್ರೀಕರಿಸಲ್ಪಡುವ ಪ್ರಕ್ರಿಯೆ ಸಂಭವಿಸಿದ್ದಕ್ಕೆ ಸಾಂಸ್ಕೃತಿಕ ರಾಜಕಾರಣದ ಪ್ರೇರಣೆಗಳಿರಬೇಕು ಎಂಬುದನ್ನು ನಾವು ಊಹಿಸಬಹುದಾಗಿದೆ.

ಆ ಬಗೆಯ ರಾಜಕಾರಣ ರಾಮಾಯಣದ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಿಸಿದೆ, ಬೇರೆ ಬೇರೆ ರಾಮಾಯಣಗಳು ನಿರ್ಮಿತವಾದಾಗ ಈ ಸಾಂಸ್ಕೃತಿಕ ರಾಜಕಾರಣ ಹೇಗೆ ಕೆಲಸ ಮಾಡಿದೆ ಎಂಬುದನ್ನು ನಾವು ಪರಿಶೀಲನೆಗೊಳಪಡಿಸಬೇಕು. ಇದು ಯಾವುದೇ ಸಾಂಸ್ಕೃತಿಕ ಮಹತ್ವದ ಕೃತಿಯನ್ನು ನಾವು ಎದುರುಗೊಳ್ಳಬೇಕಾಗಿರುವ ವಿಧಾನ.

ಪುರುಷೋತ್ತಮನಾದ ಶ್ರೀರಾಮಚಂದ್ರ ಭರತನಿಗೆ ರಾಜನೀತಿ ಹೇಳುವ ಸನ್ನಿವೇಶದ ಉದಾಹರಣೆಯೊಂದಿಗೆ ಈ ಪರಿಶೀಲನೆ ಆರಂಭಿಸಬಹುದು ಅಂದುಕೊಳ್ಳುತ್ತೇನೆ - ಹೆಂಗಸರಿಗೆ ಯಾವ ರಹಸ್ಯಗಳನ್ನೂ ಹೇಳಬಾರದು, ಹೆಂಗಸರು ನಂಬಿಕೆಗೆ ಅನರ್ಹರು, ಅವರಿಗೆ ರಾಜಕಾರಣ ಗೊತ್ತಾಗುವುದಿಲ್ಲ, ಅವರ ಬುದ್ಧಿ ಮೊಣಕಾಲ ಕೆಳಗೆ, ಅವರು ಕಾಮುಕರು, ಅವರನ್ನು ನಂಬಬೇಡ; ತಂದೆಯಾಗಲಿ, ಅಣ್ಣನಾಗಲಿ, ವೃದ್ಧರಾಗಲಿ ಯಾರ ಜೊತೆಗೂ ಏಕಾಂತದಲ್ಲಿರುವುದಕ್ಕೆ ಬಿಡಬೇಡ ಎಂದು ಹೇಳುತ್ತಾನೆ ರಾಮ. ಇದು ರಾಮ ಆಡಿದ ಮಾತಲ್ಲ ಬಿಡಿ. ಆ ಮಾತುಗಳನ್ನು ಅವನ ಬಾಯಿಂದ ಆಡಿಸಲಾಗುತ್ತದೆ. ಯಾರ ಬಾಯಿಂದ ಯಾವ ಮಾತನ್ನು ಹೇಳಿಸಿದರೆ ಜನ ನಂಬುತ್ತಾರೆ ಎನ್ನುವುದನ್ನು ಆಡಿಸುವವರು ನೋಡುತ್ತಾರೆ. ಇದೊಂದು ಸಾಂಸ್ಕೃತಿಕ ರಾಜಕಾರಣದ ವಿದ್ಯಮಾನವಾಗಿ ಭಾರತದಲ್ಲಿ ಮೊದಲಿಂದಲೂ ನಡೆದಿದೆ.

'ಚಾತುರ್ವರ್ಣ್ಯಂ ಮಯಾ ಸೃಷ್ಟಂ, ಗುಣಕರ್ಮ ವಿಭಾಗಶಃ' ಅನ್ನುವ ಮಾತನ್ನು ಯಾರಿಂದ ಹೇಳಿಸಿದರು? ಸ್ವತಃ ಚಾತುರ್ವರ್ಣ್ಯದಲ್ಲಿ ಶೂದ್ರನಾದ, ಗೋಪಾಲಕನಾದ ಕೃಷ್ಣನ ಬಾಯಿಂದ ಹೇಳಿಸಿದಲ್ಲದೆ ಆ ಮಾತಿಗೆ ಬೆಲೆ ಸಿಗುವುದಿಲ್ಲ ಎನ್ನುವುದು ಅವರಿಗೆ ಗೊತ್ತು, ಇಡೀ ಭಾರತದ ಕಪ್ಪು ಜನರ, ನಮ್ಮಂತಹ ದ್ರಾವಿಡ ಜನರ ಆರಾಧ್ಯ ಮೂರ್ತಿಯಾಗಿದ್ದ ಕೃಷ್ಣನ ಬಾಯಿಂದ ಭಗವದ್ಗೀತೆಯನ್ನು




ಹೇಳಿಸಿದರು. ಯಾಕೆಂದರೆ ಆಗ ಮಾತ್ರವೇ ನಮ್ಮನ್ನು ಆ ರೀತಿಯಾದ ದಾಸ್ಯದಲ್ಲಿಡುವುದಕ್ಕೆ ಸಾಧ್ಯ ಅಂತ. ನಮ್ಮನ್ನು ಒಂದು ಸಾಂಸ್ಕೃತಿಕ ದಾಸ್ಯಕ್ಕೆ ಇಷ್ಟು ವರ್ಷಗಳ ಕಾಲ ಪರಂಪರೆಯ ಹೆಸರಲ್ಲಿ ದೂಡಿದರು. ಆದರೆ ಇದು ಪೂರ್ತಿ ಏಕಮುಖವಾದುದಲ್ಲ. ನಮ್ಮಲ್ಲಿ ಯಾವಾಗಲೂ ಎರಡು ಪರಂಪರೆಗಳು ಬೆಳೀತಾನೇ ಬಂದಿವೆ. ಪ್ರತಿಯೊಂದು ಕೃತಿ, ಪ್ರತಿಯೊಂದು ಮಹಾಕಾವ್ಯ ಅಥವಾ ಮಹತ್ವಾಕಾಂಕ್ಷೆಯ ಕೃತಿ, ತನ್ನ ಮುಖವನ್ನು ಆಯಾ ಕಾಲ ಘಟ್ಟದ ಕನ್ನಡಿಯಲ್ಲಿ ನೋಡಿಕೊಳ್ಳಲು ಪ್ರಯತ್ನಪಟ್ಟಿರುತ್ತದೆ. ಆ ಸಾಂಸ್ಕೃತಿಕ ಸನ್ನಿವೇಶ ಹಾಗೂ ಆ ಸಾಂಸ್ಕೃತಿಕ ಅನುಭವ ಅದರಲ್ಲಿ ಬಿಂಬಿತವಾಗಿರುತ್ತದೆ.

ಆದರೆ ಆ ರೀತಿಯಾಗಿ ಮುಖನೋಡಿಕೊಳ್ಳುವ ಮನುಷ್ಯರು ಒಬ್ಬರೇ ಆಗಿರಬೇಕೆಂದಿಲ್ಲ, ಆ ಕನ್ನಡಿಯ ಮುಂದೆ ಬೇರೆಬೇರೆಯವರು ನಿಂತಾಗ ಬೇರೆಬೇರೆ ಮುಖಗಳು ಕಾಣಿಸುತ್ತಾ ಇರಬಹುದು. ಅದು ರಾಮಾಯಣದ ಸಂದರ್ಭದಲ್ಲಿ ಅಥವಾ ಬೇರೆ ಇನ್ಯಾವುದೇ ಕಾಲಘಟ್ಟದಲ್ಲೂ ಆಗಬಹುದು. ಕರ್ಣನ ಬಗ್ಗೆ ನಾವು ಮಾಡುವ ವ್ಯಾಖ್ಯಾನ ಬೇರೆ, ಆ ವ್ಯಕ್ತಿತ್ವದ ಬಗ್ಗೆ ಆ ಸನ್ನಿವೇಶದ ಇನ್ನೊಂದು ಮಗ್ಗುಲಲ್ಲಿರುವವರು ಹೇಳುವ ಮಾತೇ ಬೇರೆ. ದ್ರೋಣ ಮತ್ತು ಕರ್ಣರ ನಡುವಿನ ವಾಗ್ವಾದ ಪಂಪನ ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ಬಹಳ ಚೆನ್ನಾಗಿ ನಿರೂಪಿತವಾಗಿದೆ. 'ನಾಲಗೆ ಕುಲಮಂ ತುಬ್ಬುವವೋಲ್' ಎಂಬ ಮಾತನ್ನು ದ್ರೋಣಾಚಾರ್ಯನ ಬಾಯಿಂದ ಆಡಿಸಲಾಗುತ್ತದೆ. ನಿನ್ನ ನಾಲಿಗೆಯ ಸ್ವಭಾವ ನಿನ್ನ ಕೀಳು ಜಾತಿಯನ್ನು ಬಿಂಬಿಸುತ್ತಿದೆ ಅಂತ. ಅದಕ್ಕೆ ಕರ್ಣನ ಉತ್ತರ? ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಂ, ಅಣ್ಮು ಕುಲಂ, ಅಭಿಮಾನಂ ಕುಲಂ; ಯಾವುದದು ಕುಲ ಅಂದರೆ? ಕುಲಂಕುಲಮೆಂದು ಉಗ್ಗಡಿಪಿರೇಂಗಳ ಕುಲಂ ಮಾರ್ಮಲೆವರನಟ್ಟಿ ತಿಂಬುದೇಂ? ಎನ್ನುವ ಹಟ, ಸ್ವಾಭಿಮಾನದ ಮಾತು ಆ ಸನ್ನಿವೇಶದಲ್ಲಿ ಬರುತ್ತದೆ.

ನೀವು ಇದರಲ್ಲಿ ಯಾವುದರ ಪರ ನಿಲ್ಲುತ್ತೀರ? ಯಾವ ಮಾತನ್ನು ನಿಮ್ಮ ಉಲ್ಲೇಖಕ್ಕೆ ಬಳಸಿಕೊಳ್ಳುತ್ತೀರ ಎಂಬುದು ನೀವು ಸನ್ನಿವೇಶದ ಯಾವ ಮಗ್ಗುಲಿನಲ್ಲಿ ಇದ್ದೀರ ಎಂಬುದಕ್ಕೆ ನಿದರ್ಶನವಾಗುತ್ತದೆ. ಎರಡು ಮಾತುಗಳೂ ಒಂದೇ ಕೃತಿಯಲ್ಲಿ, ಒಬ್ಬನೇ ಕೃತಿಕಾರನ ಕೈಯಲ್ಲಿ ಮೂಡಿ ಬಂದಿವೆ. ಇವೆರಡು ಮಾತುಗಳಲ್ಲಿ ನಾವು ಯಾವುದನ್ನು ಆರಿಸಿಕೊಳ್ಳಬೇಕು? ನಾವು ವಿವೇಚನಾಶೀಲರಾಗಿರದಿದ್ದರೆ, ಕುರುಡಾಗಿ ಅದರ ಕೈಹಿಡಿದು ಹೋಗುವವರಾದರೆ ಅಪಾಯಗಳು ಕಟ್ಟಿಟ್ಟ ಬುತ್ತಿ, ಯಾಕೆಂದರೆ ಎಲ್ಲರೂ ಈ ಸಮಾಜದಲ್ಲಿ ಒಂದೇ ನೆಲೆಯಲ್ಲಿ ನಿಂತಿಲ್ಲ.

ಆಂಧ್ರದ ಹಿರಿಯ ಮಹಿಳಾ ಲೇಖಕಿ ರಂಗನಾಯಕಮ್ಮ ಹೇಳುತ್ತಾರೆ- ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸು ಎನ್ನುವ ಮಾತನ್ನು ಹೇಳಿದರೆ, ಈ ಮೌಲ್ಯದಿಂದ ಯಾರಿಗೆ ಲಾಭ? ಯಾರಿಗೆ ಲಾಭ ಎಂದರೆ ಹೊಡೆಯುವವರಿಗೆ ಲಾಭ. ಈ ಮೌಲ್ಯ ಒಂದು ಸನ್ನಿವೇಶದಲ್ಲಿ ನಿರಪೇಕ್ಷವಾಗಿ ಅನ್ವಯವಾಗುವುದಿಲ್ಲ, ಕೆನ್ನೆಗೆ ಹೊಡೆಯಲು ಯಾರಿಗೆ ಶಕ್ತಿಯಿದೆ. ಗಂಡನಾದವನು ಕೆನ್ನೆಗೆ ಹೊಡೆಯಬಲ್ಲ, ಹೆಂಡತಿಯಾದವಳು ಹೊಡೆಸಿಕೊಳ್ಳುತ್ತಾಳೆ. ಅವಳು ಮತ್ತೊಂದು ಕೆನ್ನೆಯನ್ನು ಒಡ್ಡಬೇಕಾಗುತ್ತದೆ. ಮಾಲೀಕನಾದವನಿಗೆ ಹೊಡೆಯುವ ಶಕ್ತಿಯಿದೆ. ಕೂಲಿಯಾದವನು ಮತ್ತೊಂದು ಕೆನ್ನೆ ಒಡ್ಡಬೇಕಾದ ಮೌಲ್ಯಕ್ಕೆ ಸಿಕ್ಕಿ ಬೀಳುವವನಾಗುತ್ತಾನೆ. ಶ್ರೀಮಂತನಾದವನು ಹೊಡೆಯುತ್ತಾನೆ, ಬಡವನಾದವನು ಇನ್ನೊಂದು ಕೆನ್ನೆಯನ್ನು ತೋರಿಸುವ ನೈತಿಕ ಬಿಕ್ಕಟ್ಟಿಗೆ ಬೀಳುತ್ತಾನೆ. ಪೋಲೀಸರು ಹೊಡೆಯುತ್ತಾರೆ. ಹೊಡೆಸಿಕೊಂಡವರು ಚಕಾರವೆತ್ತದೆ ಇನ್ನೊಂದು ಕೆನ್ನೆ ತೋರಿಸಬೇಕಾಗುತ್ತದೆ. ಹೊಡೆಯಬಲ್ಲ ಅಧಿಕಾರವು ಎಲ್ಲರಲ್ಲಿ ಸಮಾನವಾಗಿ ವಿಭಜಿತ ಆಗಿಲ್ಲದಿರುವಾಗ, ಎಲ್ಲರ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳು ಒಂದೇ ಅಲ್ಲದಿದ್ದಾಗ, ಈ ರೀತಿಯ ಮೌಲ್ಯಗಳನ್ನು ಚಾಲ್ತಿಗೆ ತರುವುದೇ ಮೋಸ ಎನ್ನುತ್ತಾರೆ ಮುಪ್ಪಾಳ ರಂಗನಾಯಕಮ್ಮ.

ಈ ರೀತಿಯಾದ ಮೌಲ್ಯ ಸರೀಕರ ನಡುವೆ ಮಾತ್ರ ನ್ಯಾಯಯುತವಾಗಿರಬಲ್ಲದು. ನಾವೂ ನೀವೂ ಸಮಬಲರಿದ್ದಾಗ, ನಿಂತಿರುವ ಪಾತಳಿ ಒಂದೇ ಇದ್ದಾಗ, ನೀವು ಉದ್ವೇಗಕ್ಕೊಳಗಾದ ಕ್ಷಣದಲ್ಲಿ ಅಕಸ್ಮಾತ್ ಕ್ರೋಧ ತಳೆದು ಒಂದು ಕೆನ್ನೆಗೆ ಹೊಡೆದರೆ ಆಗ ನಾನು ಇನ್ನೊಂದು ಕೆನ್ನೆಯನ್ನು ತೋರಿಸುವುದು ಸರಿ. ಆದರೆ ಈ ಮೌಲ್ಯವನ್ನು ನನ್ನ ಹೆಂಡತಿಗೂ, ನನ್ನ ಮಗಳಿಗೂ, ನನ್ನ ಬಳಿ ದುಡಿಯುವ ಕೂಲಿಗೂ ಅನ್ವಯಗೊಳಿಸಲು



ಹೇಳಿದರೆ ಅದು ಮೋಸ.

ಇದು ಮೌಲ್ಯ ಪ್ರಜ್ಞೆ, ಮಹಾಕಾವ್ಯವು ಯಾವಾಗಲೂ ಸುಮ್ಮನೆ ರಚನೆಯಾಗುವುದಿಲ್ಲ, ಒಂದೊಂದು ಸನ್ನಿವೇಶಕ್ಕೂ ಒಂದೊಂದು ಮೌಲ್ಯ ಪ್ರಜ್ಞೆ ಇರುತ್ತದೆ. ಆ ಮೌಲ್ಯವನ್ನು ಸಾರುವುದಕ್ಕಾಗಿಯೇ ಮಹಾಕಾವ್ಯಗಳು ರಚನೆಯಾಗುತ್ತವೆ. ಆ ಕಾರಣದಿಂದಾಗಿಯೇ ಮಹಾಕಾವ್ಯಗಳನ್ನು ವ್ಯಾಪಕವಾಗಿ ಪ್ರಚಲಿತಗೊಳಿಸಲಾಗುತ್ತದೆ.

ಯಾವುದೇ ಕೃತಿ ಕಾಲ ಕಾಲಕ್ಕೆ ಮತ್ತೆ ಮತ್ತೆ ಪ್ರಸ್ತುತಪಡಿಸಲಾಗುತ್ತಿದೆ, ಪುನಾರಚಿಸಲಾಗುತ್ತಿದೆ ಎಂದರೆ ಯಾವುದೋ ಒಂದು ಅಂಶ ಅದರೊಳಗೆ ಪ್ರತಿಪಾದನೆಗೊಳ್ಳುವ ಉದ್ದೇಶ ಹೊಂದಿದೆ. ಅದು ಈಡೇರಬೇಕಾದುದಾಗಿದೆ. ಆದ್ದರಿಂದ ವಾಲ್ಮೀಕಿ ಎಲ್ಲೂ ಸುಳ್ಳು ಬರೆದಿಲ್ಲ, ವಾಲ್ಮೀಕಿಯ ರಾಮ ಕತೆಯಲ್ಲಿ ರಾಮ ಮಾಮೂಲಿ ರಾಗ ದ್ವೇಷಗಳುಳ್ಳ ಮನುಷ್ಯ. ಮಾಂಸ ತಿನ್ನುತ್ತಾನೆ, ಆಗಾಗ ಕೋಪಗೊಳ್ಳುತ್ತಾನೆ, ವಿಚಲಿತನಾಗುತ್ತಾನೆ, ಭರತನನ್ನು ಅನುಮಾನಿಸುತ್ತಾನೆ, ಈ ಕೈಕೇಯಿ ಮನೆ ಹಾಳಾಗಿ ಹೋಗಲಿ ಎಂದು ಬೈದುಕೊಳ್ಳುತ್ತಾನೆ. ಇದು ವಾಲ್ಮೀಕಿ ರಾಮಾಯಣದಲ್ಲಿರುವುದು. ಆದರೆ ಅದಕ್ಕೆ ಬಾಲಕಾಂಡ ಮತ್ತು ಉತ್ತರ ಕಾಂಡ ಸೇರಿಸಿದವರು ಬೇರೆಯದೇ ಉದ್ದೇಶ ಹೊಂದಿದ್ದರು. ಆ ನಂತರ ಅದು ತುಳಸೀದಾಸರ ಕೈಯಲ್ಲಿ 'ರಾಮ ಚರಿತ ಮಾನಸ' ಆಗುವ ಹೊತ್ತಿಗೆ ರಾಮ ಕತೆಯನ್ನು ಬಹಳ ಭಿನ್ನ ಉದ್ದೇಶಕ್ಕಾಗಿ ಪ್ರಸ್ತುತಪಡಿಸುವಂತಹ ದೊಡ್ಡ ವಿದ್ಯಮಾನಗಳು ಸಂಭವಿಸಿದವು.

ರಾಮಾಯಣದ ಬಗ್ಗೆ ನಾವು ಚರ್ಚೆ ಮಾಡಿದಾಗ... ನಮಗೆ ಬೇಕಾಗಿರುವ ರಾಮ ಯಾರು? ನಮಗೆ ಬೇಕಾಗಿರು... ನೀತಿ ಏನು? ಅದರಲ್ಲಿ ಯಾವ ಬಗೆಯ ನೀತಿ ಹೇಳಲಾಗಿ... ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಒಂದು... ಫೋಟೋ ಪ್ರಚಲಿತದಲ್ಲಿತ್ತು. ಆ ಫೋಟೋದ... ಪ್ರಜಾವತ್ಸಲ ಸೀತಾರಾಮ ಇದ್ದ. ಅವನನ್ನು ನೋಡಿದ... ಆ ಸುಂದರ ವದನ, ಅವನ ಶಾಂತಚಿತ್ತ ಒಂದು ಪಕ್ಕದ... ಸುಂದರಿಯಾದ ಹೆಂಡತಿ ಸೀತೆ, ಇನ್ನೊಂದು ಪಕ್ಕದ... ನಿಂತಿರುವ ಸುಂದರನಾದ ತಮ್ಮ ಅವರೆಲ್ಲರ ಮುಂದ... ಲಕ್ಷ್ಮಣ ಮತ್ತು ಸೇವಕನಾದ ಈ ಹನುಮ; ಈ ಹನುಮನ... ಅವರ ಜೊತೆಗೇ ನಿಲ್ಲಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದ... ಅವನನ್ನು ಯಾಕೋ ಮೊಣಕಾಲೂರಿ ಕೂತಿರುವಂ... ಚಿತ್ರಿಸಲಾಯಿತು. ಆದರೂ ಕೂಡ ಪರವಾಗಿಲ್ಲ. ಕೆಲವ... ವಿಮರ್ಶೆಗಳೊಂದಿಗೇ ಆಗಲಿ, ನಮ್ಮ ಭಾರತೀಯ... ಮನಃಸ್ಥಿತಿಗೆ ಆ ಗ್ರೂಪ್ ಫೋಟೋ... ಹೊಂದಿಕೆಯಾಗುವಂತಿತ್ತು, ರಾಮನ ಹೆಗ್ಗಳಿಕೆಗೂ ಆ ಭಂಗಿ... ಒಪ್ಪುವಂತಾದ್ದಾಗಿತ್ತು.

80ರ ದಶಕದ ನಂತರ ಪ್ರಜಾವತ್ಸಲ ಸೀತಾರಾಮನನ್ನು, ಶ್ರೀರಾಮನನ್ನು ಕೋದಂಡರಾಮನನ್ನಾಗಿ ಬಿಂಬಿಸ... ಲಾಯಿತು. ಧನುರ್ಧಾರಿಯಾಗಿ, ಸಮುದ್ರ ರಾಜನನ್ನು... ನುಂಗಿ ನೊಣೆಯಲು ಎದೆಯೇರಿಸುವ ಕೋದಂಡರಾಮ... ಅವನ ಸುಂದರ ವದನಕ್ಕೂ ಅವನಿರುವ ವೀರಭಂಗಿಗೂ... ಹೊಂದಾಣಿಕೆಯಾಗುವುದಿಲ್ಲ ಎನ್ನುವುದಾದರೂ ಅವರಿಗೆ... ಹೊಳೆಯಬೇಕಿತ್ತು ಎಲ್ಲರ ಕೈಯಲ್ಲೂ ವಿಲನ್ ಪಾತ್ರ... ಮಾಡಿಸಲಿಕ್ಕಾಗುವುದಿಲ್ಲ. ಅದಕ್ಕೆ ನಿಶ್ಚಿತವಾದ... ಭಾವಭಂಗಿಗಳಿರಬೇಕು. ಸೀತಾರಾಮನನ್ನು ಹೀಗೆ... ಕೋದಂಡರಾಮನನ್ನಾಗಿ ಬಿಂಬಿಸಿ, ಕ್ಯಾಲೆಂಡರ್ ಗಳನ್ನು... ಫೋಟೋಗಳನ್ನು ಯಾಕೆ ಹಂಚುತ್ತಾ ಇದ್ದಾರೆ? ರಾಮ ಬೆಸೆಯುವ ಸಂಕೇತವಾಗಬೇಕೋ ಒಡೆಯುವ ಸಂಕೇತವಾಗಬೇಕೋ?

ಬೆಸೆಯುವ ಸಂಕೇತವಾಗಬೇಕು. ಪ್ರಜಾವತ್ಸಲ... ಆಗಬೇಕು. ರಾಮರಾಜ್ಯ ಎಂದ ಕೂಡಲೇ ಬೇರೊಂದು... ಹೃದಯದಲ್ಲಿ ಭಯ ಹುಟ್ಟಬಾರದು. ಪ್ರತಿಯೊಬ್ಬರ... ಕ್ಷೇಮವೂ ಅಲ್ಲಿ ಕಾಪಾಡಲ್ಪಡುತ್ತದೆ. ಪ್ರತಿಯೊಬ್ಬರೂ... ಅಲ್ಲಿ ಸಂತುಷ್ಟರಾಗಿದ್ದಾರೆ. ಒಮ್ಮೆ ಒಂದು ನಾಯಿ... ಬಂದು ನನ್ನನ್ನು ಬ್ರಾಹ್ಮಣನೊಬ್ಬ ವಿನಾಕಾರಣ... ಹೊಡೆದು ಹಿಂಸಿಸಿದ್ದಾನೆ ಎಂದು ರಾಮನಿಗೆ ದೂರು... ಕೊಡುತ್ತದೆ. ಆಯಿತು, ಅವನನ್ನು ಸೆರೆಮನೆಗೆ ದೂಡಿ... ಶಿಕ್ಷೆ ವಿಧಿಸುತ್ತೇನೆ ಎನ್ನುತ್ತಾನೆ ರಾಮ. ಬೇಡ ಅವನನ್ನು... ಸೆರೆಮನೆಗೆ ದೂಡಬಾರದು ನೀವು ಎನ್ನುತ್ತದೆ ನಾಯಿ. ಹಾಗಾದರೆ ಏನು ಶಿಕ್ಷೆ ವಿಧಿಸಬೇಕು ಎಂದು ಕೇಳುತ್ತಾನೆ ರಾಮ. ಆ ಬ್ರಾಹ್ಮಣನನ್ನು ದೇವಾಲಯವೊಂದರ ಕೋಶಾಧಿಕಾರಿಯಾಗಿ ನೇಮಿಸಬೇಕು ಎಂದು ಕೇಳಿಕೊಳ್ಳುತ್ತದೆ ನಾಯಿ. ಇದೆಂತಹ ಶಿಕ್ಷೆ, ನಿನ್ನನ್ನು ವಿನಾಕಾರಣ ಹಿಂಸಿಸಿದವನಿಗೆ ಪುರಸ್ಕಾರ ಕೊಡಿಸುವ ಮಾತಾಡುತ್ತಿರುವೆಯಲ್ಲ ಎನ್ನುತ್ತಾನೆ ರಾಮ. ನಾನು ಹೋದ ಜನ್ಮದಲ್ಲಿ ದೇವಾಲಯವೊಂದರ ಕೋಶಾಧಿಕಾರಿಯಾಗಿದ್ದೆ. ಅದರ ಹಣ ಕದ್ದು ತಿಂದ ಪಾಪದಿಂದಾಗಿ ಈ ಜನ್ಮದಲ್ಲಿ ನಾಯಿಯಾಗಿ ಹುಟ್ಟಿ ಬೀದಿಗೆ ಬಿದ್ದೆ. ಹಾಗಾಗಿ ಅವನಿಗೂ ಅದೇ ಸಂಭವಿಸಲಿ ಎಂದು ಈ ಬಗೆಯ ಶಿಕ್ಷೆ ಕೊಡಲು ಬೇಡಿಕೆ ಇಟ್ಟಿದ್ದೇನೆ ಎನ್ನುತ್ತದೆ ನಾಯಿ.

ಈ ಬಗೆಯಲ್ಲಿ ಪ್ರಜಾಪರಿಪಾಲಕನಾದ ಶ್ರೀರಾಮನನ್ನು ಕೋದಂಡರಾಮನನ್ನಾಗಿ ಬಿಂಬಿಸುವ ರಾಜಕೀಯ ಮನಃಸ್ಥಿತಿಯೇ ಅಪಾಯಕಾರಿ. ಉರಿಯುವ ಮನೆಯಲ್ಲಿನ ಗಳ ಹಿರಿಯುವುದರಿಂದ ನಿಮ್ಮ ನಮ್ಮಂತಹ ನಾಗರಿಕರಿಗೆ, ಉದ್ಯೋಗಸ್ಥರಿಗೆ, ವ್ಯಾಪಾರಿಗಳಿಗೆ ಗೃಹಿಣಿಯರಿಗೆ ಏನೂ ಲಾಭವಿಲ್ಲ. ಸಂಸ್ಕೃತಿಯನ್ನು ಒಂದು ಆಧಿಪತ್ಯದ ಸಾಧನವನ್ನಾಗಿ ಮಾಡಿಕೊಳ್ಳುವ ಮೂಲಕ, ಅದನ್ನು ಮನುಷ್ಯರ ಮೇಲೆ ಹೇರುವ ಮೂಲಕ, ಅಧೀನಕ್ಕೊಳಪಡಿಸಿಕೊಳ್ಳುವ ಯಾವುದೇ ಪ್ರಯತ್ನಗಳು ಸೋಲಿನಲ್ಲೇ ಕೊನೆಗೊಳ್ಳುತ್ತವೆ. ಹತಾಶೆಯಲ್ಲಿ ಕೊನೆಗೊಳ್ಳುತ್ತವೆ. ಆದ್ದರಿಂದ ರಾಮಾಯಣದ ಮೂಲಕ ನಾವು ಪಡೆಯಬೇಕಾಗಿರುವ ಆದರ್ಶ ಯಾವುದೆಂದರೆ ಪ್ರಜಾವತ್ಸಲನಾಗಿರುವ, ನ್ಯಾಯ ನಿಷ್ಠುರಿಯಾಗಿರುವ ಸೀತಾರಾಮನ ಆದರ್ಶಗಳು. ವಿನಾಕಾರಣ ಅವನನ್ನು ಅನುಮಾನಿಸಿ ಕಾಡಿಗಟ್ಟುವ ರಾಮನದಲ್ಲ.

(ಮುಂದುವರೆಯುವುದು)

...ಣ್ಣು ಎಂಬ ಪದದ ಅರ್ಥವೇ ಅತ್ಯಾಚಾರ ಸಹಿಸಿಕೊಳ್ಳುವವಳು

...ವಾರ ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ 'ಮಹಿಳೆಯರ ಮೇಲಿನ ...ರ್ಜನ್ಯ: ಆಯಾಮಗಳು, ಕಾರಣಗಳು' ಎಂಬ ವಿಚಾರ ಸಂಕಿರಣವನ್ನು ...ಷ್ಠ ಮರಾಠಿ ಲೇಖಕಿ, ಹೋರಾಟಗಾರ್ತಿ ಊರ್ಮಿಳಾ ಪವಾರ್ ...ದ್ಘಾಟಿಸಿದರು. ಅವರ ಉದ್ಘಾಟನಾ ಭಾಷಣದ ಸಂಗ್ರಹಾನುವಾದ ಇಲ್ಲಿದೆ.

...ತನ ಪ್ರಕರಣಗಳನ್ನು ಗಮನಿಸಿದರೆ ಹೆಣ್ಣು ಎಂಬ ...ರ್ಥವೇ ಅತ್ಯಾಚಾರ ಸಹಿಸಿಕೊಳ್ಳುವವಳು ...ಗಿದೆ. ಹೆಣ್ಣು ಮೊದಲಿನಿಂದ ಬಗೆಬಗೆಯ ...ನ್ನು ಸಹಿಸಿಕೊಂಡೇ ಬಂದಿದ್ದಾಳೆ. ಪ್ರತಿ ಹೆಣ್ಣು ...ನದ ಘಟನೆಗಳನ್ನು ಮೆಲುಕು ಹಾಕಿದರೆ ಸಾಕು, ... ವಿಶ್ವರೂಪ ಅರಿವಾಗುತ್ತದೆ.

...ಮ್ಮ ಬುಟ್ಟಿ ಹೆಣೆಯುತ್ತ ನಾಲ್ಕೈದು ಮಕ್ಕಳನ್ನು ... ಆಷ್ಟ ತೀರಿಕೊಂಡ ಮೇಲೆ ಕಷ್ಟಪಟ್ಟು ನಮ್ಮನ್ನು ... ಓದಿಸಿದಳು. ಮುಂಬೈಗೆ ಬಂದೆವು. ಅಲ್ಲಿ ...ತರ 1975ರ ಸುಮಾರಿಗೆ ಮಹಿಳಾವಾದದ ...ವಾಯ್ತು. ಹಾಗೆಯೇ ದಲಿತ ಚಳವಳಿಯ ...ನೂ.

... ಎಂಬ ಸಂಘಟನೆ ಸೇರಿದೆ. ಡಾ. ಮಂಜುಶ್ರೀ ...ಸಿನ ಕುರಿತು ಚರ್ಚೆಯಾಗುತ್ತಿದ್ದ ಕಾಲ ಅದು. ...ಗೆಗಾಗಿ ಒಬ್ಬ ವೈದ್ಯೆಯಾದ ಮಂಜುಶ್ರೀ ...ಳಗಾಗಿದ್ದಳು. ನೋಡಿ, ವಿದ್ಯೆಯಾಗಲೀ, ...ಬ ಸ್ಥಾನವಾಗಲೀ ಆ ಜೀವವನ್ನು ವರದಕ್ಷಿಣೆ ...ಡುಗಿನಿಂದ ರಕ್ಷಿಸಲಾಗಲಿಲ್ಲ, ನಂತರ ಮಥುರಾ ...ಭವಿಸಿತು. ಆ ಸಂದರ್ಭದಲ್ಲೇ ಈ ಹೆಣ್ಣುಮಕ್ಕಳ ... ಬದುಕನ್ನು ನೋಡಿ, ಕೇಳಿ ನನ್ನ ಬೌದ್ಧಿಕ ...ದಯಾಯ್ತು ಎಂದು ಭಾವಿಸಿದ್ದೇನೆ. ನನಗೆ ಸಿಕ್ಕ ...ಮು ಶಿಂಧೆ ಪುಸ್ತಕ ಓದಿದೆ. ಅವಳಂತೂ ...ತು ಎದೆ ಸೆಟೆಸಿದವಳಂತೆ ಎಷ್ಟು ದಿಟ್ಟವಾಗಿ ...ತ್ತಾಳೆಂದರೆ ಮೊದಲ ಓದಿಗೇ ಯಾರಾದರೂ ...ತಿಯಬೇಕು. 'ನಿಮ್ಮ ಗಂಡನ ಬಳಿ ಹೊಡೆತ ...ದು ಎದ್ದು ಅಡುಗೆ ಮನೆಗೆ ಹೋಗುತ್ತೀರಿ. ... ಕೆಲಸದ ರಾಶಿ ಕಾದಿದೆಯೋ ಮಾಡುತ್ತೀರಿ. ...ದು ಬಟ್ಟಲಿಗೆ ಎಣ್ಣೆ ಸುರುವಿಕೊಂಡು ಬರುತ್ತೀರಿ. ...ಹೊಡೆತ ತಿಂದ ನಿಮ್ಮ ಮೈಗೆ ಹಚ್ಚಿಕೊಳ್ಳುವುದಕ್ಕಲ್ಲ, ...ಹೊಡೆದು ದಣಿದ ನಿಮ್ಮ ಗಂಡನ ಕೈಗೆ ಹಚ್ಚಿ ... ಎಂದು ತನ್ನನ್ನು ಅಸಹಾಯಕ ಎಂದುಕೊಂಡ ...ನ್ನೇ ಮೂದಲಿಸುತ್ತಾಳೆ.

...ಮ್ಮರಿನ ಒಬ್ಬ ವಿಧವೆ ಬಸುರಿಯಾಗಿದ್ದಳು. ಊರು ...ಬಸುರು ಇಳಿಸುವಂತೆ ತಾಕೀತು ಮಾಡಿ ಶಿಕ್ಷೆ ... ಶಿಕ್ಷೆ ಏನೆಂದರೆ ಆ ಊರ ಹೆಣ್ಣುಮಕ್ಕಳು ...ಂದು ಕಂಬಕ್ಕೆ ಕಟ್ಟಿ, ಅವಳ ಎರಡೂ ಕೈಕಟ್ಟಿ ...ಸುತ್ತು ಹೊಟ್ಟೆ ಮೇಲೆ ಹೊಡೆಯಬೇಕು. ...ಗಿ ಬಸಿರು ಇಳಿಯಬೇಕು. ಈ ಕ್ರೂರ ಶಿಕ್ಷೆಯನ್ನು ...ಕ್ಕಳು ಯಾವ ಕರುಣೆಯಿಲ್ಲದೆ ನೀಡುತ್ತಿದ್ದರೆ ...ುವವಳನ್ನು ನೋಡನೋಡುತ್ತ ಬಸಿರಿಗೆ ಕಾರಣ ... ಆ ಗುಂಪಿನಲ್ಲಿ ಕೂತು ಅವಳನ್ನು ಬೈಯುತ್ತಿದ್ದ!

...ವಾಲಿ ಎಂಬ ನನ್ನದೊಂದು ಕಥೆಯಿದೆ. ರತ್ನಗಿರಿ ...ಮಾವಿನಹಣ್ಣು ಮಾರುವ ಹೆಣ್ಣುಮಗಳ 10-12 ... ಮಗನ ಕಣ್ಣಿನಲ್ಲಿ ತಾಯಿಯ ಕತೆ ಅದು. ...ುಲ್ಲಿ ಚೋಲಿ ಎಂದರೆ ಎರಡರ್ಥವಿದೆ - ಮಾವಿನ ...ಗೂ ರವಿಕೆ. ಆ ಹೆಣ್ಣುಮಕ್ಕಳ ಹತ್ತಿರ ಬರುವ ... ಕೆಲವೊಮ್ಮೆ ಎರಡರ್ಥ ಬರುವ ಮಾತು ...ದೆ: 'ಚೋಲಿ ಕೆ ಪೀಛೆ ಕ್ಯಾ ಹೇ?', 'ಚೋಲಿ ...ಬಾಕೆ ದೇಖ್ಲೂಂ?' ಹೀಗೇ. ಅದಕ್ಕೆ ಆ ...ಯರು ದಿಟ್ಟವಾಗಿಯೋ ಅಥವಾ ...ಮಾಗಿಯೋ ಉತ್ತರಿಸಿ ಪಾರಾಗುತ್ತಾರೆ. ಆ ಕತೆ ... ಜನರ ಮೆಚ್ಚುಗೆ ಪಡೆಯಿತು. ...ಲಯವೊಂದಕ್ಕೆ ಪಠ್ಯಪುಸ್ತಕವೂ ಆಯಿತು. ಆಗ ...ಮು ಅಶ್ಲೀಲ, ಪೋರ್ನ್ ಎಂದು ಜರಿದ ...ವಾರದ ವಿದ್ಯಾರ್ಥಿ ಸಂಘಟನೆಯು ಅದನ್ನು ಬ್ಯಾನ್ ...ಕೆಂಬ ಚಳವಳಿ ಶುರುಮಾಡಿತು. ಕೊನೆಗೆ ...ಗಳು, ಪಾಠ ಮಾಡುವ ಅಧ್ಯಾಪಕರು ಪರಿಶೀಲನಾ ... ಎದುರು ಅದರಲ್ಲಿ ಅಶ್ಲೀಲವಾದುದೇನೂ ಇಲ್ಲ ...ಹೇಳಿದ ಮೇಲೆ ಅದು ಮತ್ತೆ ಪಠ್ಯವಾಯಿತು. ...ಯುವುದರ ಮೇಲೂ ಗೆರೆ ಎಳೆಯಲಾಗುತ್ತದೆ. ...ಸ್ನು ಪ್ರಕಟ ಮಾಡುವುದರಲ್ಲೂ ತಾರತಮ್ಯ ...ಗುತ್ತದೆ. ಇಂಥ ಕಾಲದಲ್ಲೇ ಮಹಿಳಾ ಪ್ರಕಾಶಕರು ...ದರು.

...27 ಡಿಸೆಂಬರ್ 25ರಂದು ಅಂಬೇಡ್ಕರ್ ... ಸುಟ್ಟಿದ್ದರು. ಮನು ಹೆಣ್ಣುಕ್ಕಳನ್ನು, ದಲಿತರನ್ನು ...ಟುಕೊಳ್ಳಬೇಕೆಂದು ಹೇಳಿದ್ದ ಎನ್ನುವುದು ಎಲ್ಲರಿಗೂ ಗೊತ್ತು. ಮನುಧರ್ಮದ ಕಾರಣಕ್ಕಾಗಿಯೇ ದಲಿತ ಮಹಿಳೆಯರು ದುಪ್ಪಟ್ಟು ಶೋಷಣೆ ಅನುಭವಿಸುತ್ತಿದ್ದಾರೆ ಎಂಬುದೂ ಧೃಢವಾಯಿತು. ಬೌದ್ಧಧರ್ಮದ ಕಡೆಗೆ ವಾಲಿದೆ. ಬುದ್ಧನ ಅಮ್ಮ - ಮಾ ಪ್ರಜಾಪತಿ ಗೌತಮಿ - ತನ್ನ ಜೊತೆ 500 ಜನ ಹೆಣ್ಮಕ್ಕಳನ್ನು ಕರೆತಂದಳು. ಹಲವರ ವಿರೋಧದ ನಡುವೆಯೂ ಸಂಘದಲ್ಲಿ ಹೆಣ್ಣುಮಕ್ಕಳನ್ನು ಸೇರಿಸಿಕೊಳ್ಳಬೇಕೋ ಬೇಡವೋ ಎಂದು ಯೋಚಿಸಿದ ಬುದ್ಧ ಕೊನೆಗೆ ಅವರಿಗೂ ಸ್ಥಾನ ನೀಡಿದ. ಆ ಹೆಣ್ಮಕ್ಕಳು ಬರೆದ ಗೀತೆಗಳು 522 ಥೇರಿಗಾಥಾಗಳಾಗಿ ದಾಖಲಿಸಲ್ಪಟ್ಟಿವೆ. ಹೀಗೆ ಲಭ್ಯವಿರುವ ಮಹಿಳಾ ಸಾಹಿತ್ಯವನ್ನೆಲ್ಲ ಓದುತ್ತ ಹೋದೆ. ಆದರೆ ಓದುತ್ತ ಹೋದಂತೆ ದಲಿತ ಮಹಿಳೆಯ ಅನುಭವ ಲೋಕ, ಪ್ರಶ್ನೆಗಳು ಬೇರೆಯೇ ಎನಿಸಿತು. ಉಳಿದ ಮಹಿಳೆಯರ ಬರಹದಲ್ಲೂ ಮಹಿಳಾ ಪ್ರಶ್ನೆಗಳು ಬರುತ್ತವೆ, ಇಲ್ಲ ಎನ್ನುವುದಿಲ್ಲ, ಆದರೆ ಅದು ದಲಿತ ಮಹಿಳಾ ಪ್ರಶ್ನೆಗಳನ್ನು ಎತ್ತುವುದಿಲ್ಲ.

ಈ ವೇಳೆಗೆ ಶಾಬಾನು ಕೇಸ್ ಮುನ್ನೆಲೆಗೆ ಬಂತು. ಆ ವಯಸ್ಸಾದ ದಿಟ್ಟ ಮಹಿಳೆ ಕೇಳಿದ ಪ್ರಶ್ನೆಗೆ ತತ್ತರಿಸಿದ ಮೂಲಭೂತವಾದಿ ಪುರುಷ ಸಮುದಾಯ ಸರ್ಕಾರದ ಹಸ್ತಕ್ಷೇಪ ಬಯಸಿತು. ಕೊನೆಗೆ ಕೇಸು ಬಿದ್ದು ಹೋಯಿತು. ಆಗ ಮುಸ್ಲಿಂ ಮಹಿಳೆಯರು ಎಚ್ಚೆತ್ತರು. ಬುರ್ಖಾ ತಮ್ಮನ್ನು ಬಂಧಿಸಿಟ್ಟಿದೆ ಎಂದು ಅವರೂ ಅರಿತರು. ರೂಪ್ ಕನ್ವರ್ ಸತಿ ಪ್ರಕರಣವೂ ಆಗಲೇ ಸಂಭವಿಸಿತು. ಭನವಾರಿ ಪ್ರಕರಣದಲ್ಲಿ ರಾಜಸ್ಥಾನ ಹೈಕೋರ್ಟ್ ನೀಡಿದ ತೀರ್ಪೂ ದೇಶಾದ್ಯಂತ ಗಮನ ಸೆಳೆಯಿತು. ದೊಡ್ಡಪ್ಪ ಮತ್ತು ಮಕ್ಕಳು ಜೊತೆಜೊತೆಗಿರುವಾಗ ಅವರು ಲೈಂಗಿಕ ಕ್ರಿಯೆಯಲ್ಲಿ ಒಟ್ಟು ತೊಡಗಲು ಸಾಧ್ಯವಿಲ್ಲ; ಅವಳ ಗಂಡನೆದುರೇ ಅತ್ಯಾಚಾರ ಆಗಿದೆ ಎನ್ನುತ್ತೀರಿ. ತನ್ನ ಹೆಂಡತಿಯನ್ನು ರೇಪ್ ಮಾಡುವುದು ನೋಡಿ ಯಾವ ಗಂಡನೂ ಸುಮ್ಮನಿರುವುದಿಲ್ಲ; ಕೆಳಜಾತಿಯ, ಅಷ್ಟೇನೂ ಚಂದವಿಲ್ಲದ ಅವಳ ಮೇಲೆ ಮೇಲ್ಜಾತಿ ಗಂಡಸರು ಅತ್ಯಾಚಾರ ಮಾಡಿರುವ ಸಾಧ್ಯತೆಯಿಲ್ಲ ಎಂದು ಹೇಳಿದ ಹೈಕೋರ್ಟು ದುಡ್ಡಿಗಾಗಿ ಅವಳು ಕತೆ ಕಟ್ಟಿದ್ದಾಳೆಂದು ತನ್ನ ತೀರ್ಪಿನಲ್ಲಿ ಬರೆಯಿತು. ಆ ತೀರ್ಪಿನ ವಿರುದ್ಧ ಪ್ರತಿಭಟನೆ ನಡೆಯಿತು. ನಾಗಲಾಪಲ್ಲಿ, ಖೈರ್ಲಾಂಜಿ, ಧರ್ಮಪುರಿ ಘಟನೆಗಳು ಸಂಭವಿಸಿದವು. ಆಗೆಲ್ಲ ಪ್ರತಿಭಟಿಸಿದೆವು.

ಹೀಗೊಂದು ಪ್ರಗತಿಪರ ಮಹಿಳಾ ಚಳವಳಿ ನಡೆಯುತ್ತಿದ್ದಾಗ ಜಾಗತೀಕರಣ, ರಥಯಾತ್ರಾ, ಬಾಬ್ರಿ ಮಸೀದಿ ಎಲ್ಲ ಸಂಭವಿಸಿತು. ಎಲ್ಲ ಪ್ರಗತಿಪರ ಮಹಿಳಾ ಸಂಘಟನೆಗಳು ಹಿಂದೆ ಸರಿದವು. ಎಲ್ಲರೂ ತಮ್ಮ ತಮ್ಮ ಧರ್ಮಕ್ಕೆ, ಜಾತಿಗೆ ಅಂಟಿಕೊಳ್ಳತೊಡಗಿದರು. ಅದು ಸುರಕ್ಷಿತವೆಂದು ಭಾವಿಸತೊಡಗಿದರು: ಗೋಧ್ರಾ ಘಟನೆಯ ನಂತರದ ಗಲಭೆಗಳಲ್ಲಿ ಬಸುರಿಯರ ಹೊಟ್ಟೆಗೆ ತ್ರಿಶೂಲದಿಂದ ತಿವಿದು ಅತ್ಯಾಚಾರ ನಡೆಸಲಾಯ್ತು. ನೂರಾರು ಬುಡಕಟ್ಟು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ಸ್ತ್ರೀ ಭ್ರೂಣ ಹತ್ಯೆ, ಖಾಪ್ ಪಂಚಾಯ್ತಿಯ ಮಹಿಳಾ ವಿರೋಧಿ ನಿರ್ಣಯಗಳು, ಅಂತರ್ಜಾತಿ ಮದುವೆ ನಿರ್ಬಂಧ, ಮರ್ಯಾದಾ ಹತ್ಯೆ, ಸೈನ್ಯ ಮಹಿಳೆಯರ ಮೇಲೆ ನಡೆಸುವ ಅತ್ಯಾಚಾರ - ಓಹ್! ಮಹಿಳೆಯರ ಮೇಲೆ ದೌರ್ಜನ್ಯ ಎಸಗಲು ಎಷ್ಟು ಕಾರಣಗಳು!?

ಈಗಂತೂ ಜಾಗತೀಕರಣ ಕಾಲದಲ್ಲಿ ಮಾರುಕಟ್ಟೆಗೆ ಕೊಳ್ಳುವವರನ್ನು ಆಕರ್ಷಿಸಲು ಮಾಡೆಲ್ ಆಗಿ ಮಹಿಳೆಯೇ ಬೇಕು. ಜೊತೆಗೇ ಮಹಿಳೆಯನ್ನು ಬೇರೆಬೇರೆ ರೀತಿ ಬಳಸಿಕೊಳ್ಳುವಂತಹ ಜಾಲಗಳು ಸೃಷ್ಟಿಯಾಗಿವೆ. ಇವೆಲ್ಲ ಹೆಣ್ಣಿಗೆ ಎಂತೆಂಥ ಸಂಕಟ, ನೋವುಗಳನ್ನು ತಂದಿಟ್ಟಿವೆಯೋ ಇನ್ನಷ್ಟೇ ಗೊತ್ತಾಗಬೇಕು. ಹೆಣ್ಣು ಸರಕಾದ ಕಾರಣವೇ ಟ್ರಾಫಿಕಿಂಗ್ ಶುರುವಾಯಿತು. ಬಾರ್ ಗರ್ಲ್ಸ್ ಹುಟ್ಟಿಕೊಂಡರು. ಲೈವ್‌ಬ್ಯಾಂಡ್‌ನಲ್ಲಿದ್ದ ಅಂತಹ ಒಬ್ಬಳು - ವೈಶಾಲಿ ಹದಂ - ತನ್ನ ಆತ್ಮಕತೆ ಬರೆದಿದ್ದಾಳೆ, ಅದನ್ನು ಓದಿದವರು ತಲ್ಲಣಿಸಿ ಹೋಗಬೇಕು. ಅಂಥವರ ಮಕ್ಕಳ, ಗಂಡನ, ಕುಟುಂಬದವರ ಕತೆಗಳು, ಕಷ್ಟಗಳು ಏನೋ? ಹೊರಜಗತ್ತು ಅದನ್ನೆಂದೂ ಗಮನಿಸದು. ಆಕೆ ಅತ್ಯಂತ ನೋವಿನಿಂದ ಬರೆದುಕೊಂಡ ಒಂದು ಪ್ರಸಂಗವಿದೆ. ಅವಳ ಮಗ ಎಷ್ಟು ಗಂಡಾಗಿಬಿಟ್ಟನೆಂದರೆ ಒಮ್ಮೆ ತನ್ನ ಜೊತೆ ಮಲಗು ಬಾ ಎಂದು ಅಮ್ಮನನ್ನೇ ಕರೆದನಂತೆ! ಊರಿನ ಉಳಿದೆಲ್ಲ ಗಂಡಸರೊಟ್ಟಿಗೆ ಮಲಗುತ್ತೀ, ನೀನೊಂದು ಹೆಣ್ಣು ಅಷ್ಟೇ. ನನ್ನ ಜೊತೆಯೂ ಮಲಗು ಬಾ ಎನ್ನುವುದು ಅವನ ವಾದ!!



ಇಂಥವೆಲ್ಲ ನಡೆಯುತ್ತಿರುವಾಗ ನಮ್ಮ ಧರ್ಮ ಏನು ಮಾಡಿತು? ಧರ್ಮ ಗುರುಗಳು ಏನು ಮಾಡಿದರು? ಆಸಾರಾಂ ಬಾಪು ಏನು ಹೇಳಿದರು? ಅಣ್ಣಾ ಎಂದು ರಾಖಿ ಕಟ್ಟಿ ಎನ್ನುತ್ತಾರೆ. ಅನಿರುದ್ಧ ಬಾಪು ತಾವು ಹೇಳಿಕೊಡುವ ಮಂತ್ರ ಹೇಳುವವರ ಮೇಲೆ ರೇಪ್ ಆಗುವುದಿಲ್ಲ ಎನ್ನುತ್ತಾರೆ. ಐದು ಗಂಟೆ ಒಳಗೆ ಮನೆಗೆ ಬನ್ನಿ, ಪರ್ಸಿನಲ್ಲಿ ಮೆಣಸಿನ ಪುಡಿ ಇಟ್ಕೊಳ್ಳಿ, ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ ಕೊಡಿ - ಹೀಗೇ ಏನೇನೋ ಮಾತು ಕೇಳಿ ಬರುತ್ತಿದೆ. ಆದರೆ ಇಂಥ ಕ್ರಮಗಳು ಮಹಿಳೆಗೆ ಸ್ವಾತಂತ್ರ್ಯ ಮತ್ತು ರಕ್ಷಣೆ ಎರಡನ್ನೂ ಒಟ್ಟಿಗೇ ನೀಡಬಲ್ಲವೆ?

ಇದಕ್ಕೆಲ್ಲ ಏನು ಮಾಡುವುದು?

ಓದಿ ಬರೆದ ನಮ್ಮೆಲ್ಲರ ಕರ್ತವ್ಯ ಈ ಕೊಳಕು ತೊಳೆಯುವುದು. ಮಹಿಳೆ ಜಾಗೃತಳಾಗಬೇಕು. ಸಂಘಟಿತಳಾಗಬೇಕು. ಈಗ ಒನ್ ಮಿಲಿಯನ್ ರೈಸಿಂಗ್ ಅಭಿಯಾನ ನಡೆಯುತ್ತಿದೆ. ಒಟ್ಟಾರೆ ಹಬ್ಬ-ಸೀರೆ-ಅಡುಗೆ-ಮಕ್ಕಳು ಈ ಎಲ್ಲವೂ ಇರಲಿ. ಅದರ ಜೊತೆಗೆ ಲಿಂಗ/ಧರ್ಮ/ಜಾತಿ/ಭಾಷೆ ಎಂಬ ಎಲ್ಲ ಗೋಡೆಗಳ ತೊರೆದು ಆಕೆ ಮುಂದುವರೆಯಬೇಕು. ನಮ್ಮ ನಮ್ಮ ಅಂತರಾಳ ಮಾತನಾಡಬೇಕು. ಜಾಗೃತಿ ಯುದ್ಧ ನಡೆಯಬೇಕು.


● ಊರ್ಮಿಳಾ ಪವಾರ್

ಸಂಗ್ರಹಾನುವಾದ -
ಡಾ.ಎಚ್.ಎಸ್.ಅನುಪಮಾ

ಮಂಗಳೂರಿನಲ್ಲಿ ಮೊಳಗಿದ ಮಹಿಳೆಯರ ಗಟ್ಟಿದನಿ

ಅಂದು ಅಲ್ಲಿ ನೆರೆದದ್ದು ಸುಮಾರು 5000 ಮಹಿಳೆಯರು; ಎಲ್ಲರದ್ದೂ ಒಂದೇ ಕೂಗು: 'ಸಾಕು, ಇನ್ನು ಸಾಕು, ಮಹಿಳೆಯರ ಮೇಲಿನ ಹಿಂಸೆ ಕೊನೆಗೊಳಿಸೋಣ, ಸಮಾನತೆಯ ನಾಡನ್ನು ಕಟ್ಟೋಣ'. ಈ ಘೋಷಣೆಯೊಂದಿಗೆ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಹಾಗೂ ಮಹಿಳಾ ಸಂಘಟನೆಗಳ ಜಾಲದ ಜಂಟಿ ಆಯೋಜನೆಯಲ್ಲಿ ಇಡೀ ಕರ್ನಾಟಕದ ಸಮಾನ ಮನಸ್ಕ ಮಹಿಳಾ ಸಂಘಟನೆಗಳು ಮತ್ತು ಮಹಿಳಾಪರರೆಲ್ಲ ಅಂದು ಅಲ್ಲಿ ಸೇರಿದ್ದರು. ಸೇರಿದ ಜನರಿಗೆ ಸ್ಫೂರ್ತಿ ನೀಡಲು ರಾಜಸ್ಥಾನದ ಭಂವರೀದೇವಿ ಅಲ್ಲಿದ್ದರು. ಹಿರಿಯ ಲೇಖಕಿ ವೈದೇಹಿ, ಡಾ.ಸಬೀಹಾ, ದು.ಸರಸ್ವತಿ, ಡಾ.ಎಚ್.ಎಸ್.ಅನುಪಮಾ, ಮಹಿಳಾ ಸಂಘಗಳ ಜಾಲದ ಮೆಲ್ವಿನ್ ಮಾರ್ಟಿನ್, ವಿದ್ಯಾ ದಿನಕರ್, ಮಾನವ ಹಕ್ಕುಗಳ ಪ್ರತಿಪಾದಕಿ ರೀಟಾ ನರೋನ್ಹಾ, ದಶಕಗಳಿಂದ ಮಹಿಳಾ ಹೋರಾಟಗಳಲ್ಲಿರುವ ಮೀರಾ ನಾಯಕ್, ರತಿ ರಾವ್, ಶಕುನ್, ಮಧು ಭೂಷಣ್ ಮೊದಲಾದ ಎಲ್ಲರೂ ಅಲ್ಲಿ ಜೊತೆಗೂಡಿದ್ದರು. ಅವರೊಂದಿಗೆ ಈ ತಲೆಮಾರಿನ ಯುವಕ-ಯುವತಿಯರಿದ್ದರು. ಕಾಲೇಜು ವಿದ್ಯಾರ್ಥಿನಿಯರು, ಮಹಿಳಾ ಸಂಘಟನೆಗಳ ಕಾರ್ಯಕರ್ತರು, ಸ್ವಸಹಾಯ ಸಂಘಗಳು, ಗಾರ್ಮೆಂಟ್ಸ್ ಕಾರ್ಮಿಕರು, ಪೌರ ಕಾರ್ಮಿಕರು, ಮನೆಗೆಲಸದ ಮಹಿಳೆಯರು, ಗೃಹಿಣಿಯರು, ಉದ್ಯೋಗಸ್ಥ ಮಹಿಳೆಯರು... ಎಲ್ಲರೂ ಅಲ್ಲಿದ್ದರು. ಒಟ್ಟಾರೆ ಇಡೀ ಕರ್ನಾಟಕದ 140ಕ್ಕಿಂತ ಹೆಚ್ಚು ಮಹಿಳಾ ಸಂಘಗಳು ಮತ್ತು ಪ್ರಗತಿಪರ ಸಂಘಗಳು ಈ ಪ್ರಯತ್ನದಲ್ಲಿ ಜೊತೆಗೂಡಿದ್ದವು.

ಇದೆಲ್ಲಾ ನಡೆದದ್ದು ಮಾರ್ಚ್ 8ರಂದು. ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನಾಚರಣೆಯನ್ನು ಈ ರೀತಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಕನಸು ಹುಟ್ಟಿದ್ದು ಜನವರಿಯಲ್ಲಿ, ಎಲ್ಲಾ ಗೆಳತಿಯರ ಮಾತುಕತೆಯಲ್ಲಿ ಅದು ಹುಟ್ಟಿದ್ದೇ ಥಟ್ಟನೆ ಅದನ್ನು ಸಾಕಾರಗೊಳಿಸಿದ್ದು ಮಂಗಳೂರಿನ ಸ್ನೇಹಿತೆಯರು. ಅದು ಕೇವಲ ಒಂದು ಮೆರವಣಿಗೆಯಲ್ಲ; ಒಂದು ಸಭೆಯಲ್ಲ, ಮೂರು ತಿಂಗಳ ಸತತವಾದ ಪ್ರಕ್ರಿಯೆ ಹಾಗೂ ಅದರ ಕೊನೆಯಲ್ಲಿ ಸಮಾಜಕ್ಕೆ ರವಾನಿಸಲಾದ ಒಂದು ಪ್ರಬಲವಾದ ಸಂದೇಶ. ಅದೂ ಕೂಡಾ ಭಿನ್ನ ಧರ್ಮೀಯ ಯುವಕ ಯುವತಿಯರ ಸ್ನೇಹವನ್ನು ಸಹಿಸದ, ಪಬ್‌ನಲ್ಲಿದ್ದರು ಎಂಬ ಕಾರಣಕ್ಕೆ ಅನಾಗರಿಕರಂತೆ ಯುವತಿಯರನ್ನು ಥಳಿಸುವ, ಸೌಮ್ಯ ಸೌಜನ್ಯರಂತಹ ಯುವತಿಯರ ಬರ್ಬರ ಅತ್ಯಾಚಾರ ಮತ್ತು ಹತ್ಯೆ ನಡೆಸುವ, ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ ತರುಣ-ತರುಣಿಯರನ್ನು ತಾವೇ ಬಟ್ಟೆ ಕಳಚಿ ಅಸಭ್ಯವಾಗಿ ಮೈಮುಟ್ಟುತ್ತಾ ಬೇಕಾಬಿಟ್ಟಿ ಹಲ್ಲೆ ಮಾಡುವಂತಹ ಸಂಘಪರಿವಾರದ ಹುತ್ತವಾದ ಮಂಗಳೂರಿನಲ್ಲಿ! ಆ ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚುತ್ತಾ, ಮತದ್ವೇಷದ ಬೀಜವನ್ನು ಬಿತ್ತುತ್ತಾ, ಮಹಿಳೆಯರ ವಿಮೋಚನೆಯ ಕನಸನ್ನೂ ಕೂಡಾ ಸಹಿಸದ ಸಂಘಪರಿವಾರಕ್ಕೆ, ಬೇರಾವುದೇ ಮೂಲಭೂತವಾದಿಗಳಿಗೆ, ಮಹಿಳೆಯರ ಮೇಲೆ ಹಿಂಸೆ ನಡೆಸುವ ಪೀಡಕರಿಗೆ 'ಇನ್ನು ಸಾಕು, ನಿಲ್ಲಿಸಿ' ಎಂಬ ಎಚ್ಚರಿಕೆಯ ಈ ಸಂದೇಶ ರವಾನೆಯಾಗಲೇಬೇಕಿತ್ತು; ಹಾಗೆಯೇ ಇದೆಲ್ಲದರ ನಡುವೆ ರಾಜ್ಯದ ಎಲ್ಲಾ ಮೂಲೆಗಳಿಂದಲೂ ಒಗ್ಗೂಡಿ ಮಹಿಳೆಯರ ಒಗ್ಗಟ್ಟಿನ ಪ್ರದರ್ಶನವೂ ಆಗಲೇಬೇಕಿತ್ತು, ಈ ಕೆಲಸ ಅತ್ಯಂತ ಯಶಸ್ವಿಯಾಗಿ ನೆರವೇರಿತು.




ಮಾರ್ಚ್ 8ರ ಹಿಂದಿನ ಎರಡು ದಿನಗಳೂ ಮಹಿಳಾಪರ ಚಟುವಟಿಕೆಗಳಿಂದ ಕೂಡಿತ್ತು. ಮಾರ್ಚ್ 6ರಂದು 'ಕಪ್ಪು ಉಡುಗೆಯಲ್ಲಿ ಮಹಿಳೆಯರು' ಎಂಬ ಪ್ರತಿಭಟನಾ ಪ್ರದರ್ಶನ ಹಾಗೂ 7ರಂದು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ವತಿಯಿಂದ ಒಂದು ದಿನದ ವಿಚಾರ ಗೋಷ್ಠಿ ಕೂಡಾ ವಿಶಿಷ್ಟವಾಗಿ ನಡೆದು ಗಮನ ಸೆಳೆದವು. ವಿಚಾರ ಗೋಷ್ಠಿಗೆ ಮಹಾರಾಷ್ಟ್ರದ ಮಹಿಳಾ ಹೋರಾಟಗಾರ್ತಿ, ದಲಿತ ಬರಹಗಾರ್ತಿ ಊರ್ಮಿಳಾ ಪವಾರ್ ಬಂದಿದ್ದರು. ಅದೇ ರೀತಿ ರಾಜಸ್ಥಾನದಿಂದ ಈ ಕಾರ್ಯಕ್ರಮಕ್ಕಾಗಿಯೇ ಬಂದಿದ್ದ ಭಂವರೀದೇವಿ ಎಲ್ಲರಲ್ಲೂ ಹೊಸ ಉತ್ಸಾಹ ತುಂಬಿದರು. ಮೇಲ್ಜಾತಿ ಪುರುಷರಿಂದ ಸಾಮೂಹಿಕ ಅತ್ಯಾಚಾರಕ್ಕೆ ಗುರಿಯಾಗಿ, ಪೊಲೀಸು-ಕೋರ್ಟು ಎಲ್ಲೂ ನ್ಯಾಯ ದೊರೆಯಬಹುದೆಂಬ ಭರವಸೆ ದೊರೆಯದಿದ್ದಾಗಲೂ ತನ್ನ ಅದಮ್ಯವಾದ ಜೀವನ ಪ್ರೀತಿ ಮತ್ತು ಹೋರಾಟದ ಕೆಚ್ಚಿನಿಂದ ಇಂದಿಗೂ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯದ ಹೋರಾಟ ಮುಂದುವರೆಸಿದ್ದಾರೆ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆವ ಲೈಂಗಿಕ ದೌರ್ಜನ್ಯ ತಡೆಯುವ ವಿಶಾಖ ಸೂತ್ರಗಳು ಜಾರಿಯಾಗುವುದಕ್ಕೆ ಈಕೆಯ ಹೋರಾಟವೇ ಕೀಲಕವಾದದ್ದು. ಅಲ್ಲಿಯೂ ಭಂವರೀದೇವಿಯ ಸಂದೇಶ ಒಂದೇ: "ದೌರ್ಜನ್ಯಕ್ಕೊಳಗಾಗುತ್ತಿರುವ ಎಲ್ಲಾ ಸಹೋದರಿಯರ ಪರವಾಗಿ ಕೊನೆಯವರೆಗೂ ಒಟ್ಟಾಗಿ ಹೋರಾಡುತ್ತೇವೆ ಎಂದು ಶಪಥ ಮಾಡೋಣ" ಎಂಬುದು.

ಒಂದಲ್ಲಾ ಒಂದು ದಿನ ಈ ನೆಲದ ಹೆಣ್ಣುಗಳು ನ್ಯಾಯಕ್ಕಾಗಿ, ಸಮಾನತೆಗಾಗಿ ಮೆರವಣಿಗೆ ಹೊರಡುತ್ತಾರೆ ಹಾಗೂ ತಮ್ಮ ಹೋರಾಟದಲ್ಲಿ ಗೆಲುವು ಸಾಧಿಸುತ್ತಾರೆ ಎಂಬ ಬೆಚ್ಚನೆಯ ನಂಬಿಕೆಯನ್ನು ಮತ್ತೊಮ್ಮೆ ಎಲ್ಲರ ಎದೆಗಳಲ್ಲಿ ಮೂಡಿಸಿದ ಕಾರ್ಯಕ್ರಮ ಇದಾಯಿತು.

● ಮಲ್ಲಿಗೆ, ಮಹಿಳಾ ಮುನ್ನಡೆ, ಮಂಡ್ಯ

ಅಂಚಿನಿಂದ



ಮಾರುಕಟ್ಟೆ ಶಕ್ತಿಗಳಿಗೆ ಮಹಿಳಾ ದಿನವೂ ಒಂದು ಸರಕು!

ಎಂದಿನಂತೆ ಅಂದೂ ಬೆಳಗ್ಗೆ ದಿನಪತ್ರಿಕೆಯನ್ನು ಕೈಗೆತ್ತಿ ಕೊಂಡೆ. ದೂರದಿಂದಲೇ ವಿನ್ಯಾಸ ಎಂದಿನಂತಿಲ್ಲ ಅನ್ನಿಸಿತ್ತು. ಹತ್ತಿರದಿಂದ ನೋಡಿದಾಗ ಇಡೀ ಅರ್ಧ ಪತ್ರಿಕೆಯನ್ನೇ ಜಾಹೀರಾತೊಂದು ಮುಚ್ಚಹಾಕಿರುವುದು ಕಾಣಿಸಿತು. ಗಮನಿಸಿದರೆ ಬಹಳ ಆಕರ್ಷಕ ತಲೆಬರಹ "ಸೆಲೆಬ್ರೇಟ್ ವಿಮೆನ್ಸ್ ಡೇ ವಿತ್ ಪ್ಲೆಷರ್" ಕಾಣಿಸಿತು. ಕೆಳಗೆ ಇನ್ನೂ ಕೆಲವು ಬರಹಗಳೊಂದಿಗೆ ಸುಂದರವಾದ ದ್ವಿಚಕ್ರ ವಾಹನ ಮತ್ತು ಇಂದು ಚಾಲ್ತಿಯಲ್ಲಿರುವ ಬಾಲಿವುಡ್ ನಟಿಯೊಬ್ಬಳ ಚಿತ್ರಗಳು; ಆಗ ಅರ್ಥವಾಯಿತು ಮಹಿಳಾ ದಿನದಂದು ಮಹಿಳೆಯರಿಗೆ ಗಾಳ ಹಾಕುವ ಆ ವಾಹನ ತಯಾರಿಕಾ ಕಂಪೆನಿಯ ಕಸರತ್ತು!

ಆದರೆ ಲಾಭಕೋರ ವಾಹನ ತಯಾರಿಕಾ ಕಂಪೆನಿಗೂ, ಸೌಂದರ್ಯವರ್ಧಕಗಳ ಕಂಪೆನಿಗೂ, ಕಿಚನ್‌ವೇರ್‌ಗಳನ್ನು ಉತ್ಪಾದಿಸುವ ಕಂಪೆನಿಗೂ ಇತ್ತೀಚೆಗೆ ಮಹಿಳಾ ದಿನವು 'ಹ್ಯಾಪಿ ವಿಮೆನ್ಸ್ ಡೇ' ಆಗಿದೆಯಲ್ಲ? ಆ 'ಪ್ಲೆಷರ್' ಎಂಬ ಗಾಡಿಯ ಜಾಹೀರಾತಿನಲ್ಲಿ ಒಂದು ಟ್ಯಾಗ್ ಲೈನ್ ಬೇರೆ ಇದೆ: "ಏಕೆ ಹುಡುಗರೇ. ಎಲ್ಲಾ ಸಂತೋಷಗಳನ್ನು ಅನುಭವಿಸಬೇಕು?" ಎಂಬರ್ಥ ಬರುವಂಥದ್ದು. ಕೆಲವು ವರ್ಷಗಳ ಹಿಂದೆ ಟಿವಿಗಳಲ್ಲಿ ಒಂದು ಜಾಹೀರಾತು ಬರುತ್ತಿತ್ತು- ಆಧುನಿಕವಾಗಿ ಅಲಂಕರಿಸಿಕೊಂಡ ಮಹಿಳೆಯೊಬ್ಬಳು ಸುಸಜ್ಜಿತ ಅಡುಗೆಮನೆಗೆ ಬರುತ್ತಾಳೆ; 'ನನಗೆ ಕ್ರಾಂತಿ ಬೇಕು' ಎಂದು ಘೋಷಿಸುತ್ತಾಳೆ; ಕೂಡಲೇ ಒಂದು ಮಿಕ್ಸರ್ ಪ್ರತ್ಯಕ್ಷವಾಗುತ್ತದೆ; ಅದರ ಹೆಸರು 'ರೆವಲ್ಯೂಷನ್' ಅಂದರೆ 'ಕ್ರಾಂತಿ'! ಹಿಂದೆಯೇ ಸಾವಿರಾರು ಮಹಿಳೆಯರು ಆ ಮಿಕ್ಸರ್ ಅನ್ನು ಕೈಯ್ಯಲ್ಲಿ ಹಿಡಿದು 'ವಿ ವಾಂಟ್ ರೆವಲ್ಯೂಷನ್' ಎಂದು ಮೆರವಣಿಗೆ ಹೋಗುತ್ತಾರೆ. ಈ ಜಾಹೀರಾತುಗಳು ಇಂದಿನ ಮಹಿಳೆಯ ಸ್ಥಿತಿಯನ್ನು ಅತ್ಯಂತ ಸಮರ್ಥವಾಗಿ ಬಿಂಬಿಸಿವೆ ಎಂದೇ ನನಗೆ ಅನ್ನಿಸಿತು. (ಎಷ್ಟಿದ್ದರೂ ಅವು ವ್ಯಾಪಾರೀ ಕಂಪೆನಿಗಳು, ಜನರ ನಾಡಿಮಿಡಿತವನ್ನು ಹಿಡಿದಿರುತ್ತವೆ). ಇಂದು ಹಲವು ರೀತಿಯ ಒತ್ತಡಗಳು ಮಹಿಳೆಯರ ಮೇಲೆ ಇದ್ದಾಗ್ಯೂ ಅವರಲ್ಲಿ ತನ್ನ ಸ್ವಂತಿಕೆಯ ಬಗ್ಗೆ ಚಿಂತಿಸುವ ಅರಿವು ಮೂಡಲಾರಂಭಿಸಿದೆ. ನಿಖರವಾಗಿ ತಮ್ಮ ಪಾತ್ರವನ್ನು ಗುರುತಿಸುವಂತೆ ಒತ್ತಾಯಿಸುವ ಸ್ಪಷ್ಟತೆ ಇಲ್ಲದಿದ್ದರೂ, ಹಿಂಸೆಯನ್ನು, ತಾರತಮ್ಯವನ್ನು, ಕೀಳುಗೊಳಿಸುವಿಕೆಯನ್ನು ಬಾಯಿಮುಚ್ಚಿಕೊಂಡು ಸಹಿಸಲಾರೆವು ಎಂಬ ಸಂದೇಶವನ್ನಾದರೂ ಮಹಿಳೆಯರು ಜಗತ್ತಿಗೆ ಕೊಟ್ಟಿದ್ದಾರೆ. ಬದುಕಿನಲ್ಲಿ ಒಂದಷ್ಟು ಬದಲಾವಣೆಗಳೂ ಬಂದಿವೆ. ಖಂಡಿತವಾಗಿಯೂ ಇದು ಅವರೇ ಹೋರಾಡಿ ಪಡೆದದ್ದು. ಮಹಿಳಾ ಸಂಘಟನೆಗಳು ಉದಾರವಾಗಿ 'ಸಾಕಷ್ಟು ಸಂವೇದನಾಶೀಲ ಪುರುಷರು ನಮ್ಮನ್ನು ಬೆಂಬಲಿಸುತ್ತಾರೆ' ಎಂದು ಹೇಳುವಾಗಲೂ, ನಿಜಕ್ಕೂ ಅಂತಹ ಪುರುಷರ ಸಂಖ್ಯೆ ಎಷ್ಟಿರಬೇಕಿತ್ತೋ ಅದರ ಹತ್ತಿರದಲ್ಲೂ ಇಲ್ಲ ಎಂಬುದು ನನ್ನ ಅಭಿಪ್ರಾಯ. ತಾವೇ ಸ್ವತಃ ಹೆಣಗಿ, ಹೋರಾಡಿ ಹೆಣ್ಣುಮಕ್ಕಳು ಸಾಧನೆಯ ಹಾದಿಯಲ್ಲಿ ಸಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯ ಈ ಎಚ್ಚೆತ್ತ ಪ್ರಜ್ಞೆಯನ್ನೂ ಮುಕ್ತ ಮಾರುಕಟ್ಟೆ ಬಂಡವಾಳ ಮಾಡಿಕೊಳ್ಳಲು ಹೊರಟಿದೆ. ಅದರ ಫಲವೇ ಇಂತಹ ಸರಕುಗಳು ಮತ್ತು ಜಾಹೀರಾತುಗಳು!

ಇಂದು ಮಹಿಳೆ ಹೊರಗೆ ದುಡಿಯುತ್ತಿದ್ದಾಳೆ ಎಂದ ಮಾತ್ರಕ್ಕೆ ಕುಟುಂಬದ ಏಕಮಾತ್ರ ಪೋಷಕಿಯೆಂಬ ಹೊಣೆ (ಹಾಗೂ ಹೊರೆ!)ಯಿಂದ ಬಿಡುಗಡೆಗೊಂಡಿದ್ದಾಳೆಯೇ? ತನಗೆ ಬೇಕಾದ ಬದುಕನ್ನು ಆರಿಸಿಕೊಂಡು ಸಂಪೂರ್ಣವಾಗಿ ಅದನ್ನು ಆನಂದಿಸುವ ಸ್ವಾತಂತ್ರ್ಯ ದಕ್ಕಿದೆಯೇ? ಎಲ್ಲ ರೀತಿಯ ಸಂಪತ್ತಿನಲ್ಲಿ, ಅಧಿಕಾರದಲ್ಲಿ ಹಾಗೂ ಸಮಾಜದ ಮೌಲ್ಯವ್ಯವಸ್ಥೆಯಲ್ಲಿ ಸಮಾನತೆ ಆಕೆಗೆ ಸಿಕ್ಕಿದೆಯೇ? ಖಂಡಿತ ಇಲ್ಲ. ಇದನ್ನು ಪಡೆಯಬೇಕಾದರೆ, ಯಾವ ಅಡ್ಡಹಾದಿಗಳೂ ಇಲ್ಲದ, ಇನ್ನಷ್ಟು ಸಂಘರ್ಷಮಯವಾದ ಹೋರಾಟದ ಹಾದಿಯೇ ಆಕೆಯ ಮುಂದಿರುವುದು. ಆದರೆ ಮಹಿಳೆಯರ ಈ ಮಹತ್ವಾಕಾಂಕ್ಷೆಯನ್ನು ಬಂಡವಾಳಶಾಹಿ ಕಂಪೆನಿಗಳು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡಿವೆ. ಮಹಿಳೆಯನ್ನು ಆಕೆಯ ಸಾಂಪ್ರದಾಯಿಕ ಪಾತ್ರಗಳಿಂದ ಬಿಡುಗಡೆ ಮಾಡುವ ಯಾವ ಕಾಳಜಿಯೂ ಅವರಿಗೆ ಇಲ್ಲವಲ್ಲ; ಬದಲಿಗೆ ತಮಗೆ ಬೇಕಾದ ಅನೇಕ ಪಾತ್ರಗಳಿಗೆ ತಕ್ಕಂತೆ ಆಕೆಯನ್ನು ಕುಣಿಸಲು ಪ್ರಯತ್ನಿಸುತ್ತಿದ್ದಾರೆ. ಮೊದಲನೆಯದು, ಆಕೆಯ ಅಗ್ಗದ ಶ್ರಮ. ಜಾಗತಿಕ ಮಟ್ಟದಲ್ಲಿ ಇಂದು ಮಹಿಳಾ ಕಾರ್ಮಿಕರ ಶ್ರಮ ಈ ಕಂಪೆನಿಗಳ ಉಸಿರಾಗಿದೆ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಡುತ್ತವೆ. ಅದೂ,



ಕಾನೂನು ಬದ್ಧವಾದ ರೀತಿಯಲ್ಲಲ್ಲ, ಎಲ್ಲಾ ಕಡೆ ದುಡಿಯುವ. ಮಹಿಳೆಯರಲ್ಲಿ ಶೇ.94ರಷ್ಟು ಮಂದಿ ಇಂದು ಅಸಂಘಟಿತ ಅಥವಾ ಅನೌಪಚಾರಿಕ (ಮನೆಯಲ್ಲೇ ಕುಳಿತು ಅಥವಾ ಮನೆಯ ಹತ್ತಿರ ಕೆಲವಾರು ಮಂದಿ ಸೇರಿ ಮಾಡುವ ಕೆಲಸಗಳು- ಅಮಾನವೀಯ ಶೋಷಣೆಗೆ ಬಂಡವಾಳಿಗರೇ ಇಟ್ಟಿರುವ ನಾಜೂಕಾದ ಹೆಸರು) ಕ್ಷೇತ್ರಗಳಲ್ಲಿ ಮೂಗಿಗೆ ಕವಡೆ ಕಟ್ಟಿಕೊಂಡು ತಮ್ಮ ಶ್ರಮಕ್ಕಿಂತ ಎಷ್ಟೋ ಪಟ್ಟು ಕಡಿಮೆ ಬೆಲೆಗೆ ದುಡಿಯುತ್ತಿದ್ದಾರೆ.

ಇಂತಹ ಸರಕುಗಳಲ್ಲಿ ಹಲವು ಮಹಿಳೆಯರಿಗೆಂದೇ ಉತ್ಪಾದಿಸಲ್ಪಡುತ್ತಿವೆ. ಶಸ್ತ್ರಾಸ್ತ್ರ ತಯಾರಿಕೆ ಹಾಗೂ ಔಷಧ ತಯಾರಿಕೆಯ (ಫಾರ್ಮಾಸ್ಯುಟಿಕಲ್ಸ್ ಅಂಡ್ ಕೆಮಿಕಲ್ಸ್) ಉದ್ದಿಮೆಗಳ ನಂತರದ ಸ್ಥಾನಕ್ಕೆ ಸೌಂದರ್ಯವರ್ಧಕಗಳ ತಯಾರಿಕೆ ಪೈಪೋಟಿ ನೀಡುತ್ತಿದೆ ಎಂದರೆ, ಎಷ್ಟು ವ್ಯಾಪಕವಾಗಿ ಅದರ ಬಳಕೆ ಇದೆ ಎಂಬುದನ್ನು ಊಹಿಸಬಹುದು. ಆ ಕಂಪೆನಿಗಳೇ ಅಂತಹ ಹುಚ್ಚನ್ನು ಹಬ್ಬಿಸಿವೆ ಹಾಗೂ ಈಗ ಅದರಿಂದ ಲಾಭದ ಹೊಳೆಯನ್ನೇ ಹರಿಸಿಕೊಳ್ಳುತ್ತಿವೆ. ಸಹಜವಾಗಿ ಇವುಗಳ ಗ್ರಾಹಕರು ಮಹಿಳೆಯರೇ ಆಗಿದ್ದಾರೆ. ಮೂರನೆಯದಾಗಿ, ಮಹಿಳೆಯರಿಗಾಗಿ/ಪುರುಷರಿಗಾಗಿ ಉತ್ಪಾದಿತವಾಗುವ ಅಥವಾ ಹಾಗಲ್ಲದೆ ಎಲ್ಲರಿಗಾಗಿ ತಯಾರಾಗುವ ಯಾವುದೇ ವಸ್ತುವೇ ಆಗಿರಲಿ, ಅದನ್ನು ಗ್ರಾಹಕರಿಗೆ ತಲುಪಿಸುವ ವಾಹಕಳು ಮಹಿಳೆಯೇ ಆಗಿದ್ದಾಳೆ. ಯಾವುದೇ ಜಾಹೀರಾತು ಮಹಿಳೆಯರಿಗೆ ಸಂಬಂಧಿಸಿದ ಸರಕೋ ಅಲ್ಲವೋ ಏನೇ ಆಗಲಿ- ಅದರಲ್ಲಿ ಅರೆನಗ್ನಾವಸ್ಥೆಯಲ್ಲಿರುವ ಮಹಿಳೆಯನ್ನು ಕಂಪೆನಿಗಳು ಕಡ್ಡಾಯವೆಂಬಂತೆ ಚಿತ್ರಿಸುತ್ತವೆ. ಇದೂ ಕೂಡಾ ಅವರ ಲಾಭವನ್ನು ಎಷ್ಟೋ ಪಟ್ಟು ಹೆಚ್ಚಿಸುತ್ತದೆ. ಆಳವಾದ ಸರಕು ಸಂಸ್ಕೃತಿಯನ್ನು ಬೆಳೆಸುತ್ತವೆ. ಹೀಗೆ, ದೊಡ್ಡ ಬಂಡವಾಳಿಗರು ಬೇರೂರಿಸಿರುವ ಉಪಭೋಗಿ ಸಂಸ್ಕೃತಿಯಲ್ಲಿ ಮಹಿಳೆ ಕೊನೆಯದಾಗಿ ಸ್ವತಃ ಒಂದು ಸರಕಾಗಿದ್ದಾಳೆ! ಈ ಎಲ್ಲಾ ರೀತಿಗಳಲ್ಲಿ ಮಹಿಳೆಯನ್ನು ಶೋಷಿಸಿ, ಲಾಭಗಳಿಸಿ, ಬೆಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆ ಖಂಡಿತವಾಗಿ ಮಹಿಳೆಯನ್ನು ಆ ಸಂಕೋಲೆಗಳಿಂದ ಹೊರತರಲು ಬಯಸದು. ಆದ್ದರಿಂದಲೇ ಅವರು, ಬದಲಾವಣೆಗಾಗಿ ಮಹಿಳೆಯರ ಕೂಗು ಜೋರಾದಾಗ ಆಕೆಯ ಕೈಗೆ ಹೊಸ ಮಾದರಿಯ ಮಿಕ್ಸರ್ ಕೊಡುತ್ತಾರೆ. ಆ ಮಹಿಳೆ ಮತ್ತು ಅಡುಗೆಮನೆ ಆಧುನಿಕವಾಗಿರುತ್ತವೆಯೇ ಹೊರತು ಹೊರಗೂ ದುಡಿದು ಒಳಗೂ ದುಡಿಯುವ ಅವಳ ಸಾಂಪ್ರದಾಯಿಕ ಪಾತ್ರ ಬದಲಾಗಿರುವುದಿಲ್ಲ!

ಇಂತಹ ವೈರುಧ್ಯದ ಸ್ಥಿತಿಯಲ್ಲೇ ಇಂದು ಮಹಿಳೆಯರ ಮೇಲಿನ ಹಿಂಸೆ ಹೆಚ್ಚುಹೆಚ್ಚಾಗುತ್ತಿರುವುದು. ಮಹಿಳೆಯನ್ನು ಚಾಕರಿ ಮಾಡುವವಳಾಗಿ, ಸ್ವಂತ ವ್ಯಕ್ತಿತ್ವವಿಲ್ಲದ ಗುಲಾಮಳಾಗಿ ಸೀಮಿತವಾಗಿಡಬಯಸುವ ಪಿತೃಪ್ರಧಾನ ವ್ಯವಸ್ಥೆಯ ತಲೆಯ ಮೇಲೆ ಉಪಭೋಗಿ ಸಂಸ್ಕೃತಿ ಬಂದು ಕೂತಿದೆ. ಇವೆರಡರ ನಡುವೆ ಮಹಿಳಾ ಸಮುದಾಯ ಸಿಲುಕಿ ನುಜ್ಜುಗುಜ್ಜಾಗುತ್ತಿದೆ. ಡಿಸೆಂಬರ್ 16ರಂದು ದೆಹಲಿಯ ವಿದ್ಯಾರ್ಥಿನಿಯ ಮೇಲೆ ನಡೆದ ಬರ್ಬರ ಅತ್ಯಾಚಾರದ ನಂತರ ಸ್ಫೋಟಗೊಂಡ ಜನರ ಆಕ್ರೋಶದ ನಡುವೆಯೇ ದೌರ್ಜನ್ಯದ ಅಸಂಖ್ಯಾತ ಘಟನೆಗಳು ವರದಿಯಾಗುತ್ತಲೇ ಇವೆ. ಪರಿಹಾರ ಕೇವಲ ಕಾನೂನಿನಲ್ಲಿ ಇಲ್ಲ ಎಂಬುದಕ್ಕೆ ಇದೂ ಸಾಕ್ಷಿ. ಅದರಲ್ಲೂ ನಿಜಕ್ಕೂ ಮಹಿಳೆಯ ಪರ ನಿಲ್ಲುವ ಇಚ್ಛಾಶಕ್ತಿ ಇಲ್ಲದ ಸರ್ಕಾರಗಳು ತರುವ ಕಾನೂನುಗಳು ಹೇಗಿರುತ್ತವೆ? ಅತ್ಯಾಚಾರ ಪ್ರಕರಣಗಳ ಪರಿಶೀಲನೆಗಾಗಿ ನೇಮಿಸಲ್ಪಟ್ಟ ಜಸ್ಟೀಸ್ ವರ್ಮಾ ಸಮಿತಿಯ ಉತ್ತಮ ಅಂಶಗಳನ್ನೆಲ್ಲ ಬದಿಗಿಟ್ಟು, ಚುನಾವಣಾ ರಾಜಕೀಯಕ್ಕೆ ಬೇಕಾದ ಗಲ್ಲುಶಿಕ್ಷೆಯನ್ನು ಸೇರಿಸಿ, ಈಗಿನ ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆಯಂತೆಯೇ ಇರುತ್ತವೆ; ಹಲ್ಲು ಕಿತ್ತ ಹಾವುಗಳಂತೆ! ಈಗಂತೂ ಇದಕ್ಕಿರುವ ಏಕೈಕ ಪರಿಹಾರವೆಂದು ನನಗೆ ಕಾಣುತ್ತಿರುವುದು, ಮಹಿಳೆಯರ ಮೇಲಿನ ಎಲ್ಲಾ ರೀತಿಯ ದೌರ್ಜನ್ಯಗಳೂ ನಿಲ್ಲಬೇಕು ಎಂಬ ಒಂದು ಸಾಮೂಹಿಕವಾದ, ಗಟ್ಟಿಯಾದ ಧ್ವನಿ; ಆ ಧ್ವನಿ ಕೇವಲ ಮಹಿಳೆಯರದ್ದಲ್ಲ, ಬದಲಿಗೆ ನಮ್ಮೆಲ್ಲರ ದನಿಯಾಗಿರಬೇಕು. ದೆಹಲಿ ಪ್ರಕರಣದ ವಿರುದ್ಧ ಬೀದಿಗಿಳಿದವರಲ್ಲಿ ಸಾಕಷ್ಟು ಯುವಕರೂ, ಪುರುಷರು ಇದ್ದರು ಎಂಬುದೊಂದು ಒಳ್ಳೆಯ ಸೂಚನೆ. ಅದು ಘಟನೆಗಳ ಮಟ್ಟಿಗೆ ನಿಲ್ಲದೆ, ಪ್ರತಿನಿತ್ಯದ ಬದುಕಿನಲ್ಲಿ ಚಾಲ್ತಿಯಲ್ಲಿರುವ ಇಡೀ ಮೌಲ್ಯವ್ಯವಸ್ಥೆಯೆ ಬದಲಾಗುವ ದಿಕ್ಕಿಗೆ ಹೊರಳಬೇಕು. ಮಹಿಳೆಯರ ಪರವಾಗಿ ಸಂವೇದನಾಶೀಲವಾಗಿ ಸ್ಪಂದಿಸಲಾಗದಿದ್ದರೆ ನಮ್ಮ ಸಮಾಜ ಯಾವುದೇ ದಮನಿತರ ಪರ, ತುಳಿತಕ್ಕೊಳಗಾದವರ ಪರ ಮಾತನಾಡಲಾರದು. ಇಂದು ಹಾಗೆ ಧ್ವನಿಯೆತ್ತುವುದು ನಮ್ಮೆಲ್ಲರ ಆದ್ಯತೆಯ ಜವಾಬ್ದಾರಿ. ಅದು ಯಾವುದೋ ಒಂದು ದಿನ ಪತ್ರಿಕೆಗಳಲ್ಲಿ ಕಾಣುವ 'ಮಹಿಳಾ ದಿನವನ್ನು ಸಂತೋಷದೊಂದಿಗೆ (ಪ್ಲೆಷರ್) ಆಚರಿಸಿ' ಎಂಬ ಮಾರುಕಟ್ಟೆ ಕಂಪೆನಿಗಳ ಘೋಷಣೆಯಂತಾಗಬಾರದು. ನಿಜಕ್ಕೂ ಪ್ರತಿಯೊಂದು ದಿನವೂ ಎಲ್ಲಾ ಮಹಿಳೆಯರ, ಪುರುಷರ, ಪ್ರತಿಯೊಬ್ಬ ವ್ಯಕ್ತಿಯ ದಿನವೂ ಆಗಬೇಕು. ಮಹಿಳೆಯರೂ ಈ ನೆಲದಲ್ಲಿ ಎಲ್ಲಾ ಹಕ್ಕುಗಳನ್ನೂ ಪಡೆದಿರುವ, ಎಲ್ಲಾ ರೀತಿಯ ಸ್ವಾತಂತ್ರ್ಯವನ್ನೂ ಮುಕ್ತವಾಗಿ ಅನುಭವಿಸಲು ಸಾಧ್ಯವಿರುವ, ಸಮರ್ಥ ವ್ಯಕ್ತಿಗಳಾಗಿ ಗೌರವಿಸಲ್ಪಡಬೇಕು. ಎಲ್ಲಾ ಮಹಿಳೆಯರ ಮನದಾಳದಲ್ಲಿರುವ ಈ ಕನಸಿಗೆ ನೀರೆರೆಯೋಣ; ಆ ಕನಸು ಒಂದಲ್ಲ ಒಂದು ದಿನ ನನಸಾಗುತ್ತದೆಂಬ ಭರವಸೆಯನ್ನು ಹಂಚಿಕೊಳ್ಳುತ್ತಾ ಬೀದಿಗಿಳಿಯೋಣ. ○

ಅರಿವು ಮೂಡಿಸಿದ ದಿನಾಚರಣೆ

ಅಂದು ಮಾರ್ಚ್-8. ವಿಶ್ವದಾದ್ಯಂತ ಮಹಿಳೆಯರು 'ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನ'ವೆಂದು ಆಚರಿಸ... ದಿನ. ಉಳಿದ 364 ದಿನಗಳೂ ಗಂಡಸರ ಪ್ರಪಂಚದಲ್ಲಿ ಬದುಕುವ ಮಹಿಳೆಯರು ಅದೊಂದು ದಿನವಾದರೂ ತ... ನೋವು-ನಲಿವುಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾ, ಹಿಂದಿನ ಹೋರಾಟದ ನೆನಪುಗಳನ್ನು, ಸ್ಫೂರ್ತಿಯನ್ನು ಮುಂದಿನವರಿ... ಮುಟ್ಟಿಸುವ ಪ್ರಯತ್ನ; 103 ವರ್ಷಗಳ ಹಿಂದೆ 16 ಗಂಟೆಗಳ ಬದಲು 12 ಗಂಟೆಗಳ ಕೆಲಸ, ಹೆರಿಗೆ ಭತ್ಯೆ, ಆರೋಗ್ಯ... ಕೆಲಸದ ವಾತಾವರಣ, ಸಮಾನ ಕೆಲಸಕ್ಕೆ ಸಮಾನ ವೇತನದಂತಹ ಅತ್ಯಂತ ಮೂಲಭೂತವಾದ ಹಕ್ಕುಗಳಿಗಾಗಿ ಪ್ರಾಣಕೊ... ಹೋರಾಡಿದ ಹೊರದೇಶಗಳ ಕಾರ್ಮಿಕ ಸಹೋದರಿಯರನ್ನು ನೆನೆಯುವ ದಿನ; ಆ ಮೂಲಕ ಇಂದಿನ ಸಾಧನೆ- ಸವಾಲುಗಳ... ಮೆಲುಕು ಹಾಕುತ್ತಾ ಮತ್ತೊಂದು ವರ್ಷ ದಣಿವರಿಯದೆ ಮುನ್ನಡೆಯಲು ಸಜ್ಜಾಗುವ ದಿನ!

1911ರಲ್ಲಿ ಮಾರ್ಚ್ 8 ಅನ್ನು ಅಂತಾರಾಷ್ಟ್ರೀಯ ದುಡಿಯುವ ಮಹಿಳಾ ದಿನವೆಂದು ಕಮ್ಯುನಿಸ್ಟ್ ನಾಯಕಿ ಕ್ಲಾ... ಜೆಟ್ಕಿನ್ ಘೋಷಿಸಿದಾಗಿನಿಂದಲೂ ಇದು ಆಚರಿಸಲ್ಪಡುತ್ತಿದೆ. 1975ರಲ್ಲಿ ವಿಶ್ವಸಂಸ್ಥೆಯೂ ಇದನ್ನು ವಿಶ್ವ ಮಹಿಳಾ ದಿನವೆಂ... ಗುರುತಿಸಿದ ನಂತರ ಮತ್ತಷ್ಟು ವ್ಯಾಪಕವಾಗಿದೆ. ಇತ್ತೀಚೆಗಂತೂ ಈ ಬಗ್ಗೆ ಸಾಕಷ್ಟು ಜಾಗೃತಿ ಮೂಡಿದ್ದು ಬಹಳಷ್ಟು ಶಾ... ಕಾಲೇಜುಗಳು, ಕಚೇರಿಗಳು, ಸಂಘ-ಸಂಸ್ಥೆಗಳು ಎಲ್ಲೆಡೆ ಇದನ್ನು ಮಹಿಳೆಯರ ಸಾಧನೆಗಳ ಬಗ್ಗೆ, ಹಕ್ಕುಗಳ ಬಗ್ಗೆ ಮಾತನಾಡು... ದಿನವೆಂಬ ಮಟ್ಟಿಗಾದರೂ ಆಚರಿಸಲಾಗುತ್ತದೆ. ಇದಕ್ಕಾಗಿ ಮಹಿಳಾ ಸಂಘಟನೆಗಳು, ಮಹಿಳಾಪರ ಚಿಂತನೆಯುಳ್ಳವ... ಸಾಕಷ್ಟು ಶ್ರಮಿಸಿದ್ದಾರೆ; ಒಂದಷ್ಟು ಅರಿವು ಮೂಡಿಸುವಲ್ಲಿ ಸಫಲರಾಗಿದ್ದಾರೆ.


ಮೂಗುತಿ

ನಲ್ಲ
ಇನಿಯ
ಗಂಡ
ಎಂಬ ಈ ಪದ ಸಂಪತ್ತು
ಹುಟ್ಟಿಕೊಂಡ ಪರಿಯ
ಧ್ಯಾನಿಸುವಾಗ
ನನಗೆ ಎರಡು ಮೂಗುತಿಗಳು
ಕಂಡವು!

ಒಂದು ಪುರಂದರದಾಸರದು
ಇನ್ನೊಂದು ಶರೀಫರದು


ಪುರಂದರದಾಸರು ಕಂಡ
ಪತ್ನಿಯ ಮೂಗುತಿ
ವಿಷದ ಬಟ್ಟಲಲ್ಲಿ ಸಿಕ್ಕು
ಲೋಭಿ ನವಕೋಟಿ ನಾರಾಯಣನನ್ನು
ಭಕ್ತನನ್ನಾಗಿಸಿ
ಶುದ್ಧ ಪ್ರೀತಿಯ ಸಿರಿಯನ್ನು
ಪದ ಪದದಲ್ಲೂ ಹರಿಸಿ
ಆ ಮೂಗುತಿ ಧರಿಸಿದ ಹೆಂಡತಿಯ ಸಂತತಿ
ಸಾವಿರವಾಗಲು ಹರಿಸಿತು!

ಇನ್ನೊಂದು ಶರೀಫರದು.
ಗುಟ್ಟಿನಲ್ಲೇ ಶಿಶುನಾಳಧೀಶ
ಭಕ್ತಿಯ ಸತಿಗೆ ಕೊಡುವ
ಮುತ್ತಿನ ಮೂಗುತಿ!




ಎಲ್ಲರಂತಲ್ಲದ ಗಂಡನೆಂಬ ಗಂಡು
ಜೀವಮಾನ ಬೆಳಗುವಂತೆ
ತೊಡಿಸುವ ಪ್ರೇಮದ ಮೂಗುತಿ
ಹೆಣ್ಣಿನ ಮಾನ-ಪ್ರಾಣ ಕಾಯುವಂಥ
ಜೀವದ ಜೊತೆಗಾರಿಕೆಯ ಮೂಗುತಿ!

ಅಂತರಾತ್ಮ ದನಿಗೂಡಿಸುತ್ತಿದೆ-
ಆತ್ಮವನ್ನು ಗೌರವಿಸುವ
ನಲ್ಲನ ಪ್ರೀತಿಯ ಪ್ರಭೆಯೇ
ನಲ್ಲೆಯ ಪ್ರಕಾಶಮಾನ ಮೂಗುತಿ
ಮತ್ತು
ನಲ್ಲ, ಇನಿಯ, ಗಂಡ ಎಂಬ ಪದ ಸಂಪತ್ತು



● ಜ್ಯೋತಿ ಗುರುಪ್ರಸಾದ್

ಉಳಿಯೋಣ ನಾವು ಉಳಿದು ಗೆಲ್ಲೋಣ



ಗುಮಾಸ್ತನ ಬ್ಲಾಗ್ 15 — ಕೆ.ಫಣಿರಾಜ್

...ಕ್ಷಿಣ ಅಮೆರಿಕದಲ್ಲಿರೊ ದೇಶ ವೆನೆಜುಯೆಲಾ. ...ಧ್ಯಕ್ಷ ಹ್ಯುಗೊ ರಾಫೆಲ್ ಚಾವೇಜ್ ಫ್ರಿಯಾಸ್ ... 5ನೇ ತಾರೀಖು ತೀರಿಕೊಂಡಿದ್ದಾನೆ. 58 ಯಾರೂ ...ಕಾದ ವಯಸ್ಸಲ್ಲಿ ಕಣ್ರಿ. ಚಾವೇಜ್ ನೂರ್ಕಾಲ ...ಬೇಕು ಅನ್ನೋದು ಅವನ ಅಭಿಮಾನಿಗಳ ...ಸೆಯಾಗಿತ್ತು; ಆದರೆ ಅವನ ಶತ್ರುಗಳು ಪೀಡೆ ...ತು ಅಂತ ಮನಸ್ಸಲ್ಲಿ ಬಯ್ಕೊಂಡು ಸುಮ್ಮನೆ ...ಲ್ಲ ನೋಡ್ರಿ. 'ಅವನು ಕೇಡಿ, ರಾಕ್ಷಸ, ಪ್ರಜಾಕಂಟಕ...' ...ಲ್ಲ ಬೀದಿಯಲ್ಲಿ ನಿತ್ಕೊಂಡು ಬೊಬ್ಬೆ ಹಾಕಿದ್ರು. ...ಬೊಬ್ಬೆ ಹಾಕಿದೋರು ಅಮೆರಿಕದ ಶ್ರೀಮಂತರಿಗೆ ...ಗತ್ತನ್ನು ಕೊಳ್ಳೆ ಹೊಡ್ಯ ಸ್ವಚ್ಛ ಸಾರಿಸಿಬಿಡೋ ...ಕಾರ ಇದೆ ಅಂತ ವಾದಿಸೋವ್ರು?. ಕನ್ನಡಪ್ರಭದ ... ಅಂಥ ಒಂದು ಬೊಬ್ಬೆಯನ್ನು ಕನ್ನಡಕ್ಕೆ ಅನುವಾದಿಸಿ ...ೋ ಮುಖಪುಟ ಮೊಳೆಸಿದ್ರು ಅಂದ್ಮೇಲೆ, ಚಾವೇಜನ ...ು ಯಾರು ಅಂತ ನಿಮಗೆ ಅರ್ಥ ಆಗಿರ್ಬೋದು! ...ಬಿಡ್ರಿ. ಈಗ ಚಾವೇಜ್ ನಾನು ಅವನನ್ನ ಚಾಚ ...ಅಂತಾನೆ ಕರೆತೀನೆ ಯಾರು ಅಂತ ಸಂಕ್ಷಿಪ್ತವಾಗಿ ...

...54ರಲ್ಲಿ ಕೆಳಮಧ್ಯಮ ವರ್ಗದ ಬಡಕುಟುಂಬದಲ್ಲಿ ...

ನಡೆಸಿದ. ಬಂಡಾಯ ವಿಫಲಗೊಂಡಿತು. ಎರಡು ವರ್ಷ ಸೆರೆವಾಸ ಅನುಭವಿಸಿ ಹೊರಬಂದ. ಈಗವನಿಗೆ ಜನರ ಸಾರ್ವತ್ರಿಕ ಬೆಂಬಲವಿಲ್ಲದ ಇಂಥ ದುಸ್ಸಾಹಸಗಳಿಂದ ಫಲವಿಲ್ಲವೆನ್ನುವುದು ಅರಿವಾಗಿತ್ತು, ದೇಶದ ಸಮಾಜವಾದಿ ಸಂಘಟನೆಗಳ ಜೊತೆಗೂಡಿ ಯುನೈಟೆಡ್ ಸೋಷಿಯಲಿಸ್ಟ್ ಪಾರ್ಟಿ ಕಟ್ಟಿದ. ದಟ್ಟದರಿದ್ರ ಜನರ ನಡುವೆ ಕೆಲಸ ಮಾಡಿ ಅವರಲ್ಲಿ ದೇಶದ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಲು ದುಡಿದ. ಈ ಪ್ರಯತ್ನ ಫಲ ಕೊಟ್ಟಿತು. 1998ರ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿ ಬಹುಮತ ಪಡೆದು ದೇಶದ ಅಧ್ಯಕ್ಷನಾದ.

ಅಧ್ಯಕ್ಷನಾಗಿ ಚಾಚ ಮೊದಲು ದೇಶದ ಕಚ್ಚಾ ತೈಲ ನಿಕ್ಷೇಪಗಳನ್ನು ರಾಷ್ಟ್ರೀಕರಣಗೊಳಿಸಿದ. ಬಹುರಾಷ್ಟ್ರೀಯ ಕಂಪೆನಿಗಳು ನ್ಯಾಯವಾದ ಬೆಲೆಯಲ್ಲಿ ಕಚ್ಚಾತೈಲ ಕೊಳ್ಳುವಂತೆ ಕಾನೂನು ಮಾಡಿದ. ಕೆಲವು ಕಂಪೆನಿಗಳು ನಿಮ್ಮ ಜೊತೆ ವ್ಯವಹಾರ ಮಾಡೋದಿಲ್ಲ ಅಂತ ಧಮಕಿ ಹಾಕಿದವು. ಚಾಚ ಅವುಗಳ ಅಂಗಡಿ ಮುಚ್ಚಿಸಿ ದೇಶದಿಂದ ಹೊರಗಟ್ಟಿದ. ವೆನೆಜುಯೆಲಾದ ಸಿರಿವಂತರ ಲೂಟಿಯ ಕನ್ನಗಳನ್ನು ಬಂದು ಮಾಡಿದ್ದಕ್ಕೆ ಅವರು 'ಅಯ್ಯೋ, ಈತ ರಾಕ್ಷಸ! ದೇಶದಲ್ಲಿ ಸ್ವಾತಂತ್ರ್ಯ ಹರಣವಾಗುತ್ತಿದೆ! ರಕ್ಷಿಸಿ!' ಎಂದು ಚೀರತೊಡಗಿದರು. ಇದೆಲ್ಲ ಅಮೇರಿಕ ನಿಯೋಜಿಸಿದ ಸಂಗೀತ ತಂಡದ ರಾಗವಾಗಿತ್ತು. ತಂಡದ ಧಣಿ ಅಮೆರಿಕವು ಗುಟರು ಹಾಕತೊಡಗಿತು. ಚಾಚ ಕ್ಯಾರೇ ಅನ್ನದೆ ತನ್ನ ಕಾರ್ಯಕ್ರಮ ಮುಂದುವರೆಸಿದ. ಕಚ್ಚಾತೈಲ ಮಾರಾಟದಿಂದ ಬಂದ ಕೋಟ್ಯಾಂತರ ರೂಪಾಯಿಗಳನ್ನು ಬಡವರ ಜೀವನ ಸುಧಾರಿಸುವ ಯೋಜನೆಗಳಿಗೆ ಹರಿಸತೊಡಗಿದ.

ಚರಿತ್ರೆಯಲ್ಲಿ ಒಂದು ರೋಚಕ ಕಥನ. ಅದನ್ನು ಮತ್ತೆಂದಾದರೂ ಹೇಳುವೆ.

ಚಾಚ ತನ್ನ ದೇಶದ ಬಡವರ ಪ್ರೀತಿಪಾತ್ರನಾದದ್ದು ಮಾತ್ರವಲ್ಲದೆ, ದಕ್ಷಿಣ ಅಮೆರಿಕದ ಇತರ ದೇಶಗಳೂ ಸ್ವಾಭಿಮಾನಿಯಾಗುವ ಬಗೆಯಲ್ಲಿ ಒಕ್ಕೂಟ ರಚಿಸಿಕೊಂಡು, ತನ್ನ ದೇಶದ ಸಂಪತ್ತನ್ನು ಹಂಚಿಕೊಂಡು, ಆ ದೇಶಗಳೂ ದೊಡ್ಡಣ್ಣ ಅಮೆರಿಕದ ದಲ್ಲಾಳಿಗಳ ಹಂಗಿಲ್ಲದೆ ಸ್ವಾಯತ್ತ ಪ್ರಭುತ್ವಗಳಾಗುವಂತೆ ವಾತಾವರಣ ರೂಪಿಸುವ ರಾಜಕೀಯ ಮುತ್ಸದ್ದಿತನ ಮೆರೆದವನು. ಈ ಬಗೆಯ ಅವನ ಯೋಜನೆಯಿಂದ ದಕ್ಷಿಣ ಅಮೆರಿಕದ ರಾಷ್ಟ್ರಗಳ ಕರುಳಬಳ್ಳಿ ಸಂಬಂಧ ಎಷ್ಟು ಬಲವಾಯಿತೆಂದರೆ, 2011ರ ಅಧ್ಯಕ್ಷೀಯ ಚುನಾವಣೆಯಲ್ಲಿ ಚಾಚ ಭಾರಿ ಬಹುಮತ ಗಳಿಸಿ ಗೆದ್ದಾಗ, ಅರ್ಜೆಂಟೀನಾದ ಅಧ್ಯಕ್ಷರಾದ ಕ್ರಿಸ್ಟೀನ್ ಕಿರ್ಚರ್ "ನಿಮ್ಮ ವಿಜಯ ನಮ್ಮ ವಿಜಯವೇ ಹೌದು" ಎಂಬ ಆನಂದದ ಸಂದೇಶ ಕಳಿಸಿದರು. ಚಾಚ ಇಂಥ ಜನಬೆಂಬಲ ಪಡೆದ ನಾಯಕನಾಗಿದ್ದರಿಂದಲೇ ಆತನಿಗೆ ಅಮೆರಿಕದ ದೊಡ್ಡಣ್ಣನಿಗೆ ಸೆಡ್ಡುಹೊಡೆದು ನಿಲ್ಲುವ ಛಾತಿ ಕೊಟ್ಟಿತೆನ್ನಬೇಕು.

1999ರಲ್ಲಿ ಅಮೆರಿಕದ ನ್ಯೂಯಾರ್ಕಿನ ವಿಶ್ವಸಂಸ್ಥೆ ಸಭಾಂಗಣದಲ್ಲಿ ಸಭೆ ನಡೆದಿತ್ತು. ಚರಿತ್ರೆಯಲ್ಲಿ ಮೊದಲ ಭಾರಿಗೆ ವೆನೆಜುಯೆಲಾದ ಅಧ್ಯಕ್ಷರೊಬ್ಬರಿಗೆ ಅಲ್ಲಿ ಪ್ರಪಂಚದ ರಾಷ್ಟ್ರನಾಯಕರನ್ನು ಉದ್ದೇಶಿಸಿ ಮಾತನಾಡುವ ಅವಕಾಶ ದೊರಕಿತ್ತು. ಚಾಚ ಚಾವೇಜ್ ಎದ್ದು ಮೇಜಿನೆದುರು ನಿಂತು ಮಾತು ಪ್ರಾರಂಭಿಸಿದ್ದು ಹೀಗೆ-"ನಿನ್ನೆ ಇದೇ ಮೇಜಿನೆದಿರು ನಿಂತು ಜಾರ್ಜ್ ಬುಷನೆಂಬ ರಾಕ್ಷಸ ಮಾತಾಡಿ ಹೋಗಿದ್ದಾನೆ. ಅವನ ದುರ್ವಾಸನೆ ಇನ್ನೂ ಮೂಗಿಗೆ ಹೊಡೆಯುತ್ತಿದೆ." ಹಿಂಗೆದವನೇ ಭೂತ ನಿವಾರಿಸುವ ಆಚಾರವೆಂಬಂತೆ ಹಾವಭಾವದಲ್ಲಿ ಶಿಲುಬೆ ರಚಿಸಿ ನಮಸ್ಕರಿಸಿ ಗಾಳಿಯಲ್ಲಿ ಮುತ್ತಿಟ್ಟ! ಇಡೀ ಸಭಾಂಗಣವೇ ದಂಗುಬಡಿದು ಹೋಯಿತು. ಚರಿತ್ರೆಯಲ್ಲಿ ಅಮೆರಿಕೆಯ ಅಧ್ಯಕ್ಷರು ಮಾತ್ರವೇ ತಮ್ಮ ತಾಳಕ್ಕೆ ಕುಣಿಯದ ಜಗದ ನಾಯಕರನ್ನು 'ಕಳ್ಳಕಾಕರು, ಕಡಲ್ಗಳ್ಳರು, ರಾಕ್ಷಸರು..' ಎಂದು ನಿಂದಿಸುವ ನೈತಿಕ ಅಧಿಕಾರದ ವರಸೆ ತೋರುತ್ತಿದ್ದರು. ಚಾಚ ಅದನ್ನು ಒಡೆದು ಹಾಕಿದ. ತಲೆಕೆಳಗಾದ ಚರಿತ್ರೆಯನ್ನು ನೆಟ್ಟಗೆ ನಿಲ್ಲಿಸಿದ. ಇಂಥ ನಾಯಕನನ್ನು ನಮ್ಮವನನ್ನಾಗಿಸಿಕೊಳ್ಳಲಿಕ್ಕಾಗಿಯೇ ಜೀವಂತ ಸಂಬಂಧ ಪಡೆಯುವುದರ ಒಂದು ಪುಟ್ಟ ಹೆಜ್ಜೆಯಾಗಿಯೇ ನಾವು ಅವನನ್ನು 'ಚಾಚ ಚಾವೇಜ್' ಅನ್ನಬೇಕಲ್ಲವೇ. ಚಾಚ ನಿಜಕ್ಕೂ ಪೂರ್ಣ ಸ್ವರೂಪದ ಕ್ರಾಂತಿಕಾರಿ ಕಾರ್ಯಕ್ರಮ ಗಳಿರುವ ನಾಯಕನಾಗಿರಲಿಲ್ಲ; ಕೆಲವು ರಾಜಿಗಳನ್ನು ಮಾಡಿಕೊಂಡಿದ್ದನಲ್ಲವೇ? ಎಂದು ಅನುಮಾನ ಪಡುವ ಎಡಪಂಥೀಯರೂ ಇದ್ದಾರೆ. ಇರಲಿ, ಅವರ ಮಾತಿಗೂ ಕಿವಿಗೊಡೋಣ. ಚಾಚನ ಸಾಹಸವನ್ನು ಕಡೆಗಾಣಿಸದೆ, ಮರೆಯದೇ ಅವನ ರಾಜಕೀಯವನ್ನು ಟೀಕಿಸಬಹುದಲ್ಲವಾ.

ಚಾಚ ತೀರಿಕೊಂಡ ಮೂರೇ ದಿನಗಳಲ್ಲಿ ಬ್ರಿಟನ್ನಿನ 19 ವರ್ಷದ ಕಾಲೇಜು ವಿದ್ಯಾರ್ಥಿ ಜೋಸಯ್ ಮಾರ್ಟೈಮರ್ ಎಂಬ ಸಾಮ್ರಾಜ್ಯಶಾಹಿ ವಿರೋಧಿ ಆದರ್ಶಗಳನ್ನು ತಲೆತುಂಬಿಕೊಂಡಿರುವ ಹುಡುಗ ಚಾಚನಿಗೆ ಒಂದು ಚರಮಗೀತೆ ಬರೆದು, ತನ್ನ ಗಿಟಾರಿನ ಸಂಗೀತ ಲಯಕ್ಕಳವಡಿಸಿ ಹಾಡುತ್ತಿದ್ದಾನೆ. ಈ ಹಾಡು ಬಲು ಪ್ರಖ್ಯಾತವಾಗಿದೆ. ಇದನ್ನು ಜಾಣಜಾಣೆಯರು https://soundcloud.com/josiah-mortimer/live-and-overcome-a-tribute-to ತಾಣದಲ್ಲಿ ಕೇಳಬಹುದು. ಇಲ್ಲಿ ನಿಮಗಾಗಿ ಈ ಗುಮಾಸ್ತ ಆ ಹಾಡಿನ ಒರಟು ಕನ್ನಡ ಅನುವಾದ ನೀಡಿದ್ದಾನೆ-ಸ್ವೀಕರಿಸಿ. ಮಾರ್ಟೈಮರ್‌ಗೆ ಒಂದು ಸಲಾಮ್ ಹೇಳ್ತೀರಲ್ವ? ಚಾಚ ಚಾವೇಜನಿಗೆ ಬಡಾ ಸಲಾಂ ಹೇಳ್ತೀರಲ್ವ!

ಉಳಿಯೋಣ ನಾವು ಉಳಿದು ಗೆಲ್ಲೋಣ

ತೆಂಕಣದ ಪಂಜು ಇಂದು ತಣ್ಣಗಾಗಿದೆ
ಹುರುಪಿನ ಸೆಲೆಯೊಂದು ಬತ್ತಿ ಹೋಗಿದೆ
ನಾಯಕನ ಕಣ್ಚಿತ್ರ ಕರಗಿ ಹೋಗಿದೆ.


ಹರಿದಿದ್ದಾರೆ ಹಿಂಡು ಮಂದಿ ಲಕ್ಷಾಂತರ
ಬೀದಿಗೆ ಬೀದಿಯೇ ಕೆಂಪು ಸಾಗರ.
ತೇಲುತಿದೆ ಶೋಕದ ಹಡಗು
ಅನುರಣಿಸುವ ಜನರ ಗುಡುಗು
'ಸಂಗಾತಿ ನೀನು ಅಮರ, ನಿಲ್ಲದು ನಮ್ಮ ಸಮರ'.

ಬದುಕಿಗಾಗಿ ಪ್ರಾಣ ತೆತ್ತವರು ಎಂದೂ
ಸಾಯೋದಿಲ್ಲ ಗೆಳೆಯರೇ
ಗುರಿಯತ್ತ ಮುನ್ನುಗ್ಗೋಣ, ಉಳಿಯೋಣ
ಉಳಿದು ಗೆಲ್ಲೋಣ.

ಅರಿವನ್ನು ಯಾರೂ ಕೊಲ್ಲಲಾಗದು
ಭಯದ ತೆರೆ ಹರಿದಿದೆ,
ನೆರೆ ದಿಕ್ಕು ಬದಲಿಸಿದೆ
ಹಳೆಯ ಚಿಂದಿ, ಕೊಳಕುಗಳು
ಕೊಚ್ಚಿಕೊಂಡು ಹೋಗಲಿವೆ.

ಆತನೋ ಜಗಜಟ್ಟಿ
ಸೆರೆ ಬಾಗಿಲ ಮುರಿದಿದ್ದಾನೆ
ಒಳ್ಳೆಯ ದಿನಗಳು ನಮ್ಮತ್ತಲೇ ಬರುತ್ತಿವೆ
ಜಟ್ಟಿ ಇಂದು ಒಬ್ಬಗಿಲ್ಲ ಎದ್ದೇಳಿ ಗೆಳೆಯರೇ
ಎದೆ ಸೆಟೆಸಿ ನಿಲ್ಲೋಣ.

"ಹಸ್ತಾ ಲ ವಿಕ್ಟೋರಿಯ ಸಿಯಂಪ್ರ
ವಿವಿರೆಮೊಸ್ ವೈ ವೆನ್ಸೆರೆಮೊಸ್"
ಮುನ್ನುಗ್ಗಿ ಗೆಳೆಯರೇ, ಗೆಲುವು ನಮ್ಮದು
ಉಳಿಯೋಣ, ಉಳಿದು ಗೆಲ್ಲೋಣ.





ಚಾಚಗೆ ಬಡತನ ಹುಟ್ಟಿದಾಗಿಂದಲೇ ...ವಾಗಿತ್ತು. ಮುಂದೆ ಆತ ಮಿಲಿಟರಿ ಸೈನ್ಸ್ ಪದವಿ ... ಅದನ್ನೀಗ ಇಂಜಿನಿಯರಿಂಗ್ ಅಂತೀವಿ) ಪಡೆದು ...ಮಿಲಿಟರಿ ಸೇರಿದ. ವೆನೆಜುಯೆಲಾ ಅಪಾರವಾದ ...ು ನಿಕ್ಷೇಪ ಸಂಪತ್ತಿರುವ ದೇಶ. ಬಹುರಾಷ್ಟ್ರೀಯ ...ಕಂಪೆನಿಗಳು, ದೇಶದ ಸಿರಿವಂತರ ಜೊತೆ ಶಾಮೀಲಾಗಿ, ...ಲವನ್ನು ಕವಡೆ ಕಾಸಿಗೆ ಪಡೆದುಕೊಂಡು ವಾಕರಿಕೆ ...ಷ್ಟು ಶ್ರೀಮಂತರಾಗುತ್ತಿದ್ದರೆ, ಮಿಕ್ಕ ಬಹುಪಾಲು ...ಬಡತನ ದಿನೇ ದಿನೇ ಹೆಚ್ಚುತ್ತಾ ಹೋಯಿತು. ...ಪರಿಣಾಮ ಏನಾಯ್ತೆಂದರೆ, ದೇಶದ ಜನಸಂಖ್ಯೆಯ ...ು ಮುಕ್ಕಾಲುವಾಸಿ ಜನ ಹೊಟ್ಟೆಪಾಡಿಗೆ ನಗರಗಳಿಗೆ ...ಬಂದು ಕೊಳಗೇರಿಗಳಲ್ಲಿ ಅತಿ ದಾರಿದ್ರ್ಯದ ... ತುತ್ತಾದರು. ಇದು ಚಾಚಗೆ ಸರಿ ಕಾಣಲಿಲ್ಲ. ...ದ ದಲ್ಲಾಳಿಗಳಾಗಿ ದೇಶದ ಆಡಳಿತ ನಡೆಸುತ್ತಿದ್ದ ...ರ ಪ್ರಭುತ್ವವನ್ನು ಕೊನೆಗೊಳಿಸಲು ಅವನು ...ಯಲ್ಲಿ ಗುಪ್ತಪಡೆಯನ್ನು ಕಟ್ಟಿದ.


...92ರಲ್ಲಿ ಪ್ರಭುತ್ವದ ವಿರುದ್ಧ ಮಿಲಿಟರಿ ಬಂಡಾಯ

ಚಾಚನ 14 ವರ್ಷಗಳ ಅಧ್ಯಕ್ಷ ಅವಧಿಯಲ್ಲಿ ದೇಶದ ಬಡತನದ ಪ್ರಮಾಣ ಎಲ್ಲರೂ ಹುಬ್ಬೇರಿಸುವಷ್ಟು ಕುಸಿಯಿತು. ಬಡವರ ಅನ್ನ, ಅರೋಗ್ಯ, ವಿದ್ಯೆಗಳಿಗಾಗಿ ದೇಶದ ಸಂಪತ್ತನ್ನು ವಿನಿಯೋಗಿಸುವ ಅವನ ಕಾರ್ಯಕ್ರಮಗಳಿಂದಾಗಿ ಚಾಚ ಬಡವರ ಕಣ್ಮಣಿಯಾದ, ಕ್ರಾಂತಿಕಾರಿ ನಾಯಕನೆಂದು ಅವನನ್ನು ಜನ ತಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಂಡರು. ಇದು ಅಮೆರಿಕೆಗೂ, ವೆನೆಜುಯೆಲಾದ ಶ್ರೀಮಂತರಿಗೂ ಅಪಥ್ಯವಾಗಿತ್ತು ಎಂದು ಬೇರೆ ಹೇಳಬೇಕೆ! 2002ರಲ್ಲಿ ವೆನೆಜುಯೆಲಾದ ಸಿರಿವಂತಕೂಟ ಸಂಚು ಹೆಣೆದು, ಸಂಸತ್ತಿನಲ್ಲಿ ಭಾನಗಡಿ ಮಾಡಿ, ಚಾಚನನ್ನು ಬಂಧಿಸಿಟ್ಟು, ತಮ್ಮ ಸರಕಾರ ದೇಶದ ಆಡಳಿತ ನಡೆಸುವುದಾಗಿ ಘೋಷಿಸಿಬಿಟ್ಟಿತು. ದೇಶದ ಲಕ್ಷಾಂತರ ಬಡವರು ಫುಲ್ ರಾಂಗಾದರು. 'ಇವನಯ್ಯನ್! ಯಾಮಾರ್ಸಿ ನಮ್ಮ ಬೆನ್ನಿಗೆ ಚೂರಿ ಹಾಕ್ತೀರ' ಅಂತ ಬೀದಿಗಿಳಿದರು. ವೆನೆಜುಯೆಲಾದ ಬಡಜನ ಒಗ್ಗೂಡಿ ಸಂಚಿನ ಸರಕಾರವನ್ನು ಕಿತ್ತೊಗೆದು, ಚಾಚನನ್ನು ಬಿಡುಗಡೆಗೊಳಿಸಿ, ಅಧ್ಯಕ್ಷ ಸ್ಥಾನದಲ್ಲಿ ಮತ್ತೆ ಕೂರಿಸಿದ್ದೇ ಆಧುನಿಕ ಹೋರಾಟದ

ವಿ.ಸೂ.: ಕಾರಣಾಂತರಗಳಿಂದ ಈ ವಾರ ಕಟ್ಟೆಪುರಾಣ ಅಂಕಣವು ಪ್ರಕಟವಾಗುತ್ತಿಲ್ಲ. ಮುಂದಿನ ವಾರದಿಂದ ಎಂದಿನಂತೆ ಪ್ರಕಟವಾಗಲಿದೆ.
—ಸಂ.

...ಬರಿ ಮಲೈ ಮತ್ತು ವಿಜಯ ಮಲ್ಯ

...ಜಯ ಮಲ್ಯ ತರಹದ ದುಷ್ಟರನ್ನು ವರ್ಣಿಸಲು ನನಗೆ ಮಾತುಗಳೇ ಹೊಳೆಯುತ್ತಿಲ್ಲ. ಈತ ವಿದ್ವಾಂಸ, ...ತ್ತಿದವನು, ಶ್ರೀಮಂತ, ರಸಿಕ, ವರ್ತಕ ಇತ್ಯಾದಿಯಾಗಿ ಇವನ ಅಭಿಮಾನಿಗಳು ...ತ್ತಾರೆ. ನಾನು ಬೇಕೆಂತಲೇ ಮೊನ್ನೆ ರೇಸ್‌ಕ್ಲಬ್‌ನ ಗಣ್ಯ ಸಹೋದ್ಯೋಗಿ ...ೊಂದಿಗೆ ಮಾತಾಡುತ್ತಿದ್ದಾಗ, 'ಈ ವಿಜಯ ಮಲ್ಯ ಶಬರಿಮಲೈ ದೇವರಿಗೆ ...ಕವಚ ಮಾಡಿಸಿಕೊಡ್ತಾನಂತೆ' ಅಂದೆ. ಆದಕ್ಕೆ ಅವರು ಮೆಚ್ಚಿಗೆಯ ಧ್ವನಿಯಲ್ಲಿ, ...ಅಂದರು. ನನ್ನ ಮುಖದ ವ್ಯಂಗ್ಯ ನೋಡಿ ತಬ್ಬಿಬ್ಬಾದರು. ನಾನು ವಿಷಯವನ್ನು ... ಬಡದೆ 'ಆ ಕವಚ ಅಥವಾ ಚಿನ್ನದ ಪ್ಲೇಟ್‌ಗೆ ಕನಿಷ್ಟ ಒಂದೂವರೆ ಕೋಟಿ ...ು ಆಗುತ್ತಂತೆ' ಅಂದೆ. ಆದರಿಂದ ಮಲ್ಯ ಬಗ್ಗೆ ಅವರಿಗೆ ಗೌರವ ಹೆಚ್ಚಾಯಿತೇ ... ಕಡಿಮೆಯಾಗಲಿಲ್ಲ, ನಮ್ಮ ಶ್ರೀಮಂತ ಗಣ್ಯರ ಜಡಲೋಕ ಯಾವ ಬಗ್ಗೆ ...ೆ, ಮಲ್ಯ ತರಹದವರು ಹೇಗೆ ಜೊತೆಯವರ ನೈತಿಕ ತೀಕ್ಷ್ಣತೆಯನ್ನೇ ನಾಶ ... ಎಲ್ಲರನ್ನೂ ಹೆಣಗಳನ್ನಾಗಿಸುತ್ತಾರೆ ಎನ್ನುವುದನ್ನು ಇದು ತೋರುತ್ತದೆ. ...ನಿಗೆ ಧರ್ಮಬುದ್ಧಿ ಬಂತೆ? ಭಕ್ತಿ ಹೆಚ್ಚಾಯಿತೆ? ಈತನ ಅವಿವೇಕದಿಂದಾಗಿ ...ಲ್ಲಿ ಹೂಡಿದ ಹಣ ನಷ್ಟದಲ್ಲಿ ಕೊಚ್ಚಿ ಹೋಗಿ ದೇವರನ್ನು ಒಲಿಸಿಕೊಳ್ಳಲು ... ಚಿನ್ನದ ತಂತ್ರ ಉಪಯೋಗಿಸುತ್ತಿರಬಹುದೆ? ದಿಗ್ಭ್ರಮೆಗೊಂಡಿರಬಹುದೆ?




ನನಗೆ ಕಾಣುವಂತೆ ಕೊನೆಯದೇ ಈತನ ಮುಖ್ಯ ಕಾರಣ. ಈತನಿಗೆ ಧಾರ್ಮಿಕತೆ ಇದ್ದರೆ ಕರ್ನಾಟಕದ ಹೋಬಳಿಯೊಂದನ್ನು ದತ್ತು ತೆಗೆದುಕೊಂಡು ಅಲ್ಲಿಯ ರಸ್ತೆ, ಶಾಲೆ, ವಿದ್ಯುತ್, ಪುಸ್ತಕಭಂಡಾರ ಇತ್ಯಾದಿಗೆ ಒಂದೂವರೆ ಕೋಟಿಯನ್ನು ಖರ್ಚುಮಾಡಬಹುದಿತ್ತು; ಅಸಹಾಯಕ ಬಡವರು, ಮಹಿಳೆಯರು, ಅಲ್ಪಸಂಖ್ಯಾತರು ದಿಕ್ಕೆಟ್ಟ ಸ್ಥಿತಿ ತಲುಪಿರುವಾಗ ಶಬರಿಮಲೈನ ದರಿದ್ರ, ದುಷ್ಟ, ವಿಕೃತ ಅಯ್ಯಪ್ಪನ ಮೇಲೆ ಚಿನ್ನ ಹಾಕುವುದು ಸಮಾಜ ದ್ರೋಹ, ಅತ್ಯಂತ ಅಧರ್ಮದ ಕೆಲಸ.

ಸೂಕ್ಷ್ಮಜ್ಞತೆ ಮತ್ತು ಮಾನವೀಯತೆ ಒಂದೇ ಎಂದು ನಂಬುವ ನನಗೆ ನಮ್ಮಲ್ಲಿ ಗಣ್ಯರೆನ್ನಿಸಿಕೊಂಡ ವಿಜಯ ಮಲ್ಯಗಳು, ದೇವೇಗೌಡರುಗಳು ಚಿನ್ನದ ಕವಚ, ಪುರೋಹಿತರ ಭೋಜನ, ಯಜ್ಞಗಳ ಕೇಡಿಕೃತ್ಯ- ಇತ್ಯಾದಿಗೆ ಕೋಟ್ಯಂತರ ಹಣ ಖರ್ಚುಮಾಡಿರುವುದು ಖಳರುಗಳು, ಕ್ರಿಮಿನಲ್‌ಗಳು ಮಾತ್ರ ಮಾಡುವ ಕೆಲಸ ಅನ್ನಿಸುತ್ತದೆ... ಈ ತರಹದ ಕ್ರಿಮಿನಲ್‌ಗಳ ಜೊತೆಗಿರುವ ಪಟೇಲ್, ಸಿದ್ರಾಮಯ್ಯ ವಗೈರೆಗಳನ್ನು ಓಲೈಸಿ ಡಾಲರ್ ಕಾಲನಿಗಳಲ್ಲಿ ನೆಮ್ಮದಿಯಾಗಿರುವ ಸಾಹಿತಿಗಳೂ ಹುಟ್ಟಿಕೊಳ್ಳುತ್ತಿರುವುದು ದುರಂತದ ವಿಷಯ.

ಇಂಥ ನಾಡಿನಲ್ಲಿ ಕಣ್ಣು, ಕಿವಿ, ಮೂಗು ಮುಚ್ಚಿಕೊಂಡು ಸುಮ್ಮನಿರುವುದು ನಾವೆಲ್ಲ ನಮ್ಮ ಮನಃಶ್ಯಾಂತಿಗಾಗಿ ಮಾಡಬಹುದಾದ ಕೆಲಸ. ಇಲ್ಲಿ ನಾವೆಲ್ಲ ಉಣ್ಣುವ ಅನ್ನ, ಕುಡಿಯುವ ನೀರು, ಸೇವಿಸುವ ಗಾಳಿ ಕೂಡ ನಮ್ಮ ಕುತ್ತಿಗೆ ಹಿಸುಕಿದಂತೆ ಭಾಸವಾಗುತ್ತದೆ.

- ಫೆಬ್ರವರಿ 18, 1998



ಆಧ್ಯಾತ್ಮವೇ ದುರಾಡಳಿತದ ಶ್ರೀರಕ್ಷೆ!

ಅಣಕ



• ಎಚ್.ಎಲ್.ಕೇಶವಮೂರ್ತಿ

ಫೆಬ್ರವರಿ 28ರಂದು ಕೇಂದ್ರದ ಬಜೆಟ್ ಬಂದಿತು. ಮಾರನೆ ಬೆಳಗ್ಗೆ ಸಿಗರೇಟು ತರಲು ಪಕ್ಕದಲ್ಲೇ ಇದ್ದ ಪೆಟ್ಟಿಗೆ ಹೋಟೆಲಿಗೆ ಹೋದೆ. ದರ ಹಿಂದಿನದೇ ಇದ್ದಿತು.

ಸಂಜೆ ಮತ್ತೆ ಹೋದೆ. ಸಿಗರೇಟಿನ ಬೆಲೆ ಏರಿತ್ತು!

'ಏನ್ರಿ ಭಟ್ಟರೆ ರೇಟು ಜಾಸ್ತಿ ಮಾಡಿದೀರಿ?' ಕೇಳಿದೆ.

'ಹೋಲ್‌ಸೇಲ್ ರೇಟೇ ಜಾಸ್ತಿ ಆಗಿದೆ ಸಾರ್.'

ವ್ಯಾಪಾರಿಗಳ ಮರ್ಮನೇ ಹೀಗೆ. ಬಜೆಟ್‌ನಲ್ಲಿ ಬೆಲೆ ಇಳಿಕೆ ಆದರೆ ಅದರ ಪ್ರಯೋಜನ ಗ್ರಾಹಕ ಪಡೆಯಲು ಏಪ್ರಿಲ್ ತಿಂಗಳವರೆಗೆ ಕಾಯಬೇಕು. ಏರಿಕೆ ಆದರೆ ಅವರ ಜೇಬಿಗೆ ಕತ್ತರಿ ತಕ್ಷಣವೇ ಜಾರಿ ಆಗುತ್ತೆ!

ಮಾತು ಬೆಲೆ ಏರಿಕೆ ಕಡೆ ತಿರುಗಿತು.

'ಏನ್ರಿ ಭಟ್ಟರೆ ಹೀಗೆ ಬೆಲೇನ ಏರಿಸ್ತಾನೆ ಹೋದ್ರೆ ಬದುಕೋದು ಹೆಂಗ್ರಿ?'

'ಹೆಂಗೋ ಆಗುತ್ತೆ ಸಾರ್.' ಎಲ್ಲರಿಗೂ ಆದಂಗೆ ನಮಗೂ ಆಗುತ್ತೆ!'


'ಅಲ್ಲಾರೀ ಇದರ ಲಾಭಾನ ಯಾರೋ ಕೆಲವರು ಹೊಡೆದುಕೊಳ್ತಾರಲ್ರೀ?'

'ಅದು ಅವರವರು ಪಡ್ಕೊಂಬಂದದ್ದು ಸಾರ್!'

ಎಂತಹ ಆಧ್ಯಾತ್ಮ!

ರಾಜಕಾರಣಿಗಳಿಗೆ ಇದು ಅರ್ಥ ಆಗಿದೆ. ಬೆಲೆ ಏರಿಕೆಯಿಂದ ಅನಾನುಕೂಲ ಆಗುತ್ತೆ ನಿಜ. ಹೊಸದರಲ್ಲಿ ನೊಂದವರು ಗೊಣಗಾಡಬಹುದು. ಆನಂತರ ಅದಕ್ಕೇ ಹೊಂದಿಕೊಳ್ಳುತ್ತಾರೆ!

ಆಧ್ಯಾತ್ಮವೇ ಅದಕ್ಷತೆಗೆ ಶ್ರೀರಕ್ಷೆ!



ಬೆಲೆ ಏರಿಕೆಯನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳು ಪೆದ್ದುಪೆದ್ದಾಗಿ ಎರಡು ದಿನಗಳ ಮುಷ್ಕರ ಮಾಡಿದ್ರೊ. ಹಂಗೆ ಮಾಡಿದರು ಅಂತ ಬೆಲೆ ಏನೂ ಝುರ್ ಅಂತ ಇಳೀತಾ. ಇಲ್ಲವಲ್ಲಾ, ಏರುತ್ತಾನೆ ಹೋಯ್ತು. ಹೋಗ್ತಾನೂ ಇದೆ. ಆದರಿಂದ ಆದ ಲಾಭ ಅಂದರೆ ಈ ಮುಷ್ಕರದಿಂದಾಗಿ ಇಪ್ಪತ್ತು ಸಾವಿರ ಕೋಟಿ ರೂಪಾಯಿನ ನಷ್ಟ ಆಯಿತು ಅಂತ ಮಾಧ್ಯಮಗಳಿಂದ ಉಗಿಸಿಕೊಂಡದ್ದು ಅಷ್ಟೆ! ಇದರ ಅರ್ಥ ಏನು ಅಂದರೆ ಯಾವುದರ ವಿರುದ್ಧವೂ ಪ್ರತಿಭಟಿಸಬಾರದು. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಸಂಪಾದನೆಗೆ ತಕ್ಕಂತೆ ಪದಾರ್ಥ ಬಳಸಬೇಕು!

ಇದು ಯಾವ ಸೀಮೆ ನ್ಯಾಯ ಅಂತ ಅನ್ಬೇಡಿ ಕಣ್ರಿ. ಯಾಕೇಂತೀರಾ. ದೆಹಲಿ ಗೊತ್ತಲ್ಲ, ಅಲ್ಲಿನ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರು ಏನು ಹೇಳವ್ರೆ ಗೊತ್ತಾ, ಅಲ್ಲಿನ ಜನ ವಿದ್ಯುತ್ ದರ ಏರಿಕೆ ಆಯ್ತೋ ಅಂತ ಹುಯಿಲೆಬ್ಬಿಸಿದ್ರು. ಅದ್ಕೆ ಈ ಮೇಡಮ್ಮು 'ಇದ್ಯಾಕಿಂಗಾಡ್ತಾ ಬದ್ದಿದ್ದೀರಿ. ಚೈತನ್ಯ ಎಷ್ಟದೋ ಅಷ್ಟಕ್ಕೆ ವಿದ್ಯುತ್ ಬಳಸಿ' ಅಂದವ್ರೆ. ಅಂದರೇನಾಯ್ತು ಬೆಲೆ ಏರಿತು ಅಂತ ಕೂಗಾಡುವುದ ಬುಟ್ಟು ಕಾಸೆಷ್ಟಿದೋ ಅಷ್ಟಕ್ಕೇ ಪದಾರ್ಥ ಕೊಂಡುಕೊಳ್ರೋ ಪೆದ್ದ ಮುಂಡೇವ ಅಂದಗಾಯ್ತು!

ರಾಜಕಾರಣಿ ತ್ಯಾಗ!

ಇಂತಹವುಗಳನ್ನು ಕೇಳಿಯೇ ಇರುತ್ತೀರಿ.

ಮನೆಗೆ ದಿನಸಿ ಬೇಕಾಗಿರುತ್ತೆ, ತರಲು ಶೆಟ್ಟರ ಅಂಗಡಿಗೆ ಹೋಗುತ್ತೀರಿ. ಸೋನಾ ಮಸೂರಿ ಅಕ್ಕಿ ನೋಡುತ್ತೀರಿ. 'ಹೆಂಗೆ ಶೆಟ್ರೆ ಅಕ್ಕಿ' ಎಂದು ಕೇಳುತ್ತೀರಿ. 'ಕೆಜಿ ಐವತ್ತು ರೂಪಾಯಿ' ಅನ್ನುತ್ತಾರೆ ಅವರು. 'ಇದೇನ್ರಿ ಶೆಟ್ಟರೆ ಇಷ್ಟೊಂದು ಬೆಲೆ ಹೇಳ್ತೀರಿ. ಅವರ ಅಂಗಡೀಲಿ ನಲವತ್ತು ರೂಪಾಯಿ ಅಂದ್ರು' ಎನ್ನುತ್ತೀರಿ. ಅದಕ್ಕೆ ಶೆಟ್ಟರು 'ನಮ್ಮ ರೇಟಿದು. ಅಲ್ಲೇ ತಗೊಳ್ಳಿ ಸ್ವಾಮಿ' ಅಂತಾರೆ. 'ಅವರತ್ರ ಸ್ಟಾಕ್ ಇಲ್ವಂತೆ' ಎನ್ನುತ್ತೀರಿ. 'ಸ್ಟಾಕ್ ಇಲ್ಲದಿದ್ದಾಗ ನಾನು ನಲವತ್ತೇನು ಅದಕ್ಕೂ ಕಡಿಮೆ ರೇಟಿಗೆ ಕೊಡ್ತೀನಿ' ಅಂತಾರೆ ಶೆಟ್ಟರು! ಹಂಗಾಗದೆ ನೋಡಿ ಯಡ್ಯೂರಪ್ಪನವರ ಕತೇನೂವೆ.

ಅದೇನು ಆಯಿತು ಅಂದ್ರೆ ಕಾವೇರಿ ನದಿ ವಿವಾದ ಅನ್ನೋದು ಗಳಿಗೆಗೊಂದು ತಿರುವು ತೆಗೊಳ್ತಾ ಇದೆಯಲ್ಲಾ. ಈಗ ಕೇಂದ್ರ ಸರ್ಕಾರ ಐತೀರ್ಪನ್ನು ಗೆಜೆಟ್‌ನಲ್ಲಿ ಹಾಕ್ತೀವಿ ಅಂತಲ್ಲಾ. ಅನ್ನೋದೇನು ಬಂತು. ಹಾಕಿಯೇ ಬಿಡ್ತು. ರೈತರಿಗೆ ಅನ್ಯಾಯ ಆಗೋಯ್ತಲ್ಲಾ ಅಂತ ಯಡ್ಯೂರಪ್ಪನವರಿಗೆ ಭಲೇ ಸಂಕಟ ಆಯ್ತಂತೆ. ಸರ್ಕಾರದ ನಿಷ್ಕ್ರಿಯತೆಗೆ ಎಗ್ಗಾಮುಗ್ಗಾ ಜಾಡಿಸಿದರಂತೆ ಮಾಧ್ಯಮದವರ ಮುಂದೆ. ಹಿಂಗಾಗಿದ್ದರೆ ನೀವೇನು ಮಾಡ್ತಿದ್ದೀರಿ ಅಂತ ಯಾರೋ ಕೇಳಿದ್ದಕ್ಕೆ 'ರಾಜೀನಾಮೆ ಕೆರೆದು ಬಿಸಾಕ್ತಿದ್ದೆ' ಅಂದ್ರಂತೆ! ಶಾಸಕರು, ಸಂಸದರು ಇದನ್ನು ಪ್ರತಿಭಟಿಸಿ ರಾಜೀನಾಮೆ ಕೊಡಬೇಕು ಅಂತಾನೂ ಹೇಳಿದ್ರಂತೆ! ಹಂಗಾರೆ ಅವರ ಮಗನೂ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಲ್ವಾ ಅಂದ್ರೆ ಕೊಡ್ತಾರೆ ಕಣ್ರೀ, ಕೊಡ್ತಾರೆ. ಎಲ್ಲರೂ ಕೊಟ್ಟಾಗ ಅವರೂ ಕೊಡ್ತಾರೆ ಅನ್ನಬಹುದೇನೋ ಅಪ್ಪನವರು. ಇರಲಿ ಈ ಮಾತು ತಿಳಿದ ಜಗದೀಶ್ ಶೆಟ್ಟರೂನೂ 'ನಾನೇನೂ ಅವರಿಗಿಂತ ಕಡಿಮೆ ಇಲ್ಲ, ನನಗೂ ರೈತರ ಬಗ್ಗೆ ಕಾಳಜಿ ಇದೆ. ಅಧಿಕಾರ ಹೋದ ನಂತರ ನಾನೂ ರಾಜೀನಾಮೆ ಕೆರೆದು ಬಿಸಾಕ್ತೀನಿ' ಅನ್ನಬಹುದೇನೋ!

ಹೀಗೆ ಅವಮಾನ ಮಾಡಬಾರದಿತ್ತು!

ದೆಹಲಿಯಲ್ಲಿ ಭಾಜಪದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೀತಲ್ಲಾ, ಅಲ್ಲಿ ನರೇಂದ್ರ ಮೋದೀನೇ ಹೀರೋ ಅಂತೆ. ಭಾವೀ ಪ್ರಧಾನಿ ಅಂತ ಎಲ್ಲಾರೂ ಕೊಂಡಾಡಿದರಂತೆ. ಅಭಿವೃದ್ಧಿ ನೇತಾರ ಅಂತೆಲ್ಲ ಹಾಡಿ ಹೊಗಳ್ತಾ ಇದ್ದರಂತೆ. ಹ್ಯಾಟ್ರಿಕ್ ಹೀರೋ ಆದ ಹೊಸದರಲ್ಲಿ ದೆಹಲಿಯ ಯಾವುದೊ ಕಾಲೇಜಿಗೆ ಹೋದಾಗಲೂ ಹಿಂಗೇ ನಡ್ದಿತ್ತಂತೆ. ನರಹಂತಕನಿಗೆ ಕಾಲೇಜಿನಲ್ಲಿ ಭಾಷಣ ಮಾಡಲು ಅವಕಾಶ ಕೊಡಬಾರದು ಅಂತ ಕೆಲವರು ಪ್ರತಿಭಟನೆ ಮಾಡಿ ಧಿಕ್ಕಾರ ಕೂಗಿದರೂ ಸಭೆಯಾದ ಸಭೆಯಲ್ಲಿ ಭರ್ಜರಿ ಭಾಷಣ ಬಿಗಿದರಂತೆ. ಸಮಾರಂಭ ಅಚ್ಚುಕಟ್ಟಾಗಿ ನಡೆಯಿತು, ದೇಶದ ಯುವಜನತೆಗೆ ಸೂಕ್ತ ಸಂದೇಶ ತಲುಪಿಸಲಾಯ್ತು ಅಂತೆಲ್ಲ ಮಾಧ್ಯಮಗಳೂ ಹೊಗಳಿದವಂತೆ. ಇದನ್ನು ನೋಡಿ ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಖಟ್ಜು ಅವರಿಗೆ ಎಲಎಲಾ ಇದೇನು ಹಿಂಗಾಯ್ತಬಿದ್ದದಲ್ಲಾ; ಈ ನರಹಂತಕ ಪ್ರಧಾನಿಯಾದರೆ ದೇಶದ ಸಂವಿಧಾನಾನೇ ಕುಲಗೆಡಿಸುತ್ತಾನಲ್ಲ ಅನ್ನಿಸಿತಂತೆ. ಅಭಿವೃದ್ಧಿ ನೇತಾರ ಅಂತ ಬೀಗ್ತಾ ಅವ್ನಲ್ಲ ಇವನು ಮಾಡಿರುವುದು ಯಾವ ಸೀಮೆಯ ಅಭಿವೃದ್ಧಿ. ಗುಜರಾತಿನ ಮಕ್ಕಳಲ್ಲಿ ಶೇಕಡಾ ನಲವತ್ತೇಳು ಮಂದಿ ಪೌಷ್ಟಿಕ ಆಹಾರದ ಕೊರತೆಯಿಂದ ನರಳ್ತಾ ಇವೆಯಲ್ಲಾ; ಅಲ್ಲಿನ ಮುಸಲ್ಮಾನರು ಕತ್ತಲೆಯ ಕೋಣೆಯಲ್ಲಿ ಭಯದಿಂದ ಬದುಕ್ತಿದಾರಲ್ಲ; ಇಡೀ ದೇಶಾನೇ ಹಿಂಗಾಗಬೇಕು ಅನ್ನೋ ಬಯಕೇನಾ ಇವರದ್ದು ಅಂತೆಲ್ಲ ಯೋಚಿಸಿದರಂತ. ಅದನ್ನೇ ಪತ್ರಿಕೇಲೂ ಬರೆದರಂತೆ.



ಅವರೇನೋ ಹಂಗೆಲ್ಲ ಬರುದ್ರು. ಇದು ಭಾಜಪ ಜನಕ್ಕೆ ಭಲೇ ಕ್ಯಾಣ ಹತ್ತಿಸಿತಂತೆ. ಅದರಲ್ಲೂ ಅರುಣ್ ಜೇಟ್ಲಿ ಸಾಹೇಬರಿಗೆ ಎಲ್ಲೆಲ್ಲೋ ಮೆಣಸಿನಕಾಯಿ ತುರುಕಿದಂತಾಯ್ತಂತೆ. ಅದೂ ನ್ಯಾಯವೇ ಅನ್ನಿ. ಪಾಪ ಈ ಜೇಟ್ಲಿ ಸಾಹೇಬರು ಮೋದಿ ಕೃಪಾಕಟಾಕ್ಷದಿಂದ ರಾಜ್ಯಸಭೆಗೆ ಗುಜರಾತಿನಿಂದ ಆಯ್ಕೆ ಆಗಿರೋರು. ಅವರೇನು ಮಾಡಿದ್ರಂತೆ? ಖಟ್ಜು ಹೇಳಿಕೆಯನ್ನು ಚಿಂದಿ ಉಡಾಯಿಸಿದ್ರಂತೆ. 'ಈ ಮನುಷ್ಯ ಕಾಂಗ್ರೆಸ್‌ನೋನು. ಅವರ ತಪ್ಪುಗಳು ಇವನಿಗೆ ಕಾಣಿಸುವುದೇ ಇಲ್ಲ, ಬರೀ ಭಾಜಪ ಹಿಡ್ಕೊಂಡು ಜಾಲಾಡಿಸ್ತಾ ಕುಂತ್ಕತಾನೆ' ಹಂಗೆ ಹಿಂಗೆ ಅಂತೆಲ್ಲ ಪತ್ರಿಕೇಲಿ ಉತ್ತರ ಕೊಟ್ಟರಂತೆ. ಅದ್ಕೆ ಖಟ್ಜು ಏನು ಮಾಡಿದ್ರಂತೆ 'ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳ... ನಾನು ತರಾಟೆಗೆ ತಗೊಂಡಿದೀನಿ' ಅನ್ನುವುದಕ್ಕೆ ಕೆಲ... ನಿದರ್ಶನ ಪತ್ರಿಕೇಲಿ ನೀಡಿದರಂತೆ. ಅಷ್ಟೇ ಅಲ್ಲ 'ಜೇಟ್ಲಿ ಅವರು ತಪ್ಪುತಪ್ಪಾಗಿ ನನ್ನ ಹೇಳಿಕೆಯನ್ನ ವ್ಯಾಖ್ಯಾ... ಮಾಡಿದಾರೆ. ಅವರು ರಾಜಕೀಯ ಬಿಟ್ಟು ಸನ್ಯಾಸ ಸ್ವೀಕರಿಸುವುದು ಮೇಲು' ಅಂದರಂತೆ!

ಸರಿ ತಪ್ಪು ಒಂದು ಕಡೆ ಇರಲಿ. ಮಾರ್ಕಂಡೇಯ ಖಟ್ಜು ಅವರು ತಮ್ಮ ಹೇಳಿಕೆಯನ್ನು ಜೇಟ್ಲಿ ಅವರು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ; ಅವರು ರಾಜಕೀಯ ಬಿಟ್ಟು ಸನ್ಯಾಸ ಸ್ವೀಕರಿಸಲಿ ಅಂದಿರುವುದು ಹೇಗಾಯಿತು ಅಂದ್ರೆ ಸನ್ಯಾಸಿಗಳೆಲ್ಲ ಹೀಗೆ ತಪ್ಪುತಪ್ಪಾಗಿ ವಿಷಯ ಅರ್ಥೈಸುತ್ತಾ... ಅಂದಹಾಗೆ ಆಯಿತಲ್ಲಾ....!

ಯಾರು ಪ್ರಾಮಾಣಿಕರು?

ರಾಜಕಾರಣಿಗಳು ಪ್ರಾಮಾಣಿಕರಾ?

ಎಲ್ಲಾದರೂ ಉಂಟೆ! ಭ್ರಷ್ಟರು! ಅಪ್ರಾಮಾಣಿಕರು!

ಪತ್ರಕರ್ತರು?

ರಾಜಕಾರಣಿಗಳ ಬಂಡವಾಳ ಬಯಲು ಮಾಡುವ ಸಜ್ಜನರು!

ಇದು ಎಷ್ಟು ಸರಿ?

ಭ್ರಷ್ಟರು ಎಲ್ಲೆಡೆಯೂ ಇದ್ದಾರೆ. ಪ್ರಾಮಾಣಿಕತೆಯೂ ಯಾವ ಒಂದು ವರ್ಗದ ಜನರ ಗುತ್ತಿಗೆಯಲ್ಲ. ಯಾರನ್ನೂ ಸಾರಾಸಗಟಾಗಿ ಹೀಗೇ ಅನ್ನುವಂತಿಲ್ಲ ಎನ್ನುವುದು ಸತ್ಯ.

ಈ ಇಬ್ಬರನ್ನೂ ಹೋಲಿಸಿದರೆ ಯಾರು ಹೆಚ್ಚು ಪ್ರಾಮಾಣಿಕರು? ಕಾಸಿನ ಸುದ್ದಿ ಬಯಲಾಯಿತಲ್ಲಾ, ಅದರ ತನಿಖೆ ನಡೆಯಿತಂತೆ. ಆರೋಪ ಬಂದ ಎಲ್ಲರನ್ನೂ ತನಿಖೆಗೆ ಒಳಪಡಿಸಲಾಯಿತಂತೆ.

ಆರೋಪ ಒಪ್ಪಿದವರೆಷ್ಟು ಮಂದಿ?

ಬಹಳಷ್ಟು ರಾಜಕಾರಣಿಗಳು ಸುದ್ದಿ ಮಾಡಲು ಹಣ ನೀಡಿದ್ದೇವೆ ಎಂದು ಹೇಳಿದರಂತೆ.

ಪತ್ರಕರ್ತರು?

ಒಬ್ಬರೂ ಒಪ್ಪಲಿಲ್ಲವಂತೆ!


ಪಿ. ಸಾಯಿನಾಥ್ ಅವರು ಇದನ್ನು ಬಯಲು ಮಾಡಿದ್ದಾರೆ. ○

'ಹಿಂದೂ ಭಯೋತ್ಪಾದನೆ' ಬಗ್ಗೆ ಯಾಕೆ ಮಾತಾಡಬಾರದು?

ಇತ್ತೀಚೆಗೆ 'ಹಿಂದೂ ಭಯೋತ್ಪಾದನೆ' ಎಂಬ ಸಂಗತಿ ಭಾರೀ ಸುದ್ದಿ ಮಾಡುತ್ತಿದೆ. ಕೆಲವರು ಈ ಬಗ್ಗೆ 'ಇದೆ' ಎಂದರೆ ಕೆಲವರು 'ಇದೆ ಅಂದರೆ ಜಾಗೃತೆ' ಎಂದೆಲ್ಲ ಬೆದರಿಸುತ್ತಿದ್ದಾರೆ. ಭಯೋತ್ಪಾದನೆಯನ್ನು ಬೇರೊಂದು ಧರ್ಮಕ್ಕೆ ಪರ್ಯಾಯ ಪದವಾಗಿ ನಾವೆಲ್ಲ ಇಷ್ಟು ಶ್ರಮವಹಿಸಿ ಪ್ರಚುರಪಡಿಸಿಯಾದ ಮೇಲೂ ಶಿಂಧೆಯಂತಹ ಕೆಲ ಅಧಿಕಪ್ರಸಂಗಿಗಳು ಪುನಃ ತಿದ್ದುಪಡಿ ಮಾಡಹೊರಟರೆ ಕೋಪ ಬರದೇ ಇದ್ದೀತೆ? ಅಕ್ಬರ್ ಒವೈಸಿ ಭಾಷಣ ಮಾಡಿದ್ದು ಘೋರ ಅಪರಾಧವಾದರೆ ತೊಗಾಡಿಯಾ, ಮುತಾಲಿಕ್, ವರುಣ್ ಗಾಂಧಿಯಂತವರಿಗೆ ರಿಯಾಯತಿ ಯುಂಟು ಮಾರಾಯರೇ... ಅದಕ್ಕೂ ಇದಕ್ಕೂ ಹೋಲಿಸಲೇ ಬಾರದು ಛೇ..! ಛೇ..!!



ಇತಿಹಾಸದಲ್ಲಿ ಹಿಂದೂಗಳು ನಡೆಸಿದ್ದ ಮತಾಂತರ ಮತಾಂತರವೇ ಅಲ್ಲ, ಆದರೆ ಕ್ರಿಶ್ಚಿಯನ್ನರು ಎಂದಾಕ್ಷಣ ಹೊಂದಿಸಿ ಬರೆಯಿರಿ ಪಟ್ಟಿಯಲ್ಲಿ 'ಮತಾಂತರ' ಇರಲೇಬೇಕು ತಿಳಿಯಿತೇ? ಕರಾವಳಿಯಲ್ಲಿ ಕಾಣೆಯದ ಹುಡುಗಿಯರ ಪಟ್ಟಿಮಾಡಿ ಇವರೆಲ್ಲ 'ಲವ್ ಜೆಹಾದ್'ನ ಬಲಿಪಶುಗಳೆಂದು ಘೋಷಿಸಿಯಾದ ಮೇಲೂ ಸಯನೈಡ್ ಮೋಹನ್ ಇವರನ್ನೆಲ್ಲ ತಾನೇ ಕೊಂದದ್ದೆಂದು ಬಾಯ್ಬಿಟ್ಟ ಮಾತ್ರಕ್ಕೆ ಲವ್ ಜೆಹಾದ್ ಸಿದ್ಧಾಂತವನ್ನು ತಿದ್ದುಪಡಿ ಮಾಡಲಾದೀತೆ? ಉಹುಂ... ಸುತರಾಂ ಸಾಧ್ಯವಿಲ್ಲ. ಮೊನ್ನೆ ಮೊನ್ನೆ ಮಂಗಳೂರಿನ ಕಾಲೇಜಿನ ಮಾದಕ ವ್ಯಸನಿ ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡದ್ದಕ್ಕೆ ಹಿಂದೂತ್ವವಾದಿಗಳು ಹಬ್ಬ ಆಚರಿಸಿ ಕುಣಿದಾಡಿದರು. ವರ್ಷಗಳ ಹಿಂದೆಯೇ ಇವಳ ಹಿನ್ನೆಲೆ ಗೊತ್ತಿದ್ದರೂ ತಿದ್ದಲಾಗದ್ದು ಒತ್ತಟ್ಟಿಗಿರಲಿ ಮಾದಕ ವಸ್ತು ಸಾಗಾಟದ ಹೆಸರಲ್ಲಿ ಸಾಬರನ್ನ ಜನರೆದುರು ಹಣಿಯಲು ಈಕೆ ಒಂದು ದಾರಿ ಮಾಡಿಕೊಟ್ಟಳಲ್ಲ ಎಂಬುದೇ ಸಂತೋಷದ ಸಂಗತಿ. ಗೋ'ಮದ'ಸೂಧನ್ ಎಂಬ ಕ್ರಿಮಿಯಂತೂ 'ಈ ಮಾದಕ ವಸ್ತು ಸರಬರಾಜು ಎಂಬುದು ಕೇವಲ ಒಂದೇ ಧರ್ಮದವರ ಕೆಲಸ. ಅವರನ್ನೆಲ್ಲ ಗುಂಡಿಟ್ಟು ಕೊಲ್ಲಬೇಕು' ಎಂದು ಫರ್ಮಾನು ಹೊರಡಿಸಿಬಿಟ್ಟ. ಕೆಲ ದಿನಗಳ ಬಳಿಕ ಮಂಗಳೂರಿನ ಪೋಲಿಸರು ಮಾದಕ ವಸ್ತು ಸಾಗಾಟದ ಹೆಸರಲ್ಲಿ ಕೇಶವ ಎಂಬ 'ಸಾಬಿ'ಯನ್ನು ಬಂಧಿಸಿದರು. ಮದಸೂಧನನ ಗುಂಡು ಸಿಡಿಯಲೇ ಇಲ್ಲ, ಇನ್ನೂ ಕೆಲ ದಿನಗಳ ನಂತರ ಉಡುಪಿಯಲ್ಲಿಯೂ ಶಿಕಾರಿಪುರದ 2-3 'ಕೇಶವ'ಗಳು ಇದೇ ಮಹತ್ಕಾರ್ಯದ ಹೆಸರಲ್ಲಿ ಸಿಕ್ಕಾಗಲೂ ಮದಸೂಧನ ಬಾಯಿ ಬಿಚ್ಚಲೇ ಇಲ್ಲ ಇದಲ್ಲವೇ ಚಮತ್ಕಾರ!



ಮುಸಲ್ಮಾನರೆಂದರೆ ಕಳ್ಳಕಾಕರು, ವಂಚಕರು ಹಾಗೂ ಅಡ್ಡಕಸುಬಿಗಳಂತೆ. ದೇಶಕ್ಕೆ ಇವರ ಕೊಡುಗೆ ಇಲ್ಲವೇ ಇಲ್ಲ ಎಂಬಂತೆ ಅವರನ್ನು ಕೆಟ್ಟದಾಗಿ ಬಿಂಬಿಸಲಾಗುತ್ತಿದೆ. ಪತ್ರಕರ್ತರು, ಗಣ್ಯವ್ಯಕ್ತಿಗಳ ಹತ್ಯೆಗೆ ಸಂಚು ರೂಪಿಸಿದ ಆರೋಪ ಹೊತ್ತು ಜೈಲು ಸೇರಿದ್ದ ಮತಿಉರ್ ರಹಮಾನ್ ಸಿದ್ದಿಕಿಯಂತವರು 'ನಾವು ಮುಸಲ್ಮಾನರಾಗಿ ಹುಟ್ಟಿದ್ದೇ ತಪ್ಪೇ?' ಎಂದು ಅಲವತ್ತುಕೊಂಡಿದ್ದಾರೆ. ಅಂಥಾ ಮಹಾನ್ ದೇಶಭಕ್ತ ಟಿಪ್ಪುನನ್ನೇ ಕೇವಲ ಮುಸಲ್ಮಾನನೆಂಬ ಕಾರಣಕ್ಕೆ ಶತ್ರು ಎಂಬಂತೆ ಬಿಂಬಿಸುವ ಜನ (ಸ್ವಾತಂತ್ರ್ಯಕ್ಕಾಗಿ ಹೋರಾಡದೇ ಚಮಚಾಗಿರಿ ಮಾಡಿದ ಹಿನ್ನೆಲೆಯ ಮಂದಿ)ಗಳಿರುವಾಗ ಸಿದ್ದಿ ಯಾವ ಲೆಕ್ಕಕ್ಕೆ?

ಈ ದುರುಳರೊಂದಿಗೆ ಸರ್ಕಾರವೂ ಪೂರ್ವಾಗ್ರಹ ಪೀಡಿತವಾಗಿ ಕೈಜೋಡಿಸಿರುವುದು ಖೇದದ ಸಂಗತಿ. ಅಮಾಯಕರನ್ನು ವಿನಾಕಾರಣ ಹಿಂಸಿಸುವುದರಿಂದ ಸಾಧನೆಗಿಂತ ಹಾನಿಯೇ ಅಧಿಕ.

ಹೇಗಾದರೂ ಮಾಡಿ ದೇಶದ ಹಿಂದೂಯೇತರರನ್ನು ಮಟ್ಟಹಾಕಲು ನಡೆಸುತ್ತಿರುವ ಈ ಎಲ್ಲ ಮೋದಿ ಮಾದರಿಯ ಕುತಂತ್ರಗಳನ್ನು ನೋಡಿದರೆ ಪ್ರಸಿದ್ಧ ಡ್ರಾಕುಲಾ ಎಂಬ ಹಾರರ್ ಕಥೆ ನೆನಪಾಗುತ್ತದೆ. ಡ್ರಾಕುಲಾ ಎಂಬ ರಾಜ ತನ್ನ ದೇಶದಲ್ಲಿನ ಭಿಕ್ಷುಕರ ಸಮಸ್ಯೆಯನ್ನು ನಿವಾರಿಸಲು ಅವರೆನ್ನಲ್ಲ ಊಟಕ್ಕೆ ಕರೆದು, ಅವರನ್ನೆಲ್ಲ ಮನೆಯಲ್ಲಿ ಕೂಡಿಹಾಕಿ, ಆ ಮನೆಗೆ ಬೆಂಕಿ ಇಡಲು ಯೋಜಿಸಿದ್ದನಂತೆ.

ಭಾರತದಲ್ಲೂ ಮುಸಲ್ಮಾನ ಹಾಗೂ ದಲಿತರ ಸಮಸ್ಯೆ ನಿವಾರಿಸಲು ಇಂತಹ ಯೋಜನೆಯ ರೂಪುರೇಷೆ ನಡೆಯುತ್ತಿದೆಯೇ? ಕೆಲ ಘಟನೆಗಳನ್ನು ನೋಡಿದರೆ ಇದನ್ನು ತಳ್ಳಿಹಾಕಲು ಸಾಧ್ಯವಿಲ್ಲ.

- ಶಶಿ ಪುತ್ತೂರು, ದಕ

ಹೈದರಾಬಾದ ಪೋಲಿಸರ ಕುರಿತು ಗೌರಿ ಲಂಕೇಶರು ಬರೆದ ಲೇಖನ ಓದುಗರಲ್ಲಿ ಭಾರತ ಸೆಕ್ಯುಲರ್ ರಾಷ್ಟ್ರ ಅಲ್ಲ ಎಂಬ ಅನುಮಾನಗಳನ್ನು ಹುಟ್ಟುಹಾಕುತ್ತದೆ.

ಪ್ರಕಾಶ ಪಡುಕೋಣೆ ಒಬ್ಬ ತಂದೆಯಾಗಿ ಹೇಳಿದ ಮಾತುಗಳು ಇಂದಿನ ಹೆಣ್ಣು ಮಕ್ಕಳಿಗೆ ಅವರ ಅಪ್ಪಂದಿರು ಹೇಳಬಹುದಾದದ್ದು ಎನಿಸಿತು. ನಿಕ್ಕಂ ಬಗ್ಗೆ ಪಾರ್ವತೀಶ ಬರೆದ ಲೇಖನ ಚೆನ್ನಾಗಿತ್ತು, ಶಹಬಾಸ್ ವೈಸ್ ಕಾಪ್ಟನ್.

'ಶೈವ ದೇವಾಲಯ ಮಾಧ್ವರಿಂದ ಹೈಜಾಕ್' ಎಂಬುದಕ್ಕಿಂತ ಶೈವರು ನೋಡಿಕೊಳ್ಳಲಾಗದ ಕಾರಣ ಮಾಧ್ವರು ಅವುಗಳನ್ನು ನೋಡಿಕೊಳ್ಳುತ್ತಿದ್ದಾರೆ ಎನ್ನುವುದು ಸರಿ ಎನಿಸುತ್ತದೆ.

- ಅಭಿನಂದನ ಬಳ್ಳಾರಿ, ಬೆಂಗಳೂರು


ಪತ್ರಿಕೆ ಒಂದು ಓಯಸಿಸ್ ಇದ್ದಂತೆ

ಬಿಜೆಪಿ ಅಧಿಕಾರ ಹಿಡಿದ ಕೂಡಲೇ ಪೊಲೀಸರಿಗೆ ಆರೆಸ್ಸೆಸ್ ಮಿದುಳನ್ನು ಕಸಿ ಮಾಡುತ್ತದೆ. ಆದ್ದರಿಂದ ಪೊಲೀಸರಲ್ಲಿ ಒಮ್ಮಲೆ ದೇಶಭಕ್ತಿ, ಸಂಸ್ಕೃತಿ ಪ್ರೀತಿ ಎಲ್ಲ ಉಕ್ಕುತ್ತವೆ. ಅವರಿಗೆ ಸೂರಿಂಜೆ, ಸಿದ್ದಿಕಿ ತಮ್ಮ ನಿರಪಾಯಕಾರಿ ಭಾವನೆಗಳಿಗೆ ಬದ್ಧರಾದವರು ದೊಡ್ಡ ಭಯೋತ್ಪಾದಕರಂತೆ ಕಾಣತೊಡಗುತ್ತಾರೆ. ಅವರನ್ನು ಖಂಡಿಸಿ ಸಂಘಪರಿವಾರ ತನ್ನ ಹುಸಿ ದೇಶಭಕ್ತಿಯನ್ನು ಮೆರೆಯುತ್ತೆ.

ಸತ್ಯ ಸೂರ್ಯನಷ್ಟೆ ಪ್ರಖರ. ಆರೆಸ್ಸೆಸ್, ಬಿಜೆಪಿ, ವಿಎಚ್‌ಪಿ, ಎಬಿವಿಪಿಗಳ ಕೋಮು ಬೆಂಕಿ ಈ ಸೂರ್ಯನನ್ನು ಮರೆ ಮಾಚದು. ಸಿದ್ದಿಕಿ ಪ್ರಕರಣದಲ್ಲಿ ಪತ್ರಿಕೆಯ ನೈತಿಕತೆ ಇನ್ನಷ್ಟು ಗಟ್ಟಿಯಾಗಿದೆ.

ನನ್ನ ಮಟ್ಟಿಗೆ ಗೌರಿ ಲಂಕೇಶ್ ತಂಡ ಕನ್ನಡದ ಪತ್ರಿಕೋದ್ಯಮದ ವಿಶಿಷ್ಟ ಕ್ರಿಯಾಶೀಲ ತಂಡವಾಗಿದೆ. ಇದು ಉತ್ಪ್ರೇಕ್ಷೆಯಲ್ಲ. ತಿರುಚಿದ, ಬಣ್ಣ ಕಟ್ಟಿದ ಸುದ್ದಿಗಳನ್ನು ಪ್ರಕಟಿಸಿ ತಮ್ಮ ಉಳಿವಿಗೆ ಪೈಪೋಟಿ ನಡೆಸುತ್ತಿರುವ ಬಹುಪಾಲು ಕನ್ನಡ ಪತ್ರಿಕೆಗಳ ದುರಾವಸ್ಥೆ ಹೇಸಿಗೆ ಹುಟ್ಟಿಸುತ್ತದೆ.

'ಲಂಕೇಶ್' ವಾರ ಪತ್ರಿಕೆ ಒಂದು ಓಯಸಿಸ್ ಇದ್ದಂತೆ. ಇದು ಸತ್ಯದ ನೀರಡಿಕೆಯನ್ನು ನೀಗಿಸುತ್ತದೆ. ಈ ವಾರದ ವಿಶೇಷಾಂಕ ನೋಡಿ ಖುಷಿಯಾಗಿದ್ದಲ್ಲದೆ ಪತ್ರಿಕೆಯ ಪ್ರಯೋಗಶೀಲ ಅನನ್ಯತೆ ಮನಸ್ಸು ತಟ್ಟಿತು. ನನಗೆ ಗೊತ್ತು



ಂಪಲ್ ಆಗಿ ಒಂದು ಹರಟೆ...

ಂಪಲ್ಲಾಗ್ ಒಂದ್ ಲವ್ ಸ್ಟೋರಿ' ಎಂಬ ಚಿತ್ರವನ್ನು ...ಪಿ ನಿರ್ದೇಶಿಸಿದ ಸುನಿ ಅಲಿಯಾಸ್ ಸುನೀಲ್ ಕುಮಾರ್ ... ತರುಣ ಈಗ ಗಾಂಧಿನಗರದಲ್ಲಿ ಟಾಕ್ ಆಫ್ ದಿ ... ಆಗಿದ್ದಾನೆ. ಕೇವಲ 90 ಲಕ್ಷ ರೂ.ಗಳಿಗೆ ನಿರ್ಮಿಸಿದ ...ತ್ರ ಕನಿಷ್ಟವೆಂದರೂ ಎಂಟು ಕೋಟಿ ರೂಪಾಯಿಗಳ ... ಮಾಡುವ ನಿರೀಕ್ಷೆ ಇದೆ. ಈ ಸಾಹಸ ಮಾಡಿದ ...ಶಕನೊಂದಿಗೆ ಹರಟೆ ಹೊಡೆದಿದ್ದು ಇಲ್ಲಿದೆ.

...ಶ್ನೆ: ನಿಮಗೆ ಈ ಚಿತ್ರ ಮಾಡಬೇಕು ಎಂದು ಯಾಕೆ ...ತು?

...: ನಾನು ದಿನೇಶ್ ಬಾಬು ಅವರ ಜೊತೆ ಐದು ...ಗಳಿಗೆ ಕೆಲಸ ಮಾಡಿದ್ದೆ. ಆಗ ನಾನು ಕೂಡ ಒಂದು ... ಏಕೆ ನಿರ್ದೇಶಿಸಬಾರದು ಎಂದೆನಿಸಿತು.

...ಶ್ನೆ: ನೀವೇ ಯಾಕೆ ನಿರ್ಮಾಣಕ್ಕೆ ಕೈಹಾಕಿದ್ದಿರಿ?

...: ನನ್ನ ಕಥೆ ನಿರ್ಮಾಪಕರಿಗೆ ಇಷ್ಟವಾಗಲಿಲ್ಲ, ಕೊನೆಗೆ ...ಉಪಾಯವಿಲ್ಲದೆ ನನ್ನ ಕಸಿನ್ ಹೇಮಂತ್ ಜೊತೆ ಸೇರಿ ...ನಿರ್ಮಾಣ ಮಾಡುವ ಹುಚ್ಚು ಧೈರ್ಯ ಕೈಗೊಂಡೆ.

...ಶ್ನೆ: ನೀವು ಅಂದುಕೊಂಡಿದ್ದ ಬಜೆಟ್‌ನಲ್ಲೇ ಚಿತ್ರ ...ರ್ಣಗೊಂಡಿತಾ?

...: ಆರಂಭದಲ್ಲಿ ನಾನು 50 ಲಕ್ಷ ರೂ. ವೆಚ್ಚದಲ್ಲಿ ಚಿತ್ರ ...ಸಬೇಕೆಂದು ಪ್ಲಾನ್ ಹಾಕಿದ್ದೆ. ಆದರೆ ನನ್ನ ಕಸಿನ್ ನನ್ನ ... ಸೇರಿದ್ದರಿಂದ ಸ್ವಲ್ಪ ಶ್ರೀಮಂತಿಕೆಯಿಂದ ಸಿನಿಮಾ ...ವ ನಿರ್ಧಾರ ತೆಗೆದುಕೊಂಡೆ. ಕೇವಲ ಇಬ್ಬರು ...ದರನ್ನು ಹಾಕಿಕೊಂಡು ಒಂದೇ ಮನೆಯಲ್ಲಿ ...ಬೇಕೆಂದಿದ್ದ ಕಥೆಯನ್ನು ಸ್ವಲ್ಪ ಬದಲಾಯಿಸಿದೆ. ಹೀಗಾಗಿ ... ಜಾಸ್ತಿ ಆಯಿತು.

ಪ್ರಶ್ನೆ: ಇಷ್ಟೊಂದು ಲಾಭವನ್ನು ನಿರೀಕ್ಷಿಸಿದ್ದಿರಾ?

ಉ: ನಾವು ಹಾಕಿದ ಹಣ ವಾಪಸ್ ಬಂದರೆ ಸಾಕು ಎಂದು ಅಂದುಕೊಂಡಿದ್ದೆವು. ಖಂಡಿತವಾಗಿಯೂ ಇಷ್ಟು ದೊಡ್ಡ ಲಾಭ ನಿರೀಕ್ಷಿಸಿರಲಿಲ್ಲ.

ಪ್ರಶ್ನೆ: ಈ ಲಾಭದಿಂದ ಮತ್ತೆ ಸಿನಿಮಾ ಮಾಡುವ ಯೋಜನೆ ಇದೆಯೇ?

ಉ: ಸಿನಿಮಾ ಬಿಡುಗಡೆಯಾಗುವ ಮೊದಲೇ ವರ್ಷಕ್ಕೊಂದು ಇಂತಹ ಚಿತ್ರವನ್ನು ನಮ್ಮ ಬ್ಯಾನರ್‌ನಲ್ಲಿ ಮಾಡಬೇಕೆಂದು ಆಲೋಚಿಸಿದ್ದೆವು. ಈಗ ನನ್ನ ಸಹಾಯಕ ನಿರ್ದೇಶಕ ಹರೀಶ್ 'ಬಜಾರ್' ಎಂಬ ಹೊಸ ಚಿತ್ರವನ್ನು ನಿರ್ದೇಶಿಸಲಿದ್ದಾನೆ. ಅದಾದ ನಂತರ ನನ್ನ ಚಿತ್ರದ ನಾಯಕ ನಟ ರಕ್ಷಿತ್ ಶೆಟ್ಟಿ ಕೂಡ ಒಂದು ಚಿತ್ರವನ್ನು ನಿರ್ದೇಶಿಸಲಿದ್ದಾನೆ. ಆ ಚಿತ್ರದ ಹೆಸರು 'ಉಳಿದುಕೊಂಡವರು ಅಂದುಕೊಂಡಂತೆ'.

ಪ್ರಶ್ನೆ: ನಿಮ್ಮ ಚಿತ್ರಕ್ಕೆ ಗಾಂಧಿನಗರದ ಪ್ರತಿಕ್ರಿಯೆ ಹೇಗಿತ್ತು?

ಉ: ಈ ಚಿತ್ರವನ್ನು ಹಂಚಿಕೆ ಮಾಡಲು ಯಾರೂ ಮುಂದೆ ಬಂದಿರಲಿಲ್ಲ. ಆ ಕಾರಣಕ್ಕೆ ನಾವೇ ಚಿತ್ರವನ್ನು ಬಿಡುಗಡೆ ಮಾಡಿದೆವು. ನಮ್ಮನ್ನು ಪ್ರೋತ್ಸಾಹಿಸುವ ಬದಲು ಗಾಂಧಿನಗರದವರು ಚಿತ್ರದ ಬಗ್ಗೆ ಅಪನಂಬಿಕೆ ತೋರಿಸಿದ್ದೇ ಹೆಚ್ಚು.

ಪ್ರಶ್ನೆ: ನಿಮ್ಮ ಚಿತ್ರ ಹೊಸಬರ ಚಿತ್ರ ಎಂಬ ಕಾರಣಕ್ಕೆ ಟಿ.ವಿ.ಯವರು ಖರೀದಿಸಲಿಲ್ಲವೇ?

ಉ: ಹಾಗೇನಿಲ್ಲ, ನಮ್ಮ ಚಿತ್ರಕ್ಕೆ ಆರಂಭದಲ್ಲೇ 50 ಲಕ್ಷದ ಆಹ್ವಾನವನ್ನು ನೀಡಿದ್ದರು. ಆದರೆ ನಾವು ಯಾರಿಗೂ ಟಿವಿ ಮತ್ತು ಸ್ಯಾಟ್‌ಲೈಟ್ ರೈಟ್ಸ್ ನೀಡಿರಲಿಲ್ಲ, ಈಗ ಒಂದು ಕೋಟಿ 50 ಲಕ್ಷ ಆಫರ್ ಮಾಡುತ್ತಿದ್ದಾರೆ. ನಾವು ಇನ್ನೂ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ.


ಪ್ರಶ್ನೆ: ಈ ಚಿತ್ರ ಯಶಸ್ಸು ಕಂಡಿದ್ದಕ್ಕೆ ನಿಮಗೆ ಏನು ಅನಿಸುತ್ತಿದೆ?

ಉ: ನಾನು ನಿಜಕ್ಕೂ ಪುಳಕನಾಗಿದ್ದೇನೆ. ಜನರ ಮತ್ತು ಪ್ರೇಕ್ಷಕರ ಪ್ರೋತ್ಸಾಹ ನೋಡಿ ಖುಷಿಯಾಗಿದೆ. ನಾನು ಅವರಿಗೆ ಋಣಿಯಾಗಿದ್ದೇನೆ. ಯಾಕೆಂದರೆ ಸಂಪೂರ್ಣವಾಗಿ ಹೊಸಬರೇ ಸೇರಿ ಮಾಡಿರುವ ನಮ್ಮ ಈ ಸಿನಿಮಾವನ್ನು ಜನರು ಈ ರೀತಿಯಲ್ಲಿ ಮೆಚ್ಚಿ ಗೆಲ್ಲಿಸುತ್ತಾರೆ ಎಂದು ನಾನು ಭಾವಿಸಿರಲಿಲ್ಲ.

ಪ್ರಶ್ನೆ: ನಿಮ್ಮ ಚಿತ್ರ ಇಂಗ್ಲಿಷ್‌ನ 'ಫಿಫ್ಟಿ ಫಸ್ಟ್ ಡೇಟ್ಸ್' ಸಿನಿಮಾದ ರಿಮೇಕ್ ಎಂಬ ಆರೋಪ ಇದೆಯಲ್ಲಾ?

ಉ: ನಾನು ಇಂಗ್ಲಿಷ್ ಸಿನಿಮಾಗಳನ್ನು ನೋಡುವ ಹವ್ಯಾಸ ಇಟ್ಟುಕೊಂಡಿಲ್ಲ. ವಾಸ್ತವ ಮತ್ತು ಕಲ್ಪನೆ ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ಕಥೆ ಬರೆದೆ. ಆದರೆ ನನ್ನ ಕಥೆ ಓದಿದ ನಂತರ ನಾಯಕ ರಕ್ಷಿತ್ "ಈ ತರಹದ ಇಂಗ್ಲಿಷ್ ಚಿತ್ರ ಇದೆ. ಈ ರೋಗಕ್ಕೆ ಒಂದು ಹೆಸರಿದೆ. ಅದನ್ನೇ ಯಾಕೆ ಚಿತ್ರದಲ್ಲಿ ಅಳವಡಿಸಬಾರದು?" ಎಂದು ಸಲಹೆ ನೀಡಿದರು. ಆ ನಂತರ ನಾನು ಕ್ಲೈಮಾಕ್ಸ್‌ನ್ನು ಬದಲಾಯಿಸಿದ್ದು ನಿಜ. ಆದರೆ ಆ ಚಿತ್ರವನ್ನು ನೋಡಿ ನಾನು ನನ್ನ ಸಿನಿಮಾವನ್ನು ಮಾಡಲಿಲ್ಲ. •

ಕಂಗ್ರಾಟ್ಸ್ ಸುದೀಪ್




ಕಳೆದ ವರ್ಷ ಕೊನೆಯ ಬಾಲ್‌ನಲ್ಲಿ ಒಂದು ರನ್ನಿನ ಅಂತರದಲ್ಲಿ ತಮಿಳುನಾಡು ತಂಡದ ವಿರುದ್ಧ ಸುದೀಪ್ ಅವರ ಕ್ರಿಕೆಟ್ ತಂಡ ಸೋಲು ಅನುಭವಿಸಿದ್ದು ನಿಮಗೆ ನೆನಪಿರಬಹುದು. ಆದರೆ ಈ ಬಾರಿ ಸುದೀಪ್ ಅಂತಹ ಅವಕಾಶವನ್ನು ಎದುರಾಳಿ ತಂಡಕ್ಕೆ ಕೊಡದೆ ಭಾರೀ ಅಂತರದಿಂದ ಕರ್ನಾಟಕ ತಂಡಕ್ಕೆ ಜಯ ತಂದುಕೊಟ್ಟಿದ್ದಾರೆ.

ಕಳೆದ ವರ್ಷ 'ಈಗ' ಎಂಬ ತೆಲುಗು ಚಿತ್ರದಲ್ಲಿ ಖಳನಾಯಕನಾಗಿ ನಟಿಸಿ ಭಾರತೀಯ ಚಿತ್ರರಂಗದ ದೊಡ್ಡ ದೊಡ್ಡ ನಟರ ಗಮನ ಸೆಳೆದ ಸುದೀಪ್ ಈ ಬಾರಿ ಕರ್ನಾಟಕ ತಂಡವನ್ನು ಸೆಲೆಬ್ರಿಟಿ ಕ್ರಿಕೆಟ್‌ನಲ್ಲಿ ಗೆಲ್ಲಿಸುವ ಮೂಲಕ ಮತ್ತೊಮ್ಮೆ ಭಾರತೀಯ ಚಿತ್ರರಂಗದ ದಿಗ್ಗಜರು ಕರ್ನಾಟಕದತ್ತ ನೋಡುವಂತೆ ಮಾಡಿದ್ದಾರೆ.

ಸುದೀಪ್ ತಂಡ ಈ ಸಾರಿ ಗೆಲ್ಲಲೇ ಬೇಕು ಎಂದು ಪಣ ತೊಟ್ಟಂತಿತ್ತು, ಆ ಕಾರಣಕ್ಕೆ ಅವರ ತಂಡ ಸುಮಾರು 45 ದಿನಗಳ ಕಾಲ ಬೆಳಗಿನ ಜಾವ 6 ಗಂಟೆಗೆ ಕ್ರೀಡಾಂಗಣದಲ್ಲಿ ಕ್ರಿಕೆಟ್ ಅಭ್ಯಾಸವನ್ನು ಮಾಡಿತ್ತು, ಬಹುಶಃ ಅಂತಹ ಕಠಿಣ ಅಭ್ಯಾಸದ ಫಲವಾಗಿಯೇ ಸುದೀಪ್ ತಂಡ ಪ್ರಶಸ್ತಿ ಗೆದ್ದಿದೆ. ಕಳೆದ ಎರಡು ವರ್ಷ ರನ್ನರ್ ಅಪ್ ಪ್ರಶಸ್ತಿಯನ್ನು ಗೆದ್ದಿದ್ದ ಸುದೀಪರ ತಂಡ ಈ ಬಾರಿ ಚಾಂಪಿಯನ್ ಎಂದೆನಿಸಿಕೊಂಡಿದೆ. ಕಂಗ್ರಾಟ್ಸ್ ಸುದೀಪ್! •


'ಲೂಸ್'ಗಳ ಹೊಸ 'ಟೋಪಿ'



ಕನ್ನಡ ಚಿತ್ರರಂಗದಲ್ಲಿ ಕ್ರಿಯೇಟಿವಿಟಿಗೆ ಯಾರ ಕೊರತೆಯೂ ಇಲ್ಲ, ವಿಪರ್ಯಾಸದ ಸಂಗತಿಯಾವುದೆಂದರೆ ತಮ್ಮ ಈ ಕ್ರಿಯಾಶೀಲತೆಯನ್ನು ತಮ್ಮ ಸಿನಿಮಾಗಳಲ್ಲಿ ತೋರುವ ಬದಲಾಗಿ ನಮ್ಮ ಚಿತ್ರರಂಗದವರು ಅದನ್ನು ಗಿಮ್ಮಿಕ್ಕು ಮಾಡುವುದರಲ್ಲಿ ಅಲ್ಲ, ಅಗ್ಗದ ಪ್ರಚಾರ ಪಡೆಯುವುದರಲ್ಲಿ ಮಾತ್ರ ತೋರುತ್ತಿದ್ದಾರೆ.

ಉದಾಹರಣೆಗೆ, ಈ ವಾರ ಬಿಡುಗಡೆಯಾಗುತ್ತಿರುವ ಉಪೇಂದ್ರ ನಾಯಕನಾಗಿ ನಟಿಸಿರುವ 'ಟೋಪಿವಾಲ' ಚಿತ್ರದ ಜಾಹೀರಾತು. ಈ ಜಾಹೀರಾತನ್ನು, ಅದರ ವಾಲ್ ಪೋಸ್ಟರ್ ಅನ್ನು, ಉಲ್ಟಾ ಪ್ರಕಟಿಸಲಾಗಿದೆ. ಇದು ಆ ಸಿನಿಮಾದ ನಿರ್ದೇಶಕ ಶ್ರೀನಿವಾಸ್ ಅವರ 'ಬ್ರಿಲಿಯಂಟ್' ಐಡಿಯಾ ಅಂತೆ.

ಹಾಗೆಯೇ 'ಲೂಸ್‌ಗಳು' ಎಂಬ ಚಿತ್ರದ ವಾಲ್ ಪೋಸ್ಟರ್‌ನಲ್ಲೂ ಅಕ್ಷರಗಳನ್ನು ಯದ್ವಾತದ್ವಾ ಪ್ರಕಟಿಸಲಾಗಿದೆ. ಇದು ಕೂಡ ಈ ಚಿತ್ರವನ್ನು ನಿರ್ದೇಶಿಸಿರುವ ಹೊಸಬ ಅರುಣಾ ಅವರ ಐಡಿಯಾವಂತೆ. ಆದರೆ ಆ ಪೋಸ್ಟರ್ ಅನ್ನು ನೋಡಿದ ಜನ ಮಾತ್ರ 'ಈ ಚಿತ್ರವನ್ನು ನಿಜಕ್ಕೂ ಲೂಸ್‌ಗಳೇ ಮಾಡಿರಬೇಕು' ಎಂದು ಗೇಲಿ ಮಾಡುತ್ತಿರುವುದು ಸುಳ್ಳಲ್ಲ.



ವಾಸ್ತವಾಗಿ ಸಿನಿಮಾದ ಪೋಸ್ಟರ್‌ಗಳು ಪ್ರೇಕ್ಷಕರನ್ನು ಆಕರ್ಷಿಸುವಂತಿರಬೇಕು. ಅದು ಬಿಟ್ಟು ಚಿತ್ರದ ಟೈಟಲ್‌ನ್ನು ಹೇಗೇಗೋ ಬರೆದು, ಅದನ್ನು ಓದಲು ಪ್ರೇಕ್ಷಕ ಕಷ್ಟಪಡಬೇಕೆಂದು ಅಪೇಕ್ಷಿಸುವುದು ಮತ್ತು ಅದನ್ನು ನೋಡಿ ಜನ ಥಿಯೇಟರ್‌ಗೆ ಮುಗಿ ಬೀಳುತ್ತಾರೆಂದು ಈ ಯುವ ನಿರ್ದೇಶಕರು ಭಾವಿಸಿದರೆ ಅದು ಪದ್ದುತನಕ ಪರಮಾವಧಿ ಆಗುತ್ತದೆಯೇ ಹೊರತು ಬೇರೇನಲ್ಲ.

ಹೀಗೆ ಸಿನಿಮಾಗಳಿಗೆ ಚಿತ್ರ ವಿಚಿತ್ರ ಹೆಸರು ಇಡುವುದು, ಟೈಟಲನ್ನು ವಿಚಿತ್ರವಾಗಿ ಬರೆಯುವುದು ಇದೆಲ್ಲಾ ಖಂಡಿತವಾಗಿಯೂ ಕ್ರಿಯೇಟಿವಿಟಿ ಅಲ್ಲ, ಇಂತಹ ಗಿಮಿಕ್‌ಗಳನ್ನು ಮಾಡುವುದನ್ನು ಬಿಟ್ಟು ನೆಟ್ಟಗೆ ಸಿನಿಮಾ ಮಾಡುವತ್ತ ಈ ಜನ ಗಮನ ಹರಿಸಿದರೆ ಎಲ್ಲರಿಗೂ ಒಳಿತು.

● ಶೆಣೈ

... ಪ್ರಶಂಸಿಸಿದರೂ ನಿಮ್ಮ ತಂಡದ ಕೊಡ ...ವುದಿಲ್ಲ ಎಂದು. ಮನಸ್ಸು ತುಂಬಿ ಬಂದು ತುಳುಕಿದ ...ಗಳಿವು.

ನಿಲುವುಗಳು ಹೇಗಿರಬೇಕೆಂದು ಸಾಧ್ಯವಾದರೆ ಪ್ರತಿಕ್ರಿಯಿಸಿ.

- ರವಿಕುಮಾರ್, ಹಾಸನ

...ತ್ರಕರ್ತ ಸಿದ್ದಿಕಿಯನ್ನು ಉಗ್ರಗಾಮಿ ಎಂದು ...ನಿಸಿ ಪೈಪೋಟಿಯಲ್ಲಿ ವರದಿ ಮಾಡಿದ್ದು ಕನ್ನಡಪ್ರಭ, ...ವಾಣಿ ಮೊದಲಾದ ಕೋಮುವಾದಿ ಪತ್ರಿಕೆಗಳು ...ವಲ್ಲ, ಜನಪರ ಪತ್ರಿಕೆ ಪ್ರಜಾವಾಣಿಯೂ ಈ ...ದಲ್ಲಿ ಹಿಂದೆಮುಂದೆ ನೋಡದೆ, ಪೊಲೀಸರು ಹೇಳಿದ ...ಲ್ಲ ಚಾಚೂ ತಪ್ಪದೆ ಪ್ರಕಟಿಸಿತ್ತು. 'ಪತ್ರಕರ್ತನ ಉಗ್ರ ...ರು' ಎಂಬ ತಲೆಬರಹದಡಿಯಲ್ಲಿ ಅದು ಸೆಪ್ಟೆಂಬರ್ ...013 ರಂದು ಪ್ರಕಟಿಸಿದ ವರದಿ ಇಲ್ಲಿದೆ ನೋಡಿ. ... ಸಿದ್ದಿಕಿ ಬಿಡುಗಡೆಯಾದಾಗ ಅದೇ ಪತ್ರಿಕೆ ಇಂತಹ ...ಮರುಕಳಿಸದಿರಲಿ ಎಂದು ಸಂಪಾದಕೀಯದಲ್ಲಿ ಕರೆ ...ತ್ತು, ತಪ್ಪು ಮಾಡಿದವರು ಯಾರು?

- ಶ್ರೀನಿವಾಸ ಕಾರ್ಕಳ, ಮಂಗಳೂರು

...ೊನ್ನೆ ನಾನು ಟೌನ್‌ಹಾಲ್ ಮುಂದೆ '...ದಂಡನೆಯನ್ನು ವಿರೋಧಿಸೋಣ', 'ಮರಣದಂಡನೆಗೆ ...' ಎಂದು ಕೂಗಿ ಬಂದಿದ್ದೆ. ಮರಣದಂಡನೆ ಏಕೆ ...ಧಿಸಬೇಕೆಂದು ಹಿರಿಯರಲ್ಲಿ ಚರ್ಚಿಸಿದೇನಾದರೂ ... ಕೆಲವು ಗೊಂದಲಗಳಿದ್ದವು. ...ಗಳನ್ನು ಬಿ.ಚಂದ್ರೇಗೌಡರ '...ಂದಾಣ' ಅಂಕಣದಲ್ಲಿ ಪಾಟಿಸ್ಸೆ, ... ಉಗ್ರಿ... ಎಲ್ಲರೂ ನನ್ನ ...ಮಾನಗಳನ್ನೆ ಮಾತನಾಡಿದ್ದಾರೆ. ... ಓದುವಾಗ ನನ್ನ ಗೊಂದಲಕ್ಕೆ ...ಾರ ಸಿಗಬಹುದೆಂದು ...ಕೊಂಡೆ. ಆದರೆ ಲೇಖನ "...ಷ್ಟ್ ಬಂಟರನ್ನು ಆದಷ್ಟು ಬೇಗ ...ಿದ್ರೆ ನನಗಂತೂ ಸಮಾಧಾನ" ... ಮುಗಿಯುತ್ತದೆ. ಇದು ...ಕರದ್ದೇ ಮಾತುಗಳಾಗಿದ್ದರೆ ...ಾದಂಡನೆ ಬಗ್ಗೆ ನನ್ನ...



- ಸರೋವರ್ ಬೆಂಕೀಕೆರೆ, ಈ ಮೇಲ್ ಮೂಲಕ

ಅಧ್ಯಕ್ಷ ಸಿಸಿಬಿ

ಮತಿ ಉರ್ ರೆಹಮಾನ್ ಸಿದ್ದಿಕಿ ಎಂಬ ಪತ್ರಕರ್ತ ಭಯೋತ್ಪಾದನೆಯ ಆಪಾದನೆಯಿಂದ ಕೋರ್ಟಿನಲ್ಲಿ ಬಿಡುಗಡೆಗೊಂಡ ಮೇಲೆ ಕರ್ನಾಟಕದ ಸಿಸಿಬಿಯ ದಕ್ಷತೆ ಹಾಗೂ ಪ್ರಾಮಾಣಿಕತೆಯ ಬಗ್ಗೆ ಅನೇಕ ಪ್ರಶ್ನೆಗಳಿದ್ದಿವೆ.



ಸಿಸಿಬಿ, ಸಿಐಡಿ, ಸಿಓಡಿ ಹೀಗೆ ಮೂರು-ಮೂರು ಹೆಸರುಗಳಿಂದ ಜನರಲ್ಲಿ ಗೊಂದಲ ಹುಟ್ಟಿಸುವ ಕರ್ನಾಟಕದ ಗುಪ್ತಚರ ಇಲಾಖೆಯು ನಂಬಿಕೆಗೆ ಅರ್ಹವಾಗಿಲ್ಲವೆಂದು ಇನ್ನೂ ಹಲವು ಪ್ರಕರಣಗಳಲ್ಲಿ ಸಾಬಿತಾಗಿದೆ. 'ಗಿನ್ನೆಸ್ ದಾಖಲೆ' ಸ್ಥಾಪಿಸಿರುವ ಬೇಲಿಕೇರಿ ಅದಿರು ಕಳ್ಳತನದ ಕೇಸಿನಲ್ಲಿ ಒಂದು ಲಕ್ಷ ಪುಟಗಳನ್ನು ದಾಖಲೆಗಳನ್ನು ಪರಿಶೀಲಿಸಿ, ಒಂದೂವರೆ ವರ್ಷ ತನಿಖೆ ನಡೆಸಿದ್ದರೂ ಕೊನೆಗೆ ನಿಜವಾದ ಅಪರಾಧಿಗಳನ್ನು ಖುಲಾಸೆಗೊಳಿಸಿ ಕಾರವಾರ ಬಂದರಿನ ಕೆಲವು ಪುಟಗೋಸಿ ಅಧಿಕಾರಿಗಳ ಮೇಲೆ ಚಾರ್ಜ್‌ಶೀಟ್ ಹಾಕಿ ಕೃತಾರ್ಥರಾಗಿದ್ದು ಇದೇ ಸಿಸಿಬಿ.

ಸಿಸಿಬಿಯ ಬಾಲಿಶತನಕ್ಕೆ ಅಪ್ಪಟ ಉದಾಹರಣೆಯೊಂದು ನಮ್ಮ ಬೆಳಗಾವಿಯಲ್ಲಿ ನಡೆದಿದೆ. ಮೂರುವರೆ ವರ್ಷಗಳ ಹಿಂದೆ ನಮ್ಮ ನೆರೆಮನೆಯ 60 ವರ್ಷ ದಾಟಿದ ಸಹೃದಯಸ್ಥರ ಕೊಲೆಯನ್ನು ಗೋಕಾಕ್ ಹತ್ತಿರ ಸುಪಾರಿ ಕೊಟ್ಟು ಮಾಡಿಸಲಾಗಿತ್ತು. ಕೊಲೆಗಾರರು ಮಾಡಿದ್ದ ಈ ಎಲ್ಲ ಮೂರ್ಖ ತಪ್ಪುಗಳನ್ನು ಗಮನಿಸಿ: ಮೃತ ವ್ಯಕ್ತಿಯ ಕುತ್ತಿಗೆಗೆ ಹಗ್ಗ ಕಟ್ಟದೇ ಸೊಂಟಕ್ಕೆ ಹಗ್ಗ ಕಟ್ಟಿ ಶವ ನೇತಾಡಿಸಲಾಗಿತ್ತು, ಈ ಜಗತ್ತಿನಲ್ಲಿ ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಆತ್ಮಹತ್ಯೆ ಮಾಡಿಕೊಂಡವರು ಯಾರಾದರೂ ಇದ್ದಾರೆಯೇ? ಮೃತನ ಕಿಸೆಯಲ್ಲಿ ಒಂದು ಪತ್ರ ಅಚ್ಚ ಕನ್ನಡದಲ್ಲಿ ಇತ್ತು, ಕನ್ನಡ ಬಾರದ ಮರಾಠಿ ವ್ಯಕ್ತಿ ಎಂದಾದರೂ ಶುದ್ಧ ಗ್ರಾಂಥಿಕ ಕನ್ನಡದಲ್ಲಿ ಆತ್ಮಹತ್ಯೆ ಪತ್ರ ಬರೆಯಲು ಸಾಧ್ಯವೇ? ಅಷ್ಟೇ ಅಲ್ಲ ಈ ಪತ್ರ ಕಂಪ್ಯೂಟರ್‌ನಲ್ಲಿ ಟೈಪಾಗಿತ್ತು. ಜೀವನದಲ್ಲಿ ಎಂದೂ ಕಂಪ್ಯೂಟರ್ ಮುಟ್ಟದೇ ಇದ್ದ ವೃದ್ಧರೊಬ್ಬರು ಆತ್ಮಹತ್ಯೆ ಪತ್ರವನ್ನು ಒಂದೂ ಶಬ್ದ ತಪ್ಪಿಲ್ಲದೆ, ಅದೂ ತನಗೆ ಗೊತ್ತಿಲ್ಲದ ಭಾಷೆಯಲ್ಲಿ, ಅದೂ ಕಂಪ್ಯೂಟರ್‌ನಲ್ಲಿ ತಾನೇ ಬರೆಯಲು ಹೇಗೆ ಸಾಧ್ಯ? ಯಾವನಾದರೂ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ತನ್ನ ಉಸಿರು ಕಟ್ಟುವಂತೆ ತನ್ನ ಗಂಟಲವರೆಗೆ ತಾನೇ ಬಾಯಿಯೊಳಗೆ ಬಟ್ಟೆ ತುರುಕಿಕೊಳ್ಳುತ್ತಾನೆಯೇ?

ಕೊಲೆಗಾರರು ಇಷ್ಟೆಲ್ಲಾ ಬಾಲಿಶ ತಪ್ಪುಗಳನ್ನು ಮಾಡಿದ್ದರೂ, ಕೊಲೆಗೆ ಮುನ್ನ 18 ಕರೆಗಳನ್ನು ಮೃತನ ಫೋನಿಗೆ ಮಾಡಿದ್ದರೂ ಸಿಸಿಬಿ ಪೊಲೀಸರಿಗೆ ಇವೆಲ್ಲ ಪುರಾವೆ ಎನಿಸಲೇ ಇಲ್ಲ. 2008-09ರಲ್ಲಿ ಬೆಳಗಾವಿಯ 150 ನಿರುದ್ಯೋಗಿ ಯುವಕರಿಗೆ ಬೆಂಗಳೂರಿನ ಮಹಾನಗರ ಪಾಲಿಕೆಯಲ್ಲಿ ಖಾಯಂ ನೌಕರಿ ಕೊಡಿಸುವುದಾಗಿ ಬೆಂಗಳೂರಿನ ಒಂದು ಚೋರರ ತಂಡ ನಿರುದ್ಯೋಗಿ ಯುವಕರಿಂದ ತಲಾ ಎರಡು ಲಕ್ಷ ರೂಪಾಯಿ ಪಡೆದು ಮಾಡಿದ್ದ ಮೋಸವನ್ನು ಪುರಾವೆ ಸಹಿತ ಹಿಡಿದುಕೊಡುವ ಪ್ರಯತ್ನವನ್ನು ಆ ಗೃಹಸ್ಥ ಮಾಡಿದ್ದೇ ಅವನ ಕೊಲೆಗೆ ಕಾರಣವಾಗಿತ್ತು, ಬೆಳಗಾವಿಯ ಮರಾಠಿ ಪತ್ರಿಕೆಗಳು ಇದನ್ನು ಸುಪಾರಿ ಕೊಲೆಯೆಂದು ಪುರಾವೆಸಹಿತ ವರದಿ ಮಾಡಿದ್ದರೂ ಪೊಲೀಸರು ಇದು ಆತ್ಮಹತ್ಯೆ ಎಂದು ಬರೆದು ಫೈಲ್‌ಅನ್ನು ಬಂದ್ ಮಾಡಿದ್ದರು.

ಕಾರಣ ಇದರಲ್ಲಿ ಪ್ರಭಾವಿಗಳ ಕೈವಾಡವಿತ್ತು, ಇಷ್ಟು ಪಕ್ಷಪಾತದಿಂದ ಪೆದ್ದು-ಪೆದ್ದಾಗಿ ಕೆಲಸ ಮಾಡುವ ಸಿಸಿಬಿ-ಸಿಐಡಿಯಿಂದ ನಿಷ್ಪಕ್ಷ ತನಿಖೆ ಎಂದೂ ಸಾಧ್ಯವಿಲ್ಲವೇನೋ. ರಾಜಕಾರಣಿಗಳ ಕೈಗೊಂಬೆಯಾಗಿರುವ ಇವರಿಗೆ ಇನ್ನೆಷ್ಟು ಸಿದ್ದಿಕಿಗಳು ಬಲಿಯಾಗಬೇಕಾಗಿದೆಯೋ!

- ಗಿರೀಶ್ ಟಿ.ಜೆ. ಬೆಳಗಾವಿ

ದೇಶಕ್ಕೆ ಮುಸ್ಲಿಮರ ಕೊಡುಗೆ

ಪತ್ರಕರ್ತ ಸಿದ್ದಿಕಿ ಬಿಡುಗಡೆ ಬಗ್ಗೆ ನಿಮ್ಮ ಪತ್ರಿಕೆ ಬರೆದಿರುವ ವರದಿಗಳಿಗೆ ನಾವು ಋಣಿಯಾಗಿದ್ದೇವೆ. ಈ ದೇಶದಲ್ಲಿ ಮುಸ್ಲಿಂ ಆಗಿ ಹುಟ್ಟೋದೆ ತಪ್ಪಾ? ಆಕಸ್ಮಾತ್ ಹುಟ್ಟಿದ್ದರೂ ಮನುವಾದಕ್ಕೆ ವಿಧೇಯಕನಾಗಿ ಬಾಳಬೇಕು ಎಂಬ ಅಜೆಂಡಾವನ್ನು ಈ ದೇಶದಲ್ಲಿ ತರುವ ಉದ್ದೇಶದಿಂದ ಮುಸ್ಲಿಮರಿಗೆ ಏನೆಲ್ಲಾ ಕಿರುಕುಳ ನೀಡಲಾಗುತ್ತಿದೆ.

ಹಿಂದೂತ್ವವಾದಿಗಳು ಈ ದೇಶದ ಮುಸ್ಲಿಮರನ್ನು ದೇಶದ್ರೋಹಿಗಳು ಎಂದು ಅದೆಷ್ಟೇ ಬಿಂಬಿಸಿದರೂ ಈ ದೇಶದ ಪ್ರಜ್ಞಾವಂತ ಜನರು ನಿಮ್ಮ ಕುಟಿಲ ಸಿದ್ಧಾಂತವನ್ನು ಬುಡಮೇಲು ಮಾಡುವುದರಲ್ಲಿ ಸಂಶಯವಿಲ್ಲ. ಈ ದೇಶಕ್ಕೆ ಮುಸ್ಲಿಮರ ಆಗಮನದಿಂದ ಇತ್ತೀಚಿನವರೆಗೆ ಇಲ್ಲಿಯ ಸಂಸ್ಕೃತಿ, ಆಡಳಿತ, ಸ್ವಾತಂತ್ರ್ಯ ಹೋರಾಟ, ಸಹೋದರತೆ ಸಹಬಾಳ್ವೆಗೆ ಅಪಾರ ಕೊಡುಗೆ ನೀಡುತ್ತಾ ಬಂದಿದ್ದಾರೆ. ಅಲ್ಲದೆ ಸಂದರ್ಭ ಬಂದಾಗ ತಮ್ಮ ಪ್ರಾಣವನ್ನು ನೀಡಿ ಈ ದೇಶಕ್ಕೆ ನಿಷ್ಠೆಯನ್ನು ತೋರಿದ್ದಾರೆ ಹಾಗೂ ತೋರುತ್ತಿದ್ದಾರೆ.

ಇಲ್ಲಿ ಮನುವಾದವನ್ನು ತರಲು ಶತಾಯಗತಾಯ ಪ್ರಯತ್ನ ಪಡುತ್ತಿರುವ ಚೆಡ್ಡಿ ಕುಡಿಗಳಿಂದ ಹಿಡಿದು ತನ್ನ ಹೊಟ್ಟೆಯ ಒಳಗೆ ಇಟ್ಟುಕೊಂಡಿರುವ ಹೊಲಸನ್ನು ತಮ್ಮ ಪತ್ರಿಕೆಗಳಲ್ಲಿ ವಾಕರಿಕೆ ಮಾಡಿಕೊಳ್ಳುವರನ್ನೂ ಒಳಗೊಂಡಂತೆ ಈ ದೇಶಕ್ಕೆ ಅಪಾಯಕಾರಿಯಾಗಿರುವ, ಮಾರಕವಾಗಿರುವ ಎಲ್ಲಾ ರೀತಿಯ ಭಯೋತ್ಪಾದಕರನ್ನು ತಡೆಯಲು ಈ ದೇಶದ ಪ್ರತಿಯೊಬ್ಬ ದೇಶಭಕ್ತ ಮುಸ್ಲಿಮರು ಸಿದ್ಧರಾಗಿರುತ್ತಾರೆ ಎಂಬುದನ್ನು ಹಿಂದೂತ್ವವಾದಿಗಳು ನೆನಪಿಟ್ಟುಕೊಳ್ಳಬೇಕು.

- ಕೆ.ಕೆ. ವಕೀಲರು, ಈ ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 27-03-2013 RNI No. KARKAN2005/14



ಹ್ಯಾಪಿ ಬರ್ತ್‌ಡೇ....


ಬರುವ ಮಾರ್ಚ್ 17ರಂದು ಪುನೀತ್ ರಾಜ್‌ಕುಮಾರ್ ಮತ್ತು ಜಗ್ಗೇಶ್ ತಮ್ಮ ಹುಟ್ಟುಹಬ್ಬವನ್ನು ಆಚರಿಸಲಿದ್ದಾರೆ.

ಅವತ್ತು ಜಗ್ಗೇಶ್ ಅವರಿಗೆ 50 ವರ್ಷ ತುಂಬುತ್ತದೆ. ಅರ್ಧ ಶತಕ ಹೊಡೆದದ್ದನ್ನು ಸಂಭ್ರಮದಿಂದ ಆಚರಿಸಬೇಕೆಂದು ಜಗ್ಗೇಶ್ ಪ್ಲಾನ್ ಹಾಕಿಕೊಂಡಿದ್ದರು. ಅದರಲ್ಲೂ ವಿಧಾನಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಜಗ್ಗೇಶ್ ರಾಜಕಾರಣಿಗಳನ್ನು ಮತ್ತು ಸಿನಿಮಾ ಜಗತ್ತಿನ ತಾರೆಯರನ್ನು ಒಂದೆಡೆ ಕಲೆಹಾಕಿ ತನ್ನ 'ಜನ'ಶಕ್ತಿಯನ್ನು ಪ್ರದರ್ಶಿಸಲು ಸಿದ್ಧರಾಗಿದ್ದರು. ಆದರೆ ಈ ವರ್ಷ ಅವರ ತಂದೆ ನಿಧನ ಹೊಂದಿದ್ದರಿಂದ ಅವರು ತಮ್ಮ '50ರ ಸಂಭ್ರಮಕ್ಕೆ' ತಡೆಹಾಕಿದ್ದಾರೆ. ಸಾರ್ವಜನಿಕ ಸಮಾರಂಭದ ಬದಲಾಗಿ ತಮ್ಮ ಮನೆಯಲ್ಲಿ ಸಂಬಂಧಿಗಳ ಸಮ್ಮುಖದಲ್ಲಿ ಹೋಮ ಮತ್ತು ಪೂಜೆ ಮಾಡುವ ಮೂಲಕ ಅವರು ತಮ್ಮ ಹುಟ್ಟುಹಬ್ಬವನ್ನು ಖಾಸಗಿಯಾಗಿ ಆಚರಿಸುವ ನಿರ್ಣಯಕ್ಕೆ ಬಂದಿದ್ದಾರೆ.

ಪುನೀತ್ ಎಂದಿನಂತೆ ಅಭಿಮಾನಿಗಳ ಸಮ್ಮುಖದಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಲಿದ್ದಾರೆ. ಈಗ ಅವರು ಸುವರ್ಣ ಚಾನೆಲ್‌ನಲ್ಲಿ ನಡೆಸಿಕೊಡುತ್ತಿರುವ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಭಾಗವಹಿಸುವ ಜನರೂ ಈ ಸಂಭ್ರಮದಲ್ಲಿ ಭಾಗವಹಿಸಲಿದ್ದಾರಂತೆ. ಜೊತೆಗೆ ಪುನೀತ್ ಹುಟ್ಟುಹಬ್ಬದ ದಿನದಂದೇ ಅವರ ಹೊಸ ಚಿತ್ರದ ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾಗಲಿದೆ. ಅಷ್ಟೇ ಅಲ್ಲ, ಕುರುಬರ ಹಳ್ಳಿಯಲ್ಲಿ ರಾಜ್‌ಕುಮಾರ್ ಅವರ ಕಂಚಿನ ಪುತ್ಥಳಿಯ ಅನಾವರಣ ಸಮಾರಂಭವೂ ನಡೆಯಲಿದೆ.

ಪುನೀತ್ ಮತ್ತು ಜಗ್ಗೇಶ್ ಅವರಿಗೆ ನಮ್ಮ ಕಡೆಯಿಂದ ಹುಟ್ಟುಹಬ್ಬದ ಅಭಿನಂದನೆಗಳು. ○

ಲಾಭದ ಕನಸು ಮುಂದಕ್ಕೆ



ಪುನೀತ್ ರಾಜ್‌ಕುಮಾರ್ ಅವರ ಮುಂದಿನ ಕಾಲ್‌ಶೀಟ್ ಯಾರಿಗೆ ಸಿಗುತ್ತದೆ ಎಂಬ ಕುತೂಹಲ ಕಳೆದ ಹಲವು ತಿಂಗಳುಗಳಿಂದ ಗಾಂಧಿನಗರದಲ್ಲಿ ಇತ್ತು, ಯಾಕೆಂದರೆ ನಿರ್ಮಾಪಕರೊಬ್ಬರಿಗೆ ಪುನೀತ್ ಕಾಲ್‌ಶೀಟ್ ಸಿಕ್ಕರೆ ಅದು ಚಿನ್ನದ ಗಣಿ ಸಿಕ್ಕಿದ್ದಕ್ಕೆ ಸಮ. ಪುನೀತ್ ಕಾಲ್‌ಶೀಟ್‌ಗಾಗಿ ರಾಕ್‌ಲೈನ್ ವೆಂಕಟೇಶ್, ಕನಕಪುರ ಶ್ರೀನಿವಾಸ್, ಸಂದೇಶ್ ನಾಗರಾಜ್ ಸೇರಿದಂತೆ ಅನೇಕ ನಿರ್ಮಾಪಕರು ಪ್ರಯತ್ನಿಸುತ್ತಲೇ ಇದ್ದರು. ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ ಪುನೀತ್ ತಮ್ಮ ಕಾಲ್‌ಶೀಟನ್ನು ಮಲ್ಲೇಶ್ವರದ ಬಿಜೆಪಿ ಶಾಸಕ ಅಶ್ವಥ್ ನಾರಾಯಣರ ಸಹೋದರನಿಗೆ ನೀಡಿದ್ದಾರೆ.

ಈ ಸಿನಿಮಾವನ್ನು ಕರ್ನಾಟಕ ಮೂಲದವರಾದರೂ ತೆಲುಗು ಸಿನಿಮಾರಂಗದಲ್ಲಿ ಹಲವಾರು ಹಿಟ್ ಚಿತ್ರಗಳನ್ನು ನೀಡಿರುವ, ಆಂಧ್ರದ ಚಿರಂಜೀವಿ ತರಹದ ಸೂಪರ್ ಸ್ಟಾರ್‌ಗಳೊಂದಿಗೆ ಕೆಲಸ ಮಾಡಿರುವ ಜಯಂತ್ ಸಿ ಪರಂಜಿ ಎಂಬುವವರು ನಿರ್ದೇಶಿಸಲಿದ್ದಾರೆ. ಅಂದಹಾಗೆ ಈ ಸಿನಿಮಾವನ್ನು ಅಮೆರಿಕದ ನ್ಯೂಯಾರ್ಕ್‌ನಲ್ಲಿ 50 ದಿನಗಳ ಕಾಲ ಶ... ಮಾಡಲಾಗುತ್ತದೆಯಂತೆ. ಅಂದರೆ ಈ ಚಿತ್ರದ ಬಜೆಟ್ ಕನಿಷ್ಟವೆಂದರೂ 15 ಕೋಟಿ ರೂ.ಗಳನ್ನು ದಾಟುತ್ತದೆ.

ಸಾಮಾನ್ಯವಾಗಿ ನಮ್ಮ ಗಾಂಧಿನಗರದ ನಿರ್ಮಾಪಕರು 8 ರಿಂದ 10 ಕೋಟಿ ರೂ.ಗಳ ಬಂಡವಾಳ ಹೂಡಿ ಮಾಡುವ ಬಗ್ಗೆ ಆಲೋಚಿಸುತ್ತಾರೆ. ಆದರೆ ಈ ಚಿತ್ರಕ್ಕೆ ಸುಮಾರು 15 ಕೋಟಿ ರೂಪಾಯಿ ಬಂಡವಾಳ ಹೂಡಬೇಕಾಗಿವುದ... ಪುನೀತ್ ರಾಜ್‌ಕುಮಾರ್ ಗಾಂಧಿನಗರದವರನ್ನು ಬಿಟ್ಟು ಹೊರಗಿನವರಿಗೆ ಕಾಲ್‌ಶೀಟ್ ನೀಡಿದ್ದಾರೆ ಎಂದು ತರ್ಕಿಸಲಾಗ... ಹೇಗಾದರೂ ಮಾಡಿ ಪುನೀತ್ ಕಾಲ್‌ಶೀಟ್ ಪಡೆದು ಭಾರೀ ಲಾಭ ಮಾಡುವ ಕನಸು ಕಾಣುತ್ತಿದ್ದ ಗಾಂಧಿನ... ನಿರ್ಮಾಪಕರ ಕನಸು ಸದ್ಯಕ್ಕೆ ಭಗ್ನವಾಗಿದೆ.

ಭಟ್ಟರ 'ಚಿತ್ರ'-ವಿಚಿತ್ರಗಳು



'ಹಳೆ ಗಂಡನ ಪಾದವೇ ಗತಿ' ಎಂಬ ಸ್ಥಿತಿ ನಿರ್ದೇಶಕ ಯೋಗರಾಜ್ ಭಟ್ಟರದ್ದು ಎಂದು ಹಲವು ಗಾಂಧಿನಗರಿಗಳು ತಮಾಷೆ ಮಾಡುತ್ತಿದ್ದಾರೆ.

ಕೆಲವು ವಾರಗಳ ಹಿಂದೆ ಯೋಗರಾಜ್ ಭಟ್ ಮತ್ತು ಗೋಲ್ಡನ್ ಸ್ಟಾರ್ ಗಣೇಶ್ ಮತ್ತೊಮ್ಮೆ ಸಿನಿಮಾ ಒಂದಕ್ಕೆ ಜೊತೆ ಸೇರಲಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ 'ಬ್ರೇಕಿಂಗ್ ನ್ಯೂಸ್' ತರಹ ಹಬ್ಬಿತ್ತು.

'ಮುಂಗಾರು ಮಳೆ'ಯಲ್ಲಿ ಮೊದಲ ಬಾರಿಗೆ ಒಟ್ಟು ಸೇರಿದ್ದ ಈ ಜೋಡಿ ಆ ನಂತರ 'ಗಾಳಿಪಟ' ಹಾರಿಸಿತ್ತು. 'ಮುಂಗಾರು ಮಳೆ' ದಾಖಲೆಗಳ ಸುರಿಮಳೆಯನ್ನೇ ಸುರಿಸಿದರೆ 'ಗಾಳಿಪಟ' ಕಮರ್ಷಿಯಲ್ ಹಿಟ್ ಆಗಿತ್ತು. ಹೀಗಾಗಿ ಈ ಜೋಡಿ ಮತ್ತೆ ಜೊತೆಗೂಡುವುದು ಸಹಜವಾಗಿ ಗಾಂಧಿನಗರದ ಮಟ್ಟಿಗೆ ದೊಡ್ಡ ಸುದ್ದಿ ಆಗಿತ್ತು. ಆದರೆ ಈ ಸುದ್ದಿ ಬಹಿರಂಗಗೊಂಡ ಸ್ವಲ್ಪ ಸಮಯಕ್ಕೆ ಅದು ಟುಸ್ ಆಗಿತ್ತು.

ಅದಕ್ಕಿಂತ ಮೊದಲು ಸುದೀಪ್ ಮತ್ತು ಯೋಗರಾಜ್ ಭಟ್ ಒಂದು ಚಿತ್ರದಲ್ಲಿ ಒಟ್ಟಾಗಲಿದ್ದಾರೆ ಎಂಬ ಸುದ್ದಿಯೂ ಗಾಂಧಿನಗರದಲ್ಲಿ ಅಲ್ಲಲ್ಲಿ ಕೇಳಿ ಬಂದಿತ್ತು. ಈ ಸುದ್ದಿಗೂ ಅದರದೇ ಆದ ಒಂದು ತೂಕವಿತ್ತು, ಯಾಕೆಂದರೆ ಸುದೀಪ್ ಮತ್ತು ಯೋಗರಾಜ್ ಭಟ್ ಇಬ್ಬರೂ ಬೇಡಿಕೆಯಲ್ಲಿರುವವರು. ಹೀಗಾಗಿ ಈ ಜೋಡಿಯ ಮಿಲನದ ಬಗ್ಗೆ ಗಾಂಧಿನಗರದಲ್ಲಿ ದೊಡ್ಡ ಆಸಕ್ತಿಯಿತ್ತು. ಆದರೆ ಯಾಕೋ ಏನೋ ಈ ಸುದ್ದಿಯೂ ಬಹು ಬೇಗನೆ ಟುಸ್ ಆಗಿತ್ತು.



ಈಗ ಲೇಟೆಸ್ಟ್ ಆಗಿ ಕೇಳಿ ಬರುತ್ತಿರುವ ಸುದ್ದಿ ಎಂಥದ್ದೆಂದರೆ, ಭಟ್ಟರು ಮತ್ತೆ ತಮ್ಮ 'ಡ್ರಾಮಾ' ಚಿತ್ರದ ನಾಯಕ ಯಶ್‌ನನ್ನು ಹಾಕಿಕೊಂಡು ಚಿತ್ರ ಮಾಡಲು ಹೊರಟಿದ್ದಾರಂತೆ. ಸಾಧಾರಣವಾಗಿ ಇದು ಭಟ್ಟರ ಶೈಲಿ ಕೂಡ. ಅವರ ಒಂದು ಚಿತ್ರ ಹಿಟ್ ಆದರೆ ಅವರು ಕೂಡಲೇ ಆ ಚಿತ್ರದ ನಾಯಕನನ್ನು ಹಾಕಿಕೊಂಡು ಇನ್ನೊಂದು ಚಿತ್ರ ಮಾಡಿ ಹಳೆ ಚಿತ್ರದ ಯಶಸ್ಸನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಅದಕ್ಕೆ ಗಣೇಶ್ ಮತ್ತು ದಿಗಂತನನ್ನು ಹಾಕಿಕೊಂಡು ಒಂದರ ಹಿಂದೊಂದು ಚಿತ್ರ ತೆಗೆದದ್ದೇ ಬೆಸ್ಟ್ ಎಕ್ಸಾಂಪಲ್ಸ್.

ಭಟ್ ಮತ್ತು ಯಶ್ ಜೋಡಿಯ ಹೊಸ ಚಿತ್ರವನ್ನು ನಾಲ್ಕು ಜನ ನಿರ್ಮಾಪಕರು ಸೇರಿ ಮಾಡುತ್ತಿರುವುದು ವಿಶೇಷ. ಹಂಚಿಕೆದಾರ ಪ್ರಸಾದ್, ನಿರ್ಮಾಪಕ ಕೆ.ಸಿ.ಎನ್.ಕುಮಾರ್, ಕರಿಸುಬ್ಬು ಮತ್ತು ಸ್ವತಃ ಯೋಗರಾಜ್ ಭಟ್ ಈ ಚಿತ್ರದ ಪಾಲುದಾರರಂತೆ. ಈಗಿನ ಸುದ್ದಿ ಪ್ರಕಾರ ಚಿತ್ರ ಏಪ್ರಿಲ್ 15 ರಂದು ಸೆಟ್ಟೇರಲಿದೆಯಂತೆ.

ಈಗ ಪ್ರಶ್ನೆ ಏನಪ್ಪಾ ಅಂದರೆ ಯಶ್ ಚಿತ್ರ ಮಾಡಲು ನಿಜಕ್ಕೂ ನಾಲ್ಕು ಜನ ಅತಿರಥ ಮಹಾರಥರು ಸೇರುವ ಅಗತ್ಯವಿದೆಯಾ? ಅಷ್ಟೊಂದು ದೊಡ್ಡ ಬಜೆಟ್‌ನ ಚಿತ್ರ ಇದಾ? ○

ಗುಲಾಮನಾಗಲು ಗುರುವಿನ ಹಂಬಲ

'ಗುರು' ಸ್ಥಾನದಲ್ಲಿರುವ ಸಂಗೀತ ನಿರ್ದೇಶಕ ಗುರುಕಿರಣ್ ಈಗ 'ಗುಲಾಮನ' ಸ್ಥಾನದತ್ತ ಸಾಗುತ್ತಿದ್ದಾರೆ. ಏನಪ್ಪಾ ಇದು ಎಂದು ಆತಂಕಗೊಳ್ಳಬೇಡಿ. "ನಿರ್ಮಾಪಕ ಸಿನಿಮಾಗಳಿಗೆ ಹಣ ಹೂಡುವವನಾದರೂ ಆತನನ್ನು ಯಜಮಾನ ಎಂದು ಕರೆಯುವ ಬದಲು ಗುಲಾಮ ಎಂದು ಕರೆಯುವುದೇ ಹೆಚ್ಚು ಸೂಕ್ತ" ಎಂದು ಅನೇಕ ನಿರ್ಮಾಪಕರು ಮಾಡಿದ ತಮಾಷೆಯನ್ನು ಗುರುಕಿರಣ್ ಬಗ್ಗೆ ಹೇಳುತ್ತಿದ್ದೇವಷ್ಟೇ. ಇದರರ್ಥ ಗುರುಕಿರಣ್ ಈಗ



ಸಿನಿಮಾ ನಿರ್ಮಾಪಕರಾಗಲು ಹೊರಟಿದ್ದಾರೆ.

ಕಳೆದ ಮೂರ್ನಾಲ್ಕು ವರ್ಷಗಳಿಂದ ಗುರುವಿಗೆ ಗಾಂಧಿನಗರದಲ್ಲಿ ಅಷ್ಟೊಂದು ಬೇಡಿಕೆ ಇಲ್ಲ. ಈ ಹಿಂ... 'ಗುರು ನಾಮ' ಪಠಿಸುತ್ತಿದ್ದ ನಿರ್ಮಾಪಕರೆಲ್ಲ ಈಗ 'ಹ... ನಾಮ' (ಸಂಗೀತ ನಿರ್ದೇಶಕ ಹರಿಕೃಷ್ಣ) ಜಪಿಸುತ್ತಿದ್ದಾರೆ. ... ಮಾತ್ರವಲ್ಲ ಸದ್ಯ ಹರಿಕೃಷ್ಣ ಕೂಡ ಎರಡು ಸಿನಿಮಾಗಳ... ನಿರ್ಮಿಸುತ್ತಿರುವುದು ಗುರುವಿಗೆ ಸ್ಫೂರ್ತಿ ನೀಡಿರಬಹುದು...

ಅದೇನೇ ಇರಲಿ, ಇಲ್ಲಿಯ ತನಕ ಸಂಗೀತ ನಿರ್ದೇ... ಗೀತ ರಚನೆಕಾರ, ನಟ, ರಸಮಂಜರಿ ಕಾರ್ಯಕ್ರಮಗಳ ... ಜವಾಬ್ದಾರಿ, ಹೀಗೆ ಹಲವಾರು ಅವತಾರಗಳನ್ನು ತಾಳಿ... ಗುರು ಈಗ ನಿರ್ಮಾಪಕರ ಗೆಟಪ್ ತೊಡಲು ಸಜ್ಜಾಗುತ್ತಿದ್ದಾರೆ.

● ಶೇ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com